ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 42 | ಏಪ್ರಿಲ್ 7 ಗುರುವಾರ 2022

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 347 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ಬೋರ್‌ವೆಲ್ ಲಾರಿ ಉರುಳಿ ಬಿದ್ದು ಚಾಲಕ ಸಾವು

ಮತ್ತಿಬ್ಬರಿಗೆ ತೀವ್ರ ಗಾಯ, ಬೋಗಾದಿ ಬಳಿ ರಿಂಗ್ ರಸ್ತೆಯಲ್ಲಿ ದುರ್ಘಟನೆ



ಮೈಸೂರು,ಏ.6(ಆರ್‌ಕೆ)– ಬೋರ್‌ವೆಲ್ ಕೊರೆಯುವ ಲಾರಿ, ಉರುಳಿ ಬಿದ್ದ ಪರಿಣಾಮ ಅದರಡಿ ಸಿಲುಕಿ ಚಾಲಕ ಸಾವನ್ನಪ್ಪಿದ್ದು, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ಬೋಗಾದಿ ಬಳಿ ರಿಂಗ್ ರಸ್ತೆಯಲ್ಲಿ ಸಂಭವಿಸಿದೆ.

ತಮಿಳುನಾಡಿನ ತಿರು ಪುರ್ ನಿವಾಸಿ ಶಣ್ಮುಗಂ (35) ಸ್ಥಳದಲ್ಲೇ ಸಾವನ್ನಪ್ಪಿದವರಾಗಿದ್ದು, ತೀವ್ರವಾಗಿ ಗಾಯಗೊಂಡಿರುವ ಸೋನು ಮತ್ತು ಮುತ್ತುವೇಲು ಎಂಬುವರನ್ನು ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ. ಹಿನಕಲ್ ಕಡೆಯಿಂದ ಬರುತ್ತಿದ್ದ ಲಾರಿಯು, ಬೋಗಾದಿ ಸಿಗ್ನಲ್ ಲೈಟ್ ಸಮೀಪದ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಬೆಳಗ್ಗೆ 9.30 ಗಂಟೆ ವೇಳೆಗೆ ಬಲಬದಿಗೆ ಉರುಳಿಬಿದ್ದಿತು.

ಆ ವೇಳೆ ಹೊರಕ್ಕೆ ಜಿಗಿಯಲೆತ್ನಿಸಿದ ಚಾಲಕ ಶಣ್ಮುಗಂ ಲಾರಿಯಡಿ ಸಿಲುಕಿ ಸ್ಥಳದಲ್ಲೇ ಸಾವನ್ನಪ್ಪಿದ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ಸೋನು ಹಾಗೂ ಮುತ್ತುವೇಲು ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಲಾರಿ ಉರುಳಿ ಬೀಳುವ ವೇಳೆ ಬಲಬದಿಯ ಮೀಡಿಯನ್‌ನಲ್ಲಿ ಬೆಳೆದಿರುವ ಮೂರು ಬೇವಿನ ಮರಕ್ಕೆ ಅಪ್ಪಳಿಸಿದ್ದರಿಂದ ಅವು ನೆಲಸಮಗೊಂಡಿವೆ. ಮರಗಳು ತಡೆಯಾಗದಿದ್ದರೆ, ಲಾರಿ ಮುಂದೆ ಸಾಗಿ ಬೋಗಾದಿ ಸರ್ಕಲ್‌ನಲ್ಲಿ ಭಾರೀ ಅನಾಹುತವೇ ಸಂಭವಿಸುತ್ತಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸ್ಥಳಕ್ಕೆ ಧಾವಿಸಿದ ಕೆ.ಆರ್.ಸಂಚಾರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಪೂಜಾ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಲಾರಿಯನ್ನು ಮೇಲೆತ್ತಿ ಅಡಿಯಲ್ಲಿ ಸಿಲುಕಿದ್ದ ಚಾಲಕನ ಮೃತದೇಹವನ್ನು ಶವಾಗಾರಕ್ಕೆ ಸಾಗಿಸಿದರು. ಘಟನೆಯಿಂದಾಗಿ ರಿಂಗ್ ರಸ್ತೆಯಲ್ಲಿ ಒಂದು ತಾಸಿಗೂ ಹೆಚ್ಚು ಕಾಲ ಟ್ರಾಫಿಕ್ ಜಾಮ್ ಆಗಿತ್ತು. ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್. ಸಂಚಾರ ಠಾಣೆ ಪೊಲೀಸರು, ಲಾರಿಯನ್ನು ವಶಕ್ಕೆ ಪಡೆದಿದ್ದಾರೆ.

ಏ.9, 10ರಂದು ಭಾರತೀಯ ಜೈನ್ ಮಿಲನ್‌ನಿಂದ ರಾಜ್ಯ ಮಟ್ಟದ ಜಿನ ಭಜನಾ ಸ್ಪರ್ಧೆ

ಮೈಸೂರು, ಏ. 6– ಭಾರತೀಯ ಜೈನ್ ಮಿಲನ್, ವಲಯ–8ರ ವತಿಯಿಂದ ಏ. 9 ಮತ್ತು 10 ರಂದು ಕಲಾಮಂದಿರದಲ್ಲಿ ರಾಜ್ಯ ಮಟ್ಟದ ಜಿನ ಭಜನಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಗೆ ರಾಜ್ಯಾದ್ಯಂತ 40ಕ್ಕೂ ಹೆಚ್ಚು ಭಜನಾ ತಂಡಗಳು ಸೇರಿದಂತೆ 1500 ಆಸಕ್ತರು ಪಾಲ್ಗೊಳ್ಳಲಿದ್ದಾರೆ.

ಏ.9ರ ಬೆಳಗ್ಗೆ 9 ಗಂಟೆಗೆ ಮೆರವಣಿಗೆಯೊಂದಿಗೆ ಪ್ರಾರಂಭವಾಗಲಿರುವ ಸ್ಪರ್ಧೆಯ ಉದ್ಘಾಟನೆಯನ್ನು ಕನಕಗಿರಿ ಶ್ರೀ ಕ್ಷೇತ್ರದ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಮೈಸೂರಿನ ಮಹಾರಾಜ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀಮತಿ ತ್ರಿಶಿಕಾ ಯದುವೀರ್ ಒಡೆಯರ್, ಬೆಂಗಳೂರಿನ ಮೈಕ್ರೋಲ್ಯಾಬ್ ಛೇರ್ಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕ ದಿಲೀಪ್ ಸುರಾನ ನೆರವೇರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಭಾರತೀಯ ಜೈನ್ ಮಿಲನ್‌ನ ಕಾರ್ಯಾಧ್ಯಕ್ಷ ವೀರ್ ಧರ್ಮಸ್ಥಳ ಸುರೇಂದ್ರಕುಮಾರ್, ಉಪಾಧ್ಯಕ್ಷೆ ಅನಿತಾ ಸುರೇಂದ್ರಕುಮಾರ್, ವಲಯ–8ರ ಅಧ್ಯಕ್ಷ ವೀರ್ ಪುಷ್ಪರಾಜ್ ಜೈನ್, ಉಪಾಧ್ಯಕ್ಷೆ ಶೀಲಾ ಅನಂತರಾಜ್, ಕಾರ್ಯದರ್ಶಿ ಕೆ.ಯುವರಾಜ ಭಂಡಾರಿ ಹಾಗೂ ವಿವಿಧ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿರುವರು. ಏ.10ರಂದು ಸಂಜೆ 4 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಚಲನಚಿತ್ರ ನಟ ಶ್ರೀಮುರಳಿ, ನಟಿ ಪ್ರೇಮಾ ಭಾಗವಹಿಸಿ ಬಹುಮಾನ ವಿತರಿಸಲಿದ್ದಾರೆ.

ರಸ್ತೆ ಡಾಂಬರೀಕರಣಕ್ಕೆ ಶಾಸಕ ಜಿಟಿಡಿ ಚಾಲನೆ



ಮೈಸೂರಿನ 46ನೇ ವಾರ್ಡಿನ ದಟ್ಟಗಳ್ಳಿ ವ್ಯಾಪ್ತಿಯಲ್ಲಿ ಬರುವ ಡಿ ಮತ್ತು ಎಫ್ ಬ್ಲಾಕ್‌ನಲ್ಲಿ 1.25 ಕೋಟಿ ರೂ.ಗಳ ವೆಚ್ಚದ ರಸ್ತೆ ಡಾಂಬರೀಕರಣಕ್ಕೆ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಚಾಲನೆ ನೀಡಿದರು. ಕಾರ್ಪೋರೇಟರ್ ಲಕ್ಷ್ಮೀ ಕಿರಣ್ ಮಾದೇಗೌಡ, ಮುಖಂಡರಾದ ಶಿವಪ್ರಕಾಶ್, ಪುರುಷೋತ್ತಮ್, ಬಸವಣ್ಣ, ಪಾಲಾಕ್ಷಪ್ಪ, ಪ್ರಭುಸ್ವಾಮಿ, ಪುಟ್ಟಸ್ವಾಮಿ, ವಿನುತಾ, ಅರುಣ್ ಜಿ.ಮಾದೇಗೌಡ ಇತರರನ್ನು ಚಿತ್ರದಲ್ಲಿ ಕಾಣಬಹುದು.



ಮೈಸೂರಿನ ರೈಲ್ವೆ ನಿಲ್ದಾಣದ ವೃತ್ತದಲ್ಲಿರುವ ಡಾ. ಬಾಬು ಜಗಜೀವನ್ ರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಮೈಸೂರಿನ ಗಾಂಧಿನಗರದ ಆದಿಜಾಂಬವ ಅಭಿವೃದ್ಧಿ ಸಮಿತಿಯಿಂದ ಬಾಬೂಜಿ ಜಯಂತಿ ಆಚರಿಸಲಾಯಿತು. ಸಮಿತಿಯ ಮುಖ್ಯ ಕಾರ್ಯದರ್ಶಿ ಕೃಷ್ಣಮೂರ್ತಿ, ಖಜಾಂಚಿ ರಂಗಸ್ವಾಮಿ, ಯಜಮಾನರಾದ ಫಣೀಂದ್ರ, ರಾಮಮೂರ್ತಿ, ನಿರ್ದೇಶಕರಾದ ಮಂಜುನಾಥ್ ಕೆ., ರಮೇಶ್, ಶ್ರೀನಿವಾಸ್, ರಮೇಶ್, ರವೀಂದ್ರ, ಮರಿಸ್ವಾಮಿ, ರಂಗಸ್ವಾಮಿ, ಚಂದ್ರಶೇಖರ್, ರಾಮಣ್ಣ, ರವಿ ಹಾಗೂ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.



ಕರ್ನಾಟಕ ರಾಜ್ಯ ಭಾರತಮಾತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಸಂಘದ ವತಿಯಿಂದ ಡಾ. ಬಾಬು ಜಗಜೀವನ್ ರಾಂರವರ 115ನೇ ಜನ್ಮ ದಿನಾಚರಣೆಯನ್ನು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ರಾಜ್ಯಾಧ್ಯಕ್ಷ ಜಿ.ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ನೂರ್ ಮೊಹಮ್ಮದ್ ಮರ್ಚೆಂಟ್, ರಾಜೇಶ್, ರೇಮತಿ, ಕಲ್ಪನಾ, ನಂಜುಂಡಿ, ಪುಟ್ಟರಾಜು, ಶ್ರೀಮತಿ ಗೀತಾ, ಪುಟ್ಟಸ್ವಾಮಿ ಅವರುಗಳನ್ನು ಚಿತ್ರದಲ್ಲಿ ಕಾಣಬಹುದು.

ದೇವರ ದಾಸಿಮಯ್ಯರ ತತ್ವ, ಸಿದ್ಧಾಂತ ಪಾಲಿಸಿದರೆ ಜೀವನ ಸಾರ್ಥಕ

ಮೈಸೂರು ಮೇಯರ್ ಸುನಂದಾ ಪಾಲನೇತ್ರ ಅಭಿಮತ



ಮೈಸೂರು, ಏ.6(ಆರ್‌ಕೆಬಿ)– ಆದಿ ವಚನಕಾರ ದೇವರ ದಾಸಿಮಯ್ಯ ಅವರ ಹಾದಿಯಲ್ಲಿ ಸಾಗಿದರೆ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಮೇಯರ್ ಸುನಂದಾ ಪಾಲನೇತ್ರ ತಿಳಿಸಿದರು.

ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದೇವರ ದಾಸಿಮಯ್ಯ ಜಯಂತ್ಯೋತ್ಸವ ಆಚರಣಾ ಸಮಿತಿ ಜಂಟಿಯಾಗಿ ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದಾಸಿಮಯ್ಯನವರು ನೇಕಾರಿಕೆ ವೃತ್ತಿಯ ಜೊತೆಗೆ ವಚನಗಳನ್ನು ರಚಿಸಿ, ಭಕ್ತಿ ಮಾರ್ಗದಲ್ಲಿ ಶಿವನನ್ನು ಆರಾಧಿಸಿ, ಕಾಯಕವೇ ಕೈಲಾಸ ಎಂದು ತೋರಿಸಿದವರು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯಂತೆ ದೇವರದಾಸಿಮಯ್ಯನವರೂ ವಚನಕಾರರಲ್ಲಿ ಪ್ರಮುಖರು. ವಚನಕಾರರ ಹೋರಾಟವು ವೈಚಾರಿಕವಾಗಿರುತ್ತಿತ್ತು. ತಮ್ಮ ವಚನಗಳ ಮೂಲಕ ಸಮಾಜದ ಅಂಕು–ಡೊಂಕುಗಳನ್ನು ತಿದ್ದಿದವರು. ದೇವರ ದಾಸಿಮಯ್ಯನವರ ವಚನಗಳಲ್ಲಿರುವ ಸಂದೇಶಗಳನ್ನು ಓದುವ ಮೂಲಕ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಚಿಂತಕ ನಾರಾಯಣ ಕಿಕ್ಕೇರಿ ದೇವರ ದಾಸಿಮಯ್ಯ ಅವರನ್ನು ಕುರಿತು ಮಾತನಾಡಿದರು. ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಎನ್.ವಿ.ಫಣೀಶ್, ನೇಕಾರರ ಒಕ್ಕೂಟದ ಅಧ್ಯಕ್ಷ ಆರ್.ಮೂರ್ತಿ, ನಗರಪಾಲಿಕೆ ಮಾಜಿ ಸದಸ್ಯರಾದ ಸುನೀಲ್, ಹೇಮಾ ಗಂಗಪ್ಪ, ಕುರುಹಿನ ಶೆಟ್ಟಿ ಸಮಾಜದ ಮುಖಂಡ ಚಂದ್ರಮೋಹನ್, ಕಾಡಾ ಮಾಜಿ ಅಧ್ಯಕ್ಷ ಎನ್.ಶಿವಲಿಂಗಯ್ಯ, ಚೌಡೇಶ್ವರಿ ದೇವಸ್ಥಾನದ ಅಧ್ಯಕ್ಷೆ ಪಂಕಜಮ್ಮ, ಮುಖಂಡ ಮೈ.ನಾ.ಗೋಪಾಲಕೃಷ್ಣ, ತಾಯೂರು ವಿಠಲಮೂರ್ತಿ, ಜಿಪಂ ಉಪ ಕಾರ್ಯದರ್ಶಿ ಪ್ರೇಮ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಚ್.ಚನ್ನಪ್ಪ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರಲ್ಲಿ ಯುವಕನ ಕೊಲೆ: ಗೃಹ ಸಚಿವರ ಹೇಳಿಕೆಗೆ ಎಚ್‌ಡಿಕೆ ಆಕ್ಷೇಪ

ಸಮಾಜಕ್ಕೆ ಬೇರೆ ರೀತಿಯ ಸಂದೇಶ ಕೊಡುವ ಹೇಳಿಕೆ ಬೇಡ



ಮೈಸೂರು, ಏ.6(ಆರ್‌ಕೆಬಿ)– ಬೆಂಗಳೂರಿನ ಯುವಕನೊಬ್ಬನ ಕೊಲೆಗೆ ಸಂಬಂಧಿಸಿದಂತೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ನೀಡಿರುವ ಹೇಳಿಕೆ ಕುರಿತು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗೃಹ ಸಚಿವರಾಗಿ ಒಂದೆಡೆ ಕಾಮಿಡಿ ಪಾತ್ರ, ಇನ್ನೊಂದೆಡೆ ವಿಲನ್ ಪಾತ್ರದ ರೀತಿಯಲ್ಲಿ ಮಾತನಾಡಬಾರದು. ಇದು ಸಮಾಜಕ್ಕೆ ಬೇರೆ ಸಂದೇಶ ಕೊಡುವ ರೀತಿಯ ಹೇಳಿಕೆಯಾಗುತ್ತದೆ. ಅಲ್ಲದೆ ತನಿಖೆಗೂ ತೊಂದರೆಯಾಗುತ್ತದೆ. ಹಾಗಾಗಿ ಗೃಹ ಸಚಿವರಾದವರು ಕೊಲೆಯ ಬಗ್ಗೆ ಮಾತನಾಡುವಾಗ ಸಂಪೂರ್ಣ ಮಾಹಿತಿ ಪಡೆದುಕೊಂಡು ಮಾತನಾಡಬೇಕಾಗುತ್ತದೆ ಎಂದು ಹೇಳಿದರು.

ರಾಜ್ಯದಲ್ಲಿ ಇತ್ತೀಚೆಗೆ ಕೆಲವು ವಿಚಾರಗಳು ಅನಗತ್ಯವಾಗಿ ಚರ್ಚೆಯಾಗುತ್ತಿವೆ. ಮಾವಿನಹಣ್ಣಿನ ವಿಚಾರ ಚರ್ಚೆಗೆ ಬರುತ್ತದೆಂದು ನಾನು ವಾರದ ಹಿಂದೆಯೇ ಹೇಳಿದ್ದೆ. ಸುಮಾರು 400ರಿಂದ 500 ಕೋಟಿ ಮಾವಿನ ವ್ಯವಹಾರ ನಡೆಯುತ್ತದೆ. ಮಾವಿನ ವ್ಯಾಪಾರ ಮಾಡುವವರು ಯಾರು?. ಹಿಂದಿನಿಂದ ನಡೆದುಕೊಂಡು ಬಂದ ರೀತಿಯಲ್ಲಿ ನಡೆಯುತ್ತದೆ. ಆದರೆ, ಹಿಂದೂ ವಾದಿಗಳು ಮಾವು ಹಾಗೂ ರೇಷ್ಮೆ ಬೆಳೆ ಕೊಳ್ಳುವ ಡೀಲರ್‌ಗಳಾಗುತ್ತಾರೆಯೇ ಎಂದು ಪ್ರಶ್ನಿಸಿದರು.

ಇದೇ ರೀತಿ ಮುಂದೆ ಹುಣಸೇಹಣ್ಣು, ಸಪೋಟಕ್ಕೂ ಬರಲಿದೆ. ಅವರು ಬೇಕಾದರೆ ನಾಮ ಹಾಕಿಕೊಂಡು ಓಡಾಡಲಿ. ನಾನು ಮಾತ್ರ ರೈತರಿಗೆ ನಾಮ ಹಾಕಲು ಬಿಡುವುದಿಲ್ಲ ಎಂದು ಹಿಂದು ಪರ ಸಂಘಟನೆಗಳ ವಿರುದ್ಧ ವಾಗ್ದಾಳಿ ನಡೆಸಿದರು. ರಾಜಕೀಯ ಲಾಭಕ್ಕಾಗಿ ರೈತರಿಗೆ ನಾಮ ಹಾಕಿ ಅವರ ಬದುಕು ಹಾಳು ಮಾಡಬೇಡಿ. ಅದಕ್ಕೆ ನಾನು ಅವಕಾಶ ನೀಡುವುದಿಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ಗುಡುಗಿದರು.

ಬಿಜೆಪಿ ಸುಪಾರಿ ಪಡೆದು ಕುಮಾರಸ್ವಾಮಿ ಮಾತನಾಡುತ್ತಿದ್ದಾರೆಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ನಾನು ಯಾವುದೇ ಪಕ್ಷದ ಪರ ಓಲೈಕೆ ಮಾಡುವುದಿಲ್ಲ. ಈ ರಾಜ್ಯದಿಂದ ಎರಡು ರಾಜಕೀಯ ಪಕ್ಷಗಳನ್ನು ಕಿತ್ತು ಬಿಸಾಡಲು ಜನರಿಂದ ಸುಪಾರಿ ಪಡೆದಿದ್ದೇನೆಯೇ ಹೊರತು ಯಾವುದೇ ಸಮಾಜದ ಓಲೈಕೆ ರಾಜಕಾರಣ ನನಗೆ ಅಗತ್ಯವಿಲ್ಲ ಎಂದು ಕಾಂಗ್ರೆಸ್ ಆರೋಪಕ್ಕೆ ಮಾಜಿ ಸಿಎಂ ತಿರುಗೇಟು ನೀಡಿದರು.

ಶಾರದಾ ವಿಲಾಸ ಕಾಲೇಜಿನ ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ, ನಗದು ಬಹುಮಾನ



ಸಾಹಿತಿ



ಕೀರ್ತನ ಜ್ಯೋತಿ

ಮೈಸೂರು,ಏ.6–ಇತ್ತೀಚೆಗೆ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಮೈಸೂರಿನ ಶಾರದಾ ವಿಲಾಸ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆದುಕೊಂಡಿದ್ದಾರೆ. ಕಾಲೇಜಿನ ಸಾಹಿತಿ ಎಂಎಸ್ಸಿ ಕೆಮಿಸ್ಟ್ರಿ ವಿಭಾಗದಲ್ಲಿ ಪ್ರೊ. ಪಿ.ಜಿ. ರಾಮಯ್ಯ ಎಂಡೋಮೆಂಟ್ ಗೋಲ್ಡ್ ಮೆಡಲ್, ಎರಡು ಪ್ರೊ. ಸಂಕೇಗೌಡ ಎಂಡೋಮೆಂಟ್ ನಗದು ಬಹುಮಾನವನ್ನು ಪಡೆದುಕೊಂಡಿದ್ದಾರೆ. ಇದೇ ರೀತಿ ಕಾಲೇಜಿನ ಎಂಕಾಂ ವಿದ್ಯಾರ್ಥಿನಿ ಕೀರ್ತನ ಜ್ಯೋತಿ ಪ್ರೊ.ನಂಜೇಗೌಡ ನಗದು ಬಹುಮಾನ ಪಡೆದಿದ್ದಾರೆ.

ಸುಮಿತ್ರಮ್ಮಗೆ ಪಿಎಚ್.ಡಿ




ಮೈಸೂರು,ಏ.6–ಡಾ.ಜಿ.ಶೀಲಾ ಅವರ ಮಾರ್ಗದರ್ಶನದಲ್ಲಿ ಸುಮಿತ್ರಮ್ಮ ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಏ.6–ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಏ.9ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 1.30 ರವರೆಗೆ ಮಾನಂದವಾಡಿ ರಸ್ತೆಯಲ್ಲಿರುವ ಸೆಂಟ್ ರೀಟಾಸ್ ಸ್ಕೂಲ್ ಆಡಿಟೋರಿಯಂನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9916155453 ಸಂಪರ್ಕಿಸಬಹುದು.

ಇಂದು ಮೈಸೂರಿಗೆ ಬಸವರಾಜ ಬೊಮ್ಮಾಯಿ



ಮೈಸೂರು, ಏ. 6 (ಆರ್‌ಕೆ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ (ಏ.7) ಮೈಸೂರಿಗೆ ಆಗಮಿಸುವರು. ಗುರುವಾರ ಮಧ್ಯಾಹ್ನ 3.35 ಗಂಟೆಗೆ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಮುಖ್ಯಮಂತ್ರಿಗಳು, ಸಂಜೆ 4 ಗಂಟೆಗೆ ಶಕ್ತಿಧಾಮದ ಆವರಣದಲ್ಲಿ ನಿರ್ಮಿಸಿರುವ ಇನ್‌ಫೋಸಿಸ್ ಫೌಂಡೇಷನ್ ಬ್ಲಾಕ್ ಕಟ್ಟಡ ಲೋಕಾರ್ಪಣೆ ಮಾಡುವರಲ್ಲದೆ, ಶಕ್ತಿಧಾಮ ವಿದ್ಯಾಶಾಲಾ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುವರು. ಸಂಜೆ 5.30 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡುವ ಬೊಮ್ಮಾಯಿ ಅವರು, ಸಂಜೆ 6.15 ಗಂಟೆಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಹಿಂದಿರುಗುವರು.

ಏ.10ರಂದು ಕೈವಾರ ಸದ್ಗುರು ನಾರೇಯಣ ಯೋಗಿಗಳ ಕುರಿತ ವಿಚಾರ ಸಂಕಿರಣ, ಕೃತಿ ಬಿಡುಗಡೆ



ಮೈಸೂರು, ಏ.6(ಆರ್‌ಕೆಬಿ)– ಮೈಸೂರು ವಿಶ್ವವಿದ್ಯಾನಿಲಯ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಮತ್ತು ಮೈಸೂರಿನ ಶ್ರೀ ಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾ ಸಂಯುಕ್ತ ಆಶ್ರಯದಲ್ಲಿ ಏ.10ರಂದು ಬೆಳಗ್ಗೆ 8 ಗಂಟೆಗೆ ಕೈವಾರ ಸದ್ಗುರು ನಾರೇಯಣ ಯೋಗಿಗಳ ಪರಿಚಯ ಮತ್ತು ವಿಚಾರ ಸಂಕಿರಣ, ಕೃತಿ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಾಚ್ಯವಿದ್ಯಾ ಸಂಶೋಧನಾಲಯದ ವಿಶ್ರಾಂತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೋಗಾದಿ ರಸ್ತೆ ಮೈಸೂರು ವಿಶ್ವವಿದ್ಯಾನಿಲಯದ ಅತಿಥಿಗೃಹದ ಎದುರಿನ ಲಲಿತ ಕಲೆಗಳ ಕಾಲೇಜು ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 10ಕ್ಕೆ ಕೈವಾರ ಸದ್ಗುರು ನಾರೇಯಣ ಯೋಗಿಗಳ ಪರಿಚಯ ಮತ್ತು ಆತ್ಮಬೋಧ ಕಾರ್ಯಕ್ರಮದಲ್ಲಿ ಕೈವಾರ ಶ್ರೀಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್.ಜಯರಾಂ ಪುಷ್ಪಾರ್ಚನೆ ಮೂಲಕ ಚಾಲನೆ ನೀಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅಧ್ಯಕ್ಷತೆ ವಹಿಸುವರು. ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ಪ್ರಾಚ್ಯವಿದ್ಯಾ ಸಂಶೋಧನಾಲಯದ ವಿಶ್ರಾಂತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ, ಚಿತ್ರ ನಿರ್ಮಾಪಕಿ ಮೀನಾ ತೂಗುದೀಪ ಶ್ರೀನಿವಾಸ್, ಉದ್ಯಮಿ ಡಾ.ವಿ.ಕೆ.ಜಗದೀಶ್, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಕೆ.ವಿ. ರಾಮಪ್ರಿಯ ಭಾಗವಹಿಸುವರು ಎಂದರು.

ಇದೇ ವೇಳೆ ವಿದ್ವಾನ್ ವಾನರಾಶಿ ಬಾಲಕೃಷ್ಣ ಭಾಗವತ್ ಅವರಿಂದ ಯೋಗಿ ನಾರೇಯಣ ಯತೀಂದ್ರರ ಕೀರ್ತನೆಗಳ ಹಾಗೂ ಸಾಮೂಹಿಕ ನಾಮಸಂಕೀರ್ತನೆ ಸಮರ್ಪಣೆ. ಬೆಳಗ್ಗೆ 11.30ರಿಂದ ಡಾಟಿ. ರಮೇಶ್ ಸಂಪಾದಕತ್ವದ' 'ಕೈವಾರ ತಾತಯ್ಯನವರ ಚಿಂತನೆಗಳು' ಕೃತಿ, ಮಾಜಿ ಸಚಿವ ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಎಂ.ಆರ್.ಸೀತಾರಾಮ್ ಬಿಡುಗಡೆ ಮಾಡುವರು. ಬೆಂಗಳೂರು ಉತ್ತರ ವಿವಿ ಕುಲಪತಿ ಡಾ.ನಿರಂಜನ ವಾನಳ್ಳಿ ಅಧ್ಯಕ್ಷತೆ ವಹಿಸುವರು. ರಾಜ್ಯ ಕೈಗಾರಿಕಾ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ, ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಇನ್ನಿತರರು ಉಪಸ್ಥಿತರಿರುವರು ಎಂದು ತಿಳಿಸಿದರು.


ಮಧ್ಯಾಹ್ನ 2.30ಕ್ಕೆ ರಾಷ್ಟ್ರೀಯ ವಿಚಾರ ಗೋಷ್ಠಿ ಮತ್ತು ಯತೀಂದ್ರ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಿದ್ದು, ಸುತ್ತೂರು ಶ್ರೀ ದೇಶಿಕೇಂದ್ರ ಸ್ವಾಮೀಜಿ, ಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪ್ರೊ.ರಂಗನಾಥ್ ಇದ್ದರು.

ಲೂನಾರ್ಸ್ ಕಂಪನಿಯಿಂದ 10 ಲಕ್ಷ ನೀಡಿ ಮೃಗಾಲಯದ ವಿವಿಧ ಪ್ರಾಣಿಗಳ ದತ್ತು



ಮೈಸೂರು, ಏ.6– ಮೈಸೂರಿನ ಲೂನಾರ್ ಎಕ್ಸ್‌ಪೋರ್ಟ್ಸ್ ಪ್ರೈ.ಲಿ. ಕಂಪನಿಯು 10 ಲಕ್ಷ ರೂ.ಗಳನ್ನು ಪಾವತಿಸಿ, ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಒರಾಂಗುಟಾನ್, ಬೆಂಗಾಲ್ ಟೈಗರ್, ಜಿರಾಫೆ, ಚಿಂಪಾಂಜಿ, ಆಫ್ರಿಕನ್ ಹಂಟಿಂಗ್ ಚೀತಾ, ಲಯನ್ ಟೈಲ್ಡ್ ಮಕಾನ್ ಗ್ರೇಟ್ ವೈಟ್ ಪೆಲಿಕಾನ್, ಹೂಲಾಕ್ ಗಿಬ್ಬನ್, ಮಲಬಾರ್ ಹೈಂಟ್ ಅಳಿಲು, ಗ್ರೀನ್ ಅನಕೊಂಡ, ಕಾಮನ್ ಆಸ್ಟ್ರಿಚ್, ಮಿರ್ಕಟ್ ಮತ್ತು ಎಮು ಪ್ರಾಣಿಗಳನ್ನು 2022ರ ಮಾ.24ರಿಂದ 2023ರ ಮಾ.23ರವರೆಗಿನ 1 ವರ್ಷದ ಅವಧಿಗೆ ದತ್ತು ಸ್ವೀಕರಿಸಿದೆ. ಮೈಸೂರು ಮೃಗಾಲಯದ ಮುಖ್ಯ ಧ್ಯೇಯೋದ್ದೇಶವಾದ ಪ್ರಾಣಿ ಸಂರಕ್ಷಣೆಯಂತಹ ಮಹತ್ಕಾರ್ಯದಲ್ಲಿ ಕೈಜೋಡಿಸುವ ಮೂಲಕ ಉನ್ನತ ಮಟ್ಟದ ಕೊಡುಗೆ ನೀಡಿರುವ ವಾಕ್‌ಮೇಟ್ ಫುಟ್‌ವೇರ್‌ನ ವ್ಯವಸ್ಥಾಪಕ ನಿರ್ದೇಶಕ ಬಾಸ್ಟಿಯನ್ ಜೆ.ಕೊಟ್ಟೂಕಪಲ್ಲಿ ಅವರನ್ನು ಅಭಿನಂದಿಸುವುದಾಗಿ ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.04.2022 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಷಷ್ಠೀ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯುವರೆಗೆ

- **ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಪ್ರಜಾಕವಿ ವೇಮನ ಸಾಹಿತ್ಯದ ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಎಸ್.ವಿದ್ಯಾಶಂಕರ್, ಮುಖ್ಯ ಅತಿಥಿಗಳು: ಚಿತ್ತೂರು ಜಿಲ್ಲೆಯ ಪೀಲೇರು ಕ್ಷೇತ್ರದ ಶಾಸಕ ಚಿಂತಲ ರಾಮಚಂದ್ರ ರೆಡ್ಡಿ, ಯೋಗಿ ವೇಮನ ವಿವಿ ಕುಲಪತಿ ಮುನಗಾಲ ಸೂರ್ಯ ಕಲಾವತಿ, ತೆಲಂಗಾಣ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ನಂದಿನಿ ಸಿದ್ದಾರೆಡ್ಡಿ, ಸ್ಥಳ: ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 9ಕ್ಕೆ.
- **ಸುಯೋಗ್ ಆಸ್ಪತ್ರೆ:** ವಿಶ್ವ ಆರೋಗ್ಯ ದಿನಾಚರಣೆ ಪ್ರಯುಕ್ತ ಸುಯೋಗ್ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಮುಖ್ಯ ಅತಿಥಿಗಳು: ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ಸೇನಾ ಪಡೆ:** ಮಹಾರಾಣಿ ಕೆಂಪನಂಜಮ್ಮಣ್ಣಿ ಅಮ್ಮನವರ ದಿನಾಚರಣೆ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಕೆಂಪನಂಜಮ್ಮಣ್ಣಿ ಅಮ್ಮನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಅಧ್ಯಕ್ಷತೆ: ಜೆಡಿಯು ರಾಜ್ಯ ಮಹಿಳಾ ಘಟಕ ಮತ್ತು ಕುಟುಂಬ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷೆ ಡಾ.ಮಂಜುಳಾ ಉಮೇಶ್, ಸ್ಥಳ: ರೋಟರಿ ಶಾಲೆ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.
- **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಸಂಜೆ 5.15ಕ್ಕೆ ವಿದುಷಿ ಮಹತಿ ರಘುರಾಂ ಅವರಿಂದ ಗಾಯನ, ಎಂ. ಕೇಶವ–ಪಿಟೀಲು, ನಂದನ್ ಕಶ್ಯಪ್–ಮೃದಂಗ, ಸಂಜೆ 6.15ಕ್ಕೆ ವಿದುಷಿ ಜಯಮಂಗಳ ಕೃಷ್ಣಾಮಣಿ ಅವರಿಂದ ಗಾಯನ, ಹೆಚ್.ವಿ. ರಘುರಾಂ–ಪಿಟೀಲು, ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ಎಂ.ಆರ್.ಮಂಜುನಾಥ್–ಘಟಂ, ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ.
- **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ರಾಮೋತ್ಸವ ಕಾರ್ಯಕ್ರಮಗಳು, ವಿದುಷಿ ಗಾಯತ್ರಿ ಸತ್ಯನಾರಾಯಣ ಶಿಷ್ಯ ವೃಂದದವರಿಂದ ದೇವರನಾಮ, ವಿದ್ವಾನ್ ಎಚ್.ಎಸ್. ತಾಂಡವಮೂರ್ತಿ ಹಾಗೂ ಶಿಷ್ಯರಿಂದ ಪಿಟೀಲು ವಾದನ, ಸ್ಥಳ : ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6.30ಕ್ಕೆ
- **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ ರಾಮಕೃಷ್ಣ ಧ್ಯಾನ ಕೇಂದ್ರ ಇವರಿಂದ ಭಜನೆ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.
- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಸಂಜೆ 5.30 ರಿಂದ ಶ್ರೀ ಧಶವಾರಾಹಿ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಶ್ರೀ ಮದ್ಭಾಗವತ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ– ಡಾ.ಹೆಚ್.ಎನ್. ಮಂಜುರಾಜ್, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಹೆಚ್.ಎಸ್. ಮಹಾಲಕ್ಷ್ಮಿ ಅವರ ನಿರ್ದೇಶನದಲ್ಲಿ ಮೈಸೂರು ಸದಾಶಿವರಾಯರ ರಚನೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ– ಆರ್. ಗಿರೀಶ್, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ – ವೃಂದಗಾನ, 3.00 "ರಾಗಲಹರಿ" ಒಂದೇ ರಾಗಾಧಾರಿತ ಕೃತಿಗಳನ್ನು ಕೇಳಿಸುವ ಸರಣಿ ಕಾರ್ಯಕ್ರಮ, 4.00 ಹಳ್ಳಿ ಹಾಡು–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಮಾದಿಗಳ್ಳಿಯ ಗೌರಮ್ಮ ಮತ್ತು ತಂಡ, 4.30 ಸಂಧ್ಯಾರಾಗ–ಭಾಗವಹಿಸುವವರು ನಿವೃತ್ತ ಇಂಜಿನಿಯರ್ ಹಾಗೂ ಲೇಖಕ ಇ.ಆರ್. ರಾಮಚಂದ್ರನ್ ಮತ್ತು ಮಡದಿ ಮಾಯಾ ಶಂಕರ್, 6.50 ಕೃಷಿರಂಗ–ಕಿಸಾನ್‌ವಾಣಿ, ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಹೆಚ್.ಎಂ. ಅವರೊಡನೆ ಸಂದರ್ಶನ. ಸಂದರ್ಶಕರು– ಎಸ್.ಸಿ. ಹೇಮಕುಮಾರ್, 9.30 ಯುವವಾಣಿ–ಯುವಪ್ರತಿಭೆ–ಮೇಘಾ ಆನಂದ್ ಅವರೊಂದಿಗೆ ಮಾತುಕತೆ, ಸ್ವರಚಿತ ಕವನ ವಾಚನ–ಕಾವ್ಯ ಕೆ., 10.00 ಹಾಸ್ಯ ನಾಟಕ 'ದೌಟೇಶನ ದಿನಚರಿ', ರಚನೆ– ಎಂ.ಎ. ನರಸಿಂಹಮೂರ್ತಿ, ನಿರ್ದೇಶನ– ರಮಾ ಎಸ್. ಹಿರೇಮಠ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 7 ಗುರುವಾರ 2022

ಸಂಪುಟ: 43 | ಸಂಚಿಕೆ: 347 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಡಿನೋಟಿಫಿಕೇಷನ್ ಪ್ರಕರಣ

ಸುಪ್ರೀಂಕೋರ್ಟ್ ಮೊರೆ ಹೋದ ಯಡಿಯೂರಪ್ಪ



ಬೆಂಗಳೂರು, ಏ. 6– ಬೆಳ್ಳಂದೂರು ಡಿನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ವಿಚಾರಣಾ ನ್ಯಾಯಾಲಯವು ನೀಡಿರುವ ಸಮನ್ಸ್‌ಗೆ ತಡೆ ನೀಡುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಪ್ರಕರಣದ ಆರೋಪಿ ಸಂಖ್ಯೆ 2 ಆಗಿರುವ ಯಡಿಯೂರಪ್ಪ ಅವರನ್ನು ಏ.19 ರಂದು ವಿಚಾರಣೆಗೆ ಹಾಜರಾಗುವಂತೆ ವಿಚಾರಣಾ ನ್ಯಾಯಾಲಯವು ಸಮನ್ಸ್ ಜಾರಿ ಮಾಡಿತ್ತು. ಐ.ಟಿ ಕಾರಿಡಾರ್ ನಿರ್ಮಾಣಕ್ಕಾಗಿ ಬೆಂಗಳೂರಿನ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿದ್ದ 15 ಎಕರೆ 30 ಗುಂಟೆ ಜಮೀನನ್ನು ಅಕ್ರಮವಾಗಿ ಡಿನೋಟಿಫಿಕೇಷನ್ ಮಾಡಿದ ಆರೋಪ ಸಂಬಂಧ ಯಡಿಯೂರಪ್ಪ ಅವರಿಗೆ ವಿಚಾರಣೆಗೆ ಏ.19ರಂದು ಖುದ್ದು ಹಾಜರಾಗುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಮನ್ಸ್ ಜಾರಿ ಮಾಡಿತ್ತು.

ನ್ಯಾಯಾಧೀಶ ಬಿ.ಜಯಂತ್ ಕುಮಾರ್, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 13(1)(ಡಿ) ಮತ್ತು 13(2)ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಸಮನ್ಸ್ ಜಾರಿ ಮಾಡಿದ್ದರು. 2013ರಲ್ಲಿ ವಾಸುದೇವ ರೆಡ್ಡಿ ●9ನೇ ಪುಟಕ್ಕೆ

ಸಂಪುಟ ವಿಸ್ತರಣೆಯೂ ಇಲ್ಲ; ಪುನರ್ರಚನೆಯೂ ಇಲ್ಲ

ಮುಖ್ಯಮಂತ್ರಿ ಬೊಮ್ಮಾಯಿ ಬರಿಗೈಲಿ ಬೆಂಗಳೂರಿಗೆ



ಬೆಂಗಳೂರು, ಏ.6 (ಕೆಎಂಶಿ)– ಸಂಪುಟ ವಿಸ್ತರಣೆ ಇಲ್ಲವೇ ಪುನರ್‌ರಚನೆ ಮಾಡುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಯತ್ನ ಫಲ ನೀಡಿಲ್ಲ. ಅವರು ದೆಹಲಿಯಿಂದ ಬರಿಗೈಯ್ಯಲ್ಲಿ ಹಿಂತಿರುಗುತ್ತಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಗೂ ಮುನ್ನ ಆಡಳಿತದಲ್ಲಿ ಒಂದಷ್ಟು ಬದಲಾವಣೆ ಮಾಡಲು ಮುಖ್ಯಮಂತ್ರಿಯವರು ಆಸಕ್ತಿ ವಹಿಸಿದ್ದರು. ಆದರೆ ದೆಹಲಿಯ ವರಿಷ್ಠರು ಸದ್ಯಕ್ಕೆ ಯಾವುದೇ ತೀರ್ಮಾನ ಮಾಡಿಲ್ಲ. ಆಡಳಿತದಲ್ಲಿ ಬದಲಾವಣೆ ಮಾಡುವ ಉದ್ದೇಶದಿಂದಲೇ ಎರಡು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿದ್ದ ಮುಖ್ಯಮಂತ್ರಿಯವರಿಗೆ ರಾಜಕೀಯವಾಗಿ ಯಾವುದೇ ಫಲ ದೊರೆತಿಲ್ಲ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಭೇಟಿಗೂ ಅವಕಾಶ ದೊರೆತಿಲ್ಲ. ಆದರೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿ ರಾಜಕೀಯವಾಗಿ ಚರ್ಚೆ ಮಾಡಿದ್ದಾರೆ.

ಪಕ್ಷದ ಉನ್ನತ ಮೂಲಗಳ ಪ್ರಕಾರ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಆರ್‌ಎಸ್‌ಎಸ್‌ನ ಪ್ರಮುಖ ಮುಖಂಡರಾದ ದತ್ತಾತ್ರೇಯ ಹೊಸಬಾಳೆ, ಮುಕುಂದ್ ಹಾಗೂ ಅರುಣ್‌ಕುಮಾರ್ ಅವರೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಕರ್ನಾಟಕದಲ್ಲಿ ಆಡಳಿತ ಮತ್ತು ಪಕ್ಷದಲ್ಲಿ ಕೆಲವು ಬದಲಾವಣೆ ತೀರ್ಮಾನ ಕೈಗೊಳ್ಳಲಿದ್ದಾರೆ. ಬಿಜೆಪಿ ಆಡಳಿತವಿರುವ ರಾಜ್ಯಗಳ ಕಾರ್ಯವೈಖರಿಯನ್ನು ನೋಡಿಕೊಂಡು ಕೇಂದ್ರದ ಜೊತೆ ಸಮನ್ವಯತೆ ಸಾಧಿಸುತ್ತಿರುವ ಅರುಣ್‌ಕುಮಾರ್ ನೀಡುವ ವರದಿ ಮೇಲೆ ಸಿಎಂ ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಅವರ ಭವಿಷ್ಯ ನಿಂತಿದೆ. ಪಂಚ ರಾಜ್ಯ ವಿಧಾನಸಭಾ ಚುನಾವಣೆ ಮುಗಿಯುತ್ತಿದ್ದಂತೆ ಗುಜರಾತ್ ಮತ್ತು ಕರ್ನಾಟಕ ರಾಜ್ಯದಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ವರಿಷ್ಠರು ಸ್ಥಳೀಯ ಆಡಳಿತ ಮತ್ತು ಪಕ್ಷದಲ್ಲಿ ಅಗತ್ಯ ಕಂಡು ಬಂದಲ್ಲಿ ಮಹತ್ತರ ಬದಲಾವಣೆಗೂ ನಿರ್ಧರಿಸಿದ್ದಾರೆ. ಪಕ್ಷ ಯಾವುದೇ ತೀರ್ಮಾನ ಕೈಗೊಳ್ಳುವುದಕ್ಕೂ ಮುನ್ನ ಆರ್‌ಎಸ್‌ಎಸ್ ಸಲಹೆ ಪಡೆಯುತ್ತದೆ. ಇದರಂತೆ ಹೊಸಪೇಟೆಯಲ್ಲೇ ಏ.17, 18ರಂದು ಬಿಜೆಪಿಯ ಕಾರ್ಯಕಾರಿಣಿ ಸಭೆ ನಡೆಯಲಿದೆ. ಈ ಸಭೆಗೂ ಮುನ್ನ ಏ.8ರಿಂದ 16ರ ನಡುವೆ ಈ ನಾಯಕರು ಕರ್ನಾಟಕದ ರಾಜಕೀಯದ ಬಗ್ಗೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳುತ್ತಾರೆ. ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಬೊಮ್ಮಾಯಿ ಅವರನ್ನು ಮುಂದುವರೆಸುವುದು ಮತ್ತು ಸಂಪುಟದಲ್ಲಿ ಸರ್ಜರಿ ಅವಕಾಶ ಮಾಡಿಕೊಡುವ ತೀರ್ಮಾನಕ್ಕೆ ಬರಲಿದ್ದಾರೆ. ಜೊತೆ ಜೊತೆಯಲ್ಲೇ ಕರ್ನಾಟಕದಲ್ಲಿ ಚುನಾವಣೆಯನ್ನು ಎದುರಿಸುವ ತಂತ್ರಗಾರಿಕೆ ಸೂತ್ರಗಳನ್ನು ಅಂದಿನ ಸಭೆಯಲ್ಲಿ ಸಿದ್ಧಪಡಿಸಲಿದ್ದಾರೆ ಎಂದು ಇದೇ ಮೂಲಗಳು ಹೇಳಿವೆ. ನಡ್ಡಾ ಹಾಗೂ ರಾಜನಾಥ್ ಸಿಂಗ್ ಅವರು ಮುಖ್ಯಮಂತ್ರಿ ಅವರಿಗೆ ಯಾವ ಸಂದೇಶ ನೀಡಿದ್ದಾರೆ ಎಂಬುದರ ಬಗ್ಗೆ ಪೂರ್ಣ ಮಾಹಿತಿ ಇಲ್ಲ. ಅವರ ಕರೆಯ ಮೇರೆಗೆ ಬೊಮ್ಮಾಯಿ ಅವರು ದೆಹಲಿ ಪ್ರವಾಸ ಕೈಗೊಂಡಿದ್ದರು. ಸಂಪುಟ ಪುನರ್ರಚನೆಯಾಗುತ್ತದೆ ಎಂದು ಸಚಿವಾಕಾಂಕ್ಷಿಗಳು ಈ ಬಾರಿಯೂ ದೆಹಲಿಯಲ್ಲಿ ಬಿಡಾರ ಹೂಡಿದ್ದರು. ಅವರಿಗೆ ನಿರಾಸೆಯಾಗಿದೆ.

ಮೈಸೂರು ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ

ಕೇಂದ್ರ ಸಚಿವರೊಂದಿಗೆ ಸುನಿಲ್‌ಕುಮಾರ್ ಚರ್ಚೆ



ನವದೆಹಲಿ,ಏ.6–ಮೈಸೂರಿನಲ್ಲಿರುವ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥಾನ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತೆ ನೀಡುವ ಕುರಿತಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್ ದೆಹಲಿಯಲ್ಲಿ ಕೇಂದ್ರ ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಧರ್ಮೇಂದ್ರ ಪ್ರಧಾನ್ ಅವರನ್ನು ಸುನಿಲ್ ಕುಮಾರ್, ಮೈಸೂರು ಹಾಗೂ ಕೊಡಗು ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ಭೇಟಿ ಮಾಡಿ ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಬಳಿಕ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಸುನಿಲ್ ಕುಮಾರ್, ವಿಶೇಷವಾಗಿ ಮೈಸೂರಿನಲ್ಲಿರುವ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥಾನ ಕೇಂದ್ರದಲ್ಲಿ ●9ನೇ ಪುಟಕ್ಕೆ

ಮೈಸೂರು, ಕೊಡಗು ನಗರ ಸ್ಥಳೀಯ ಸಂಸ್ಥೆಗಳ ಮೂಲ ಸೌಕರ್ಯಕ್ಕೆ ಕ್ರಮವಾಗಿ 75, 55 ಕೋಟಿ ರೂ.ಗಳ ಕ್ರಿಯಾ ಯೋಜನೆ

ಬೆಂಗಳೂರು,ಏ.6(ಕೆಎಂಶಿ)–ಮೈಸೂರು, ದಾವಣಗೆರೆ ಸೇರಿದಂತೆ ಏಳು ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲು 705 ಕೋಟಿ



ರೂ. ಕ್ರಿಯಾ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್, ಮೈಸೂರು ಮತ್ತು ದಾವಣಗೆರೆಯಲ್ಲದೆ ಉಡುಪಿ, ರಾಮನಗರ, ಕೊಡಗು ಬಳ್ಳಾರಿ ಹಾಗೂ ಬೆಳಗಾವಿ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದರು. 2022–23ನೇ ಸಾಲಿನಿಂದ 2024–25 ನೇ ಸಾಲಿನವರೆಗಿನ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ 4ನೇ ಹಂತದ ಯೋಜನೆಗಳಲ್ಲಿ ಅನುಮತಿ ನೀಡಲಾಗಿದೆ. ಮೈಸೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 75 ಕೋಟಿ ರೂಪಾಯಿ, ಕೊಡಗು ಜಿಲ್ಲೆಗೆ 55 ಕೋಟಿ, ದಾವಣಗೆರೆ 70, ಬಳ್ಳಾರಿ 80, ರಾಮನಗರ 125, ಬೆಳಗಾವಿ ಜಿಲ್ಲೆಗೆ 250 ಕೋಟಿ ಹಾಗೂ ಉಡುಪಿ ಜಿಲ್ಲೆಗೆ 40 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದರು. ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟಾರೆ ಈ ಯೋಜನೆ ಅಡಿ 3885 ಕೋಟಿ ರೂಪಾಯಿ ಮೊತ್ತದ ಕಾಮಗಾರಿ ಕೈಗೊಳ್ಳಲು ಸಂಪುಟ ಅನುಮತಿ ನೀಡಿದೆ. ಮೊದಲ ಹಂತದಲ್ಲಿ ಈ ನಗರಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಭಾರತಕ್ಕೂ ಕಾಲಿಟ್ಟ ಕೊರೊನಾ ಹೊಸ ರೂಪಾಂತರಿ 'XE'

ಮುಂಬೈನಲ್ಲಿ ಮೊದಲ ಪ್ರಕರಣ ಪತ್ತೆ

ನವದೆಹಲಿ,ಏ.6–ಡೆಲ್ಟಾ, ಡೆಲ್ಟಾ ಪ್ಲಸ್, ಒಮಿಕ್ರಾನ್ ನಂತರ ಅತಿ ವೇಗವಾಗಿ ಹರಡಬಲ್ಲ ಕೊರೊನಾ ವೈರಸ್ ಹೊಸ ರೂಪಾಂತರಿ 'ಎಕ್ಸ್ ಇ' ಭಾರತಕ್ಕೂ ಕಾಲಿಟ್ಟಿದೆ. ಕೊರೊನಾ ವೈರಸ್ ರೂಪಾಂತರಿ XE ಭಾರತದ ಮೊದಲ ಪ್ರಕರಣ ಬುಧವಾರ ಮುಂಬೈನಲ್ಲಿ ವರದಿಯಾಗಿದೆ.

ಬೃಹತ್ ಮುಂಬೈ ಮಹಾನಗರ ಪಾಲಿಕೆ ಪ್ರಕಾರ, ಕಪ್ಪಾ ರೂಪಾಂತರದ 1 ಪ್ರಕರಣ ಇಂದು ಪತ್ತೆಯಾಗಿದೆ. ವೈರಸ್‌ನ ಹೊಸ ರೂಪಾಂತರಗಳನ್ನು ಹೊಂದಿರುವ ರೋಗಿಗೆ ಇಲ್ಲಿಯವರೆಗೆ ಯಾವುದೇ ತೀವ್ರವಾದ ರೋಗ ಲಕ್ಷಣಗಳು ಕಂಡುಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳವಾರ 376 ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಅವುಗಳಲ್ಲಿ 230 ಮುಂಬೈ ನಿವಾಸಿಗಳ ಪರೀಕ್ಷಾ ಮಾದರಿಯನ್ನು ಜೀನೋಮ್ ಸೀಕ್ವೆನ್ಸಿಂಗ್‌ಗಾಗಿ ಕಳಿಸಲಾಗಿತ್ತು. 230 ಮುಂಬೈ ರೋಗಿಗಳಲ್ಲಿ 228 ಒಮಿಕ್ರಾನ್, ಒಂದು ಕಪ್ಪಾ ಮತ್ತು ಒಂದು ಫಿಇ ವೈರಸ್ ದೃಢಪಟ್ಟಿದೆ. ಒಟ್ಟು 230 ರೋಗಿಗಳಲ್ಲಿ 21 ಮಂದಿಯನ್ನ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಿರೀಕ್ಷಣಾ ಜಾಮೀನು ಕೋರಿ ಹಲವು ಕೋರ್ಟ್‌ಗಳಲ್ಲಿ ಅರ್ಜಿ ಸಲ್ಲಿಕೆ ತಡೆಗೆ ಹೈಕೋರ್ಟ್ ಮಾರ್ಗಸೂಚಿ

ಬೆಂಗಳೂರು, ಏ.6–ಅಪರಾಧ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿ ಆರೋಪಿಗಳು ಏಕಕಾಲದಲ್ಲಿ ನಾನಾ ನ್ಯಾಯಾಲಯಗಳಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಅಂತಹ ಪ್ರಕರಣಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಹೈಕೋರ್ಟ್ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ.



ಬೆಂಗಳೂರು ಮೂಲದ ವ್ಯಕ್ತಿಯೊಬ್ಬರು ನ್ಯಾಯಾಲಯಗಳಲ್ಲಿ ಜಾಮೀನು ಪಡೆಯಲು ಮಾಹಿತಿ ಮರೆಮಾಚಿ ಮಾಡಿದ ವಂಚನೆಯನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ನ್ಯಾಯಾಲಯಗಳಿಂದ ನಿರೀಕ್ಷಣಾ ಅಥವಾ ನಿಯಮಿತ ಜಾಮೀನು ಪಡೆಯಲು ಅಂತಹ ಮೋಸದ ಮಾರ್ಗಗಳನ್ನು ತಡೆಯಲು ತಂತ್ರಜ್ಞಾನ ಆಧಾರಿತ ಕಾರ್ಯವಿಧಾನ ಅಭಿವೃದ್ಧಿ ಸೇರಿದಂತೆ ಮಾರ್ಗಸೂಚಿಗಳನ್ನು ಹೊರಡಿಸಿದೆ.

2021ರಲ್ಲಿ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಭೂ ದಾಖಲೆಗಳನ್ನು ನಕಲಿ ಮಾಡಿ ವಂಚಿಸಿದ ಅಪರಾಧ ಪ್ರಕರಣದಲ್ಲಿ ಆರೋಪ ಎದುರಿಸುತ್ತಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾದಹಳ್ಳಿಯ ನವರತ್ನ ಅಗ್ರಹಾರದ 40 ವರ್ಷದ ನಂಜಪ್ಪ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯಪೀಠ ಈ ಆದೇಶ ಮಾಡಿದೆ.

ಬೆಂಗಳೂರಿನ ವಿಚಾರಣಾ ನ್ಯಾಯಾಲಯವು ನಿರೀಕ್ಷಣಾ ಜಾಮೀನು ನೀಡಲು ನಿರಾಕರಿಸಿದ ನಂತರ ಇದೇ ಪ್ರಕರಣದಲ್ಲಿ ಈ ಹಿಂದೆ ಬೆಂಗಳೂರಿನ ಹೈಕೋರ್ಟ್‌ನ ಪ್ರಧಾನ ಪೀಠದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿದಾರರು ಅರ್ಜಿ ಸಲ್ಲಿಸಿದ್ದರು. ಇದೇ ವೇಳೆ ಅದೇ ಕ್ರಿಮಿನಲ್ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ನಕಲಿ ವಿಳಾಸವನ್ನು ನೀಡಿ ಮೈಸೂರು ಮತ್ತು ತುಮಕೂರಿನ ಜಿಲ್ಲಾ ನ್ಯಾಯಾಲಯಗಳಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದ ಅಂಶ ವಿಚಾರಣೆ ವೇಳೆ ಕಂಡುಬಂದಿದೆ.

ನ್ಯಾಯಾಲಯದ ಆದೇಶವೇನು?: ಇದರ ಗಂಭೀರತೆಯನ್ನು ಅರಿತು ನ್ಯಾಯಪೀಠ ಪೊಲೀಸರಿಗೆ ದೂರು ನೀಡುವಂತೆ ರಿಜಿಸ್ಟ್ರಾರ್ ●9ನೇ ಪುಟಕ್ಕೆ

ತುರ್ತು ಪರಿಸ್ಥಿತಿ ಹಿಂಪಡೆದ ಶ್ರೀಲಂಕಾ

ಕೊಲಂಬೊ, ಏ. 6– ಶ್ರೀಲಂಕಾ ಆರ್ಥಿಕ ಸ್ಥಿತಿ ಮತ್ತಷ್ಟು ಉಲ್ಬಣಗೊಂಡಿದ್ದು, ಜನತೆ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆಯೇ ಅಧ್ಯಕ್ಷ ಗೊಟಬಯ ರಾಜಪಕ್ಸೆ ಅವರು ಇದ್ದಕ್ಕಿದ್ದಂತೆ ತುರ್ತು ಪರಿಸ್ಥಿತಿಯನ್ನು ಹಿಂಪಡೆದಿದ್ದಾರೆ.

ಇದರಿಂದಾಗಿ ಶ್ರೀಲಂಕಾಗೆ ಅಗತ್ಯವಾಗಿ ಬೇಕಾಗಿರುವ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹಣಕಾಸು ಪರಿಹಾರ ಪ್ಯಾಕೇಜಿಗೆ ಒಪ್ಪಿಗೆ ಸೂಚಿಸುವ ಪ್ರಕ್ರಿಯೆ ಮತ್ತಷ್ಟು ಕಠಿಣವಾದಂತಾಗಿದೆ. ಏ.1ರಿಂದ ಜಾರಿಯಾಗುವಂತೆ ಅಧ್ಯಕ್ಷರ ಅಧ್ಯಾದೇಶವನ್ನು ಏ. 5ರ ಮಧ್ಯರಾತ್ರಿಯಿಂದ ಜಾರಿಯಾಗುವಂತೆ ರದ್ದುಪಡಿಸಲಾಗಿದೆ. ಮಂಗಳವಾರ ತಡರಾತ್ರಿ ಈ ಸಂಬಂಧ ವಿಶೇಷ ಗಜೆಟ್ ಅಧಿಸೂಚನೆ ಹೊರಡಿಸಲಾಗಿದೆ. ತುರ್ತು ಪರಿಸ್ಥಿತಿ ಘೋಷಣೆ ಮೂಲಕ, ಪ್ರತಿಭಟನಾಕಾರರನ್ನು ಬಂಧಿಸುವ, ಅವರ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಅಧಿಕಾರ ಸೇರಿದಂತೆ ಹಲವು ಅಧಿಕಾರಿಗಳು ●9ನೇ ಪುಟಕ್ಕೆ

ಅಲ್ಲಾಹು ಅಕ್ಬರ್ ಘೋಷಣೆ ಕೂಗಿದ್ದ ಮಂಡ್ಯ ಬಾಲಕಿ ಮುಸ್ಕಾನ್ ಹಾಡಿ ಹೊಗಳಿರುವ ಅಲ್‌ಖೈದಾ ಉಗ್ರವಾದಿ ಸಂಘಟನೆ ಮುಖ್ಯಸ್ಥ ಜವಾಹಿರಿ



ಅಲ್ಮಾನ್ ಅಲ್ ಜವಾಹಿರಿ

ಮೈಸೂರು, ಏ.6–ರಾಜ್ಯದಲ್ಲಿ ಹಿಜಾಬ್ ವಿಚಾರದಲ್ಲಿ ಗಲಾಟೆಗಳು ನಡೆದಾಗ ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ 'ಜೈ ಶ್ರೀರಾಮ್' ಘೋಷಣೆಗೆ ಪ್ರತಿಯಾಗಿ 'ಅಲ್ಲಾಹು ಅಕ್ಬರ್' ಘೋಷಣೆ ಕೂಗಿದ್ದ ವಿದ್ಯಾರ್ಥಿನಿ ಮುಸ್ಕಾನ್ ಖಾನ್ ಅವರನ್ನು ಅಲ್ ಖೈದಾ ಉಗ್ರಗಾಮಿ ಸಂಘಟನೆ ನಾಯಕನಾಗಿದ್ದ ಒಸಮಾ ಬಿನ್ ಲಾಡನ್ ಬಲಗೈ ಭಂಟ ಅದೇ ಸಂಘಟನೆಯ ಹಾಲಿ ಮುಖ್ಯಸ್ಥ ಅಲ್ಮಾನ್ ಅಲ್ ಜವಾಹಿರಿ ಹಾಡಿ ಹೊಗಳಿದ್ದಾನೆ. ಇದರ ವೀಡಿಯೋ ಬಿಡುಗಡೆ ಮಾಡಿದ್ದಾನೆ.

ಅಲ್‌ಖೈದಾ ಉಗ್ರ ಸಂಘಟನೆಯ ಅಧಿಕೃತ ಸಾಮಾಜಿಕ ಜಾಲತಾಣವಾದ 'ಶಬಾಬ್'ನಲ್ಲಿ 9 ನಿಮಿಷದ ಈ ವೀಡಿಯೋವನ್ನು ಬಿಡುಗಡೆ ಮಾಡಲಾಗಿದ್ದು, ●9ನೇ ಪುಟಕ್ಕೆ

ನಮಗೆ ಯಾರ ಹೊಗಳಿಕೆಯೂ ಬೇಕಿಲ್ಲ... ನಮ್ಮನ್ನು ಬಿಟ್ಟುಬಿಡಿ...

ಮುಸ್ಕಾನ್ ತಂದೆ ಮಹಮ್ಮದ್ ಹುಸೇನ್ ಬೇಸರದ ನುಡಿ




ಮಹಮ್ಮದ್ ಹುಸೇನ್

ಮಂಡ್ಯ, ಏ.6–ತಮ್ಮ ಪುತ್ರಿಯನ್ನು ಹೊಗಳಿ ಅಲ್‌ಖೈದಾ ಉಗ್ರವಾದಿ ಜವಾಹಿರಿ ವೀಡಿಯೋ ಬಿಡುಗಡೆ ಮಾಡಿರುವ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ವಿದ್ಯಾರ್ಥಿನಿ ಮುಸ್ಕಾನ್ ತಂದೆ ಮಹಮ್ಮದ್ ಹುಸೇನ್, ಅಲ್‌ಖೈದಾ ಮುಖ್ಯಸ್ಥರ ಬಗ್ಗೆ ನಮಗೆ ಗೊತ್ತಿಲ್ಲ. ಬೇರೆ ದೇಶದವರ ಹೊಗಳಿಕೆ ನಮಗೆ ಬೇಕಾಗಿಲ್ಲ. ಅವರ ದೇಶವನ್ನು ಅವರು ನೋಡಿಕೊಳ್ಳಲಿ. ನಮ್ಮ ದೇಶದಲ್ಲಿ ನಾವು ನೆಮ್ಮದಿಯಿಂದ ಇದ್ದೇವೆ. ನಮ್ಮನ್ನು ಬಿಟ್ಟುಬಿಡಿ ಎಂದಿದ್ದಾರೆ.

ಇಲ್ಲಿ ನಾವೆಲ್ಲರೂ ಅಣ್ಣ–ತಮ್ಮಂದಿರಂತೆ ಪ್ರೀತಿ ಹಂಚಿಕೊಂಡು ಜೀವನ ಮಾಡುತ್ತಿದ್ದೇವೆ. ಕೆಲವರು ನಮ್ಮಲ್ಲಿ ಗೊಂದಲ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ನಮಗೆ ಯಾರ ಹೊಗಳಿಕೆಯೂ ಬೇಕಾಗಿಲ್ಲ. ಅಲ್‌ಖೈದಾ ಉಗ್ರವಾದಿ ಬಗ್ಗೆ ನಮಗೆ ಗೊತ್ತಿಲ್ಲ. ಅರಬ್ಬೀ ಭಾಷೆಯಲ್ಲಿ ಮಾತನಾಡಿರುವ ವ್ಯಕ್ತಿ ನನ್ನ ಮಗಳನ್ನು ಹೊಗಳಿದ್ದಾನೆ ಎಂಬುದು ಮಾಧ್ಯಮಗಳಿಂದ ಗೊತ್ತಾಗಿದೆ. ಆತನ ಹಿನ್ನೆಲೆ ನಮಗೆ ಗೊತ್ತಿಲ್ಲದ ಕಾರಣ ಹೆಚ್ಚೇನೂ ಮಾತನಾಡುವುದಿಲ್ಲ ಎಂದರು. ಹಿಜಾಬ್ ಹಿಂದೆ ಉಗ್ರ ಸಂಘಟನೆಗಳ ಕೈವಾಡವಿದೆಯೇ ಎಂಬುದು ನಮಗೆ ಗೊತ್ತಿಲ್ಲ. ●9ನೇ ಪುಟಕ್ಕೆ

ಚಾಮುಂಡಿಬೆಟ್ಟದ ರಾಜೇಂದ್ರ ವಿಲಾಸ ಅರಮನೆ ಮತ್ತೆ ಹೋಟೆಲ್ ಆಗಿ ದಸರಾ ವೇಳೆಗೆ ಆರಂಭ

ಭರದಿಂದ ಸಾಗಿದೆ ಗತವೈಭವ ಸಾರುವ ಈ ಕಟ್ಟಡದ ನವೀಕರಣ ಕಾಮಗಾರಿ



ರಾಜವಂಶಸ್ಥೆ ಪ್ರಮೋದಾದೇವಿ ಅವರು ಅರಮನೆ ನಿವಾಸದಲ್ಲಿ ಪತ್ರಿಕಾಗೋಷ್ಠಿ ನಡೆಸಿದರು. ಈ ವೇಳೆ ರಾಜೇಂದ್ರ ವಿಲಾಸ ಅರಮನೆ ನವೀಕರಣ ಪ್ರಗತಿಯ ವೀಡಿಯೋ ಪ್ರದರ್ಶಿಸಿದರು.

ಮೈಸೂರು, ಏ.6(ಆರ್‌ಕೆ)– ಮೈಸೂರು ಮಡಿಲ ಚಾಮುಂಡಿಬೆಟ್ಟದ ಐತಿಹಾಸಿಕ ಹಾಗೂ ಪಾರಂಪರಿಕತೆ ಬಿಂಬಿಸುವ ರಾಜೇಂದ್ರ ವಿಲಾಸ ಅರಮನೆ ಹೋಟೆಲ್ ಆಗಿ ಶೀಘ್ರ ಮತ್ತೆ ಆರಂಭಗೊಳ್ಳಲಿದೆ.

ಶಿಥಿಲಾವಸ್ಥೆಯಲ್ಲಿರುವ ಗತವೈಭವ ಸಾರುವ ಈ ಐತಿಹಾಸಿಕ ಕಟ್ಟಡದ ನವೀಕರಣ ಕಾಮಗಾರಿ ತ್ವರಿತ ಗತಿಯಲ್ಲಿ ನಡೆಯುತ್ತಿದೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.

ಮೈಸೂರು ಅರಮನೆಯ ತಮ್ಮ ನಿವಾಸದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ತಮಿಳುನಾಡಿನ ನೈಪುಣ್ಯವುಳ್ಳ ಕೆಲಸಗಾರರು ರಾಜೇಂದ್ರ ವಿಲಾಸ ಅರಮನೆ ನವೀಕರಣ ಕಾಮಗಾರಿ ನಡೆಸುತ್ತಿದ್ದು, ಈ ವರ್ಷದ ದಸರಾ ಮಹೋತ್ಸವದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದರು. ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನದಿಂದ ಈ ಐತಿಹಾಸಿಕ ಕಟ್ಟಡ ಸಂರಕ್ಷಣಾ ●6ನೇ ಪುಟಕ್ಕೆ

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡಗಳ ಸಂರಕ್ಷಿಸಬೇಕು






ಮೈಸೂರು: ಸಾಂಸ್ಕೃತಿಕ ನಗರದ ಹೃದಯಭಾಗದಲ್ಲಿರುವ ಅತೀ ಹಳೆಯದಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ ಸಂರಕ್ಷಿಸಬೇಕೆಂದು ರಾಜಮಾತೆ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯಪಟ್ಟರು.

ಈ ಹಿಂದೆ ರಾಜ ಮಹಾರಾಜರು ವ್ಯಾಪಾರ–ವಹಿವಾಟಿಗಾಗಿ ಸೂಕ್ತ ಸ್ಥಳದಲ್ಲಿ ಜನ ಓಡಾಡಲು ಸುತ್ತ ಜಾಗ ಬಿಟ್ಟು ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನಿರ್ಮಿಸಿದ್ದರು. ಈಗಿನ ಶಾಪಿಂಗ್ ಮಾಲ್, ವಾಣಿಜ್ಯ ಮಳಿಗೆಗಳು ತಲೆ ಎತ್ತಲು ಹಳೆಯ ಪಾರಂಪರಿಕ ಕಟ್ಟಡಗಳೇ ಪ್ರೇರಣೆ. ಆ ಎರಡೂ ಕಟ್ಟಡಗಳು ಸರಿಯಾಗಿ ನಿರ್ವಹಣೆ ಮಾಡದೇ ಶಿಥಿಲವಾಗಿವೆಯೇ ಹೊರತು, ಸದೃಢತೆ ಹಾಳಾಗಿಲ್ಲ ಎಂಬುದು ನನ್ನ ಅಭಿಪ್ರಾಯ ಎಂದರು. ಈ ಹಿಂದೆ 2018ರಲ್ಲಿ ನಾನು ಕಟ್ಟಡಗಳಿಗೆ ಭೇಟಿ ನೀಡಿ ವೀಕ್ಷಿಸಿದ್ದೇನೆ. ಕಟ್ಟಡಗಳು ಚೆನ್ನಾಗಿಯೇ ಇದ್ದವು. ಯಥಾಸ್ಥಿತಿ ●6ನೇ ಪುಟಕ್ಕೆ

ನಿಸರ್ಗದತ್ತ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಅಗತ್ಯವಿಲ್ಲ



ಮೈಸೂರು: ನೈಸರ್ಗಿಕ ನೆಲೆಯಾಗಿರುವ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಅಳವಡಿಸುವ ಅಗತ್ಯವಿಲ್ಲ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಗಿಡಮರ, ಗುಡ್ಡ, ತೊರೆಗಳಿಂದ ಸುಂದರ ಪರಿಸರ ಹೊಂದಿರುವ ಚಾಮುಂಡಿಬೆಟ್ಟದ ಸೊಬಗನ್ನು ಸವಿಯುವುದೇ ಒಂದು ಸೌಭಾಗ್ಯ. ಕೇವಲ 15–20 ನಿಮಿಷಗಳಲ್ಲಿ ವಾಹನಗಳ ಮೂಲಕ ಕ್ರಮಿಸಬಹುದಾಗಿದೆ. ಕಾಲ್ನಡಿಗೆಯಲ್ಲಿ ಮೆಟ್ಟಿಲುಗಳ ಮೂಲಕ ಬೆಟ್ಟಕ್ಕೆ ಹೋಗಿ ಬರುವುದೂ ಒಂದು ವಿಶಿಷ್ಟ ಅನುಭವವಾಗಿದೆ ಎಂದರು. ನಿಸರ್ಗಸಿರಿಯನ್ನು ಅನುಭವಿಸಿಕೊಂಡು ಚಾಮುಂಡಿ ಬೆಟ್ಟ ಏರಿ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆಯುವುದರಲ್ಲೇ ಆನಂದವಿದೆ. ಅದೇ ಕಾರಣಕ್ಕೆ ಭಕ್ತಾದಿಗಳು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಆರೋಗ್ಯಕ್ಕೂ ಪೂರಕ ವಾತಾವರಣವಿರುವ ನೈಸರ್ಗಿಕ ಚಾಮುಂಡಿ ಬೆಟ್ಟಕ್ಕೆ ಕೃತಕವಾಗಿ ರೋಪ್ ವೇ ಅಳವಡಿಸುವ ಅಗತ್ಯವಿಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಎಂದರು.

ನಕ್ಕರೆ ಅದೇ ಸ್ವರ್ಗ

ಗಿರಾಕಿ : ಏನಯ್ಯಾ ಒಂದು ಪ್ಲೇಟ್ ಇಡ್ಲಿ ತಗೊಂಡು ಬಾ ಅಂದರೆ ಪ್ಲೇಟಿನಲ್ಲಿ ಎರಡು ಚಮಚ ಮಾತ್ರಾ ಕಾಣ್ತಾ ಇದೆ.

ಮಾಣಿ : ಸಾರ್ ದಯವಿಟ್ಟು ಚಮಚ ಎತ್ತಿ ನೋಡಿ. ಇಡ್ಲಿ ಕಾಣಿಸುತ್ತೆ.

ಮೈಸೂರು ಮಿತ್ರ

ಗುರುವಾರ, 7 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಈ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸಾಧ್ಯ ಎನ್ನುವ ನಂಬಿಕೆ ಇದ್ದರೆ, ಅದಕ್ಕೆ ಬೇಕಾದ ಎಲ್ಲಾ ಶಕ್ತಿಗಳೂ ತನ್ನಷ್ಟಕ್ಕೇ ಒದಗುತ್ತವೆ. – ಡೋರಾ ಆಲ್ಬರ್ಟ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಗಟ್ಟಿಲ್ಲದ ಊರಲ್ಲಿ ಒಪ್ಪತ್ತೂ ಇರಬೇಡ

ನಿಮ್ಮ ಪತ್ರಗಳು

ಮಾಜಿ ಕುಸ್ತಿಪಟುಗಳಿಗೆ ಮಾಸಾಶನ ಹೆಚ್ಚಳ ಸ್ವಾಗತಾರ್ಹ

ಮಾನ್ಯರೆ

ರಾಜ್ಯದ ಮಾಜಿ ಕುಸ್ತಿ ಪಟುಗಳಿಗೆ ಮಾಸಾಶನ ಹೆಚ್ಚಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆಗಳು. ಬಜೆಟ್‌ನಲ್ಲಿ ಘೋಷಿಸಿದ್ದಂತೆ ಏಪ್ರಿಲ್‌ನಿಂದ ಇದನ್ನು ಅನುಷ್ಠಾನಗೊಳಿಸುವ ಮೂಲಕ ನುಡಿದಂತೆ ನಡೆದಿದ್ದಾರೆ.

ಐವತ್ತು ವರ್ಷ ಮೇಲ್ಪಟ್ಟ ಕುಸ್ತಿ ಪಟುಗಳಿಗೆ ಒಂದು ಸಾವಿರ ಮಾಸಾಶನ ಹೆಚ್ಚಳ ಹಾಗೂ ರಾಜ್ಯಮಟ್ಟದ ಕುಸ್ತಿ ಪಟುಗಳಿಗೆ ಎರಡು ಸಾವಿರದ ಐನೂರು ರೂಪಾಯಿಗಳಿಂದ ಮೂರು ಸಾವಿರ ಐನೂರು ರೂಪಾಯಿಗಳಿಗೆ. ಮತ್ತು ರಾಷ್ಟ್ರ ಮಟ್ಟದ ಕುಸ್ತಿ ಪಟುಗಳಿಗೆ ಮೂರು ಸಾವಿರ ರೂಪಾಯಿಗಳಿಂದ ನಾಲ್ಕು ಸಾವಿರ ರೂಪಾಯಿಗಳಿಗೆ ಅಂತಾರಾಷ್ಟ್ರೀಯ ಕುಸ್ತಿಪಟುಗಳಿಗೆ ನಾಲ್ಕು ಸಾವಿರ ರೂಪಾಯಿಗಳಿಂದ ಐದು ಸಾವಿರ ರೂಪಾಯಿಗಳಿಗೆ ಮಾಸಾಶನ ಹೆಚ್ಚಿಸಿರುವುದು ಸಂತಸ ತಂದಿದೆ. ಈ ಮೂಲಕ ದೇಶೀಈ ಕ್ರೀಡೆ ವ್ಯಾಪ್ತಿಗೆ ಬರುವ ಕುಸ್ತಿಗೆ ಮಾನ್ಯತೆ ನೀಡಿ, ಕುಸ್ತಿ ಪಟುಗಳಿಗೆ ಧನ ಸಹಾಯ ಮಾಡುತ್ತಿರುವುದು ಶ್ಲಾಘನೀಯ ಸಂಗತಿ.

–ಕಂಗಾಣೆಸೋಮು ಪಿ.ಸಿ., ಕ್ಯಾತಮಾರನಹಳ್ಳಿ ಮೈಸೂರು

ವಿಜಯನಗರ ವಾಟರ್ ಟ್ಯಾಂಕ್ ಬಳಿ ಅಕ್ರಮ ಕಟ್ಟಡ ತೆರವುಗೊಳಿಸಿ

ಮಾನ್ಯರೆ,

ಮೈಸೂರು ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ವಿಜಯನಗರದ ಎರಡನೇ ಹಂತದಲ್ಲಿ ವಾಟರ್ ಟ್ಯಾಂಕ್ ಬಳಿ ನಿರ್ಮಿಸಿರುವ ಕರ್ನಾಟಕ ಬ್ಯಾಂಕ್ ಕಟ್ಟಡ ಹಾಗೂ ಅದರ ಆಜುಬಾಜಲ್ಲಿ ಇರುವ ಕಟ್ಟಡಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಜಾಗದಲ್ಲಿ ಹಾಗೂ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಿದ್ದರೂ ಇವುಗಳ ಮಾಲೀಕರು ರಾಜಕೀಯ ಮುಖಂಡರು (ಮಾಜಿ ನಗರ ಪಾಲಿಕೆ ಸದಸ್ಯರು) ಎಂಬ ಕಾರಣಕ್ಕಾಗಿ ಯಾವುದೇ ಕಾನೂನು ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರಲ್ಲಿ ಅನುಮಾನ ಮೂಡುವಂತಾಗಿದೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಅಕ್ರಮ ಕಟ್ಟಡಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ, ಪಾದಚಾರಿಗಳಿಗೆ ಓಡಾಡಲು ಅನುವು ಮಾಡಿಕೊಡಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

– ಪೂರ್ಣಿಮಾ ಪರಮೇಶ್, ಆರ್‌ಟಿಐ ಕಾರ್ಯಕರ್ತೆ, ವಿಜಯನಗರ, ಮೈಸೂರು.

ಕನ್ನಡ ಭಾಷೆಗೆ ಮೊದಲ ಆದ್ಯತೆ ನೀಡಬೇಕು

ಮಾನ್ಯರೆ,

ರಾಜ್ಯದಲ್ಲಿ ಮೂರು ಸಾವಿರ ಹೊಸ ಮಾದರಿ ಶಾಲೆಗಳನ್ನು ಸ್ಥಾಪಿಸುವ ಸರ್ಕಾರದ ಕ್ರಮ ಕನ್ನಡ ಭಾಷೆಯ ಅಭಿವೃದ್ಧಿಗೆ ಅನೂಕೂಲವಾಗಲಿದೆ. ಸರ್ಕಾರದ ಈ ಕ್ರಮ ಇಂಗ್ಲಿಷ್ ಮಾಧ್ಯಮ ಶಾಲೆಗಳಿಂದ ಅಳಿವಿನಂಚಿನಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳ ರಕ್ಷಣೆ ಸಾಧ್ಯವಾಗುತ್ತದೆ.

ಇಂಗ್ಲಿಷ್ ಭಾಷೆ ಜಾಗತಿಕ ಭಾಷೆಯಾಗಿದೆ ನಿಜ. ಪ್ರತಿಯೊಂದು ವಿಷಯದ ಮಾಹಿತಿ ಇಂಗ್ಲಿಷ್ ಭಾಷೆಯಲ್ಲಿ ಸುಲಭವಾಗಿ ದೊರೆಯುತ್ತದೆ. ಆಧುನಿಕ ಯುಗದಲ್ಲಿ ಜಗತ್ತೆ ಒಂದು ಕುಟುಂಬವಾಗಿದ್ದು, ಸಂವಹನ ನಡೆಸಲು ಆಂಗ್ಲ ಭಾಷೆ ಅತ್ಯಗತ್ಯವಾಗಿದೆ.

ಇಂಗ್ಲಿಷ್ ಭಾಷೆ ಕಲಿತರೆ ಜಗತ್ತಿನ ಯಾವುದೇ ಮೂಲೆಯಲ್ಲಾದರೂ ಬದುಕು ನಡೆಸಬಹುದು ನಿಜ. ಆದರೆ ಆಂಗ್ಲ ಭಾಷೆಯ ಜೊತೆಗೆ ನಮ್ಮ ಮಾತೃ ಭಾಷೆಯನ್ನು ಆಂಗ್ಲ ಭಾಷೆಯಂತೆ ಜಗತ್ತಿನ ಭಾಷೆಯಾಗುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಕನ್ನಡಕ್ಕೆ ಐದು ಸಾವಿರ ವರ್ಷಗಳ ಇತಿಹಾಸವಿದೆ. ನೋಡಲು ಕನ್ನಡ ಪದಗಳು ಅತ್ಯಂತ ಸುಂದರವಾಗಿದೆ. ಜೊತೆಗೆ ಮಾತನಾಡಲು ಸುಲಭವಾಗಿದೆ.

ಇಂಗ್ಲಿಷ್ ಜಗತ್ತಿನ ಭಾಷೆಯಾಗಿರಬಹುದು. ಆದರೆ ಚೀನಾದಲ್ಲಿ ಇಂಗ್ಲಿಷ್ ಕಡ್ಡಾಯವಲ್ಲ, ಚೀನಾದಲ್ಲಿ 'ಮ್ಯಾಡಂರಿನ್' ಭಾಷೆಯನ್ನು ಹೆಚ್ಚಾಗಿ ಬಳಸಲಾಗುತ್ತದೆ. ಗಲ್ಫ್ ರಾಷ್ಟ್ರಗಳಲ್ಲಿ ಸಹ ಅರೇಬಿಕ್ ಭಾಷೆಗೆ ಮಾದಲ ಆದ್ಯತೆ ನೀಡಲಾಗುತ್ತದೆ. ಇದೇ ಹಾದಿಯಲ್ಲಿ ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಿ ಜೊತೆಗೆ ಇಂಗ್ಲಿಷ್ ಭಾಷೆಯನ್ನು ಸಹ ಬಳಸಬೇಕು.

ಕರ್ನಾಟಕ ರಾಜ್ಯದಲ್ಲಿ ನಲವತ್ತೇಳು ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿದ್ದು, ಇದರಲ್ಲಿ 3800 ಶಾಲೆಗಳಲ್ಲಿ ಹತ್ತಕ್ಕಿಂತ ಕಡಿಮೆ ಮಕ್ಕಳಿರುವುದು ಶೋಚನೀಯವಾಗಿದೆ. 562 ಸರ್ಕಾರಿ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿ ಇರುವುದು, ಪೋಷಕರಲ್ಲಿನ ಆಂಗ್ಲ ಭಾಷೆಯ ಮೇಲಿನ ವ್ಯಾಮೋಹ ತಿಳಿದುಬರುತ್ತದೆ. ಜನತೆ ಸರ್ಕಾರಿ ಶಾಲೆಗಳನ್ನು ಹೆಚ್ಚಾಗಿ ಬಳಸಿಕೊಂಡರೆ ಕಡಿಮೆ ವೆಚ್ಚದಲ್ಲಿ ಶಿಕ್ಷಣ ಪಡೆಯಬಹುದಾಗಿದೆ. ಜೊತೆಗೆ ಕನ್ನಡವನ್ನು ಬೆಳೆಸಬಹುದು. ನಮ್ಮ ಮೊದಲ ಆದ್ಯತೆ ಸರ್ಕಾರಿ ಶಾಲೆಗಳು ಮತ್ತು ಕನ್ನಡ ಭಾಷೆಯಾಗಲಿ. 'ಕನ್ನಡ ಬೆಳೆಸಿ, ಇಂಗ್ಲಿಷ್ ಬಳಸಿ' ನಮ್ಮೆಲ್ಲರ ಅದ್ಯತೆಯಾಗಲಿ.

–ರಾ. ಸುಮಾಭಟ್, ಚಿಕ್ಕಮಗಳೂರು.

ಶಾಲಾ ದಾಖಲಾತಿ ಜೊತೆಗೆ ಲಸಿಕೆ ಕಡ್ಡಾಯಗೊಳಿಸಿ

ಮಾನ್ಯರೆ,

ವಿಜ್ಞಾನಿಗಳ ಹೇಳಿಕೆ ನಂತರ ಕೊರೊನಾದ ನಾಲ್ಕನೇ ಅಲೆಯ ಭೀತಿ ಜನರಲ್ಲಿ ಆವರಿಸಿದೆ. ಈಗಾಗಲೇ ವಯೋಮಿತಿಗಳ ಪ್ರಕಾರ ಲಸಿಕೆ ನೀಡಲಾಗುತ್ತಿದೆ. ಈಗ 14 ವರ್ಷದ ಒಳಗಿನ ಮಕ್ಕಳಿಗೂ ಲಸಿಕೆ ಪ್ರಾರಂಭವಾಗಿದೆ. ಆದರೆ ಪರೀಕ್ಷೆ ಇದ್ದ ಕಾರಣ ಹಲವಾರು ವಿದ್ಯಾರ್ಥಿಗಳು ಲಸಿಕೆ ತೆಗೆದುಕೊಳ್ಳುವುದರಲ್ಲಿ ವಿಳಂಬವಾಗಿದೆ. ಈಗಾಗಲೇ ಶಾಲೆಗಳಲ್ಲಿ ದಾಖಲಾತಿ ಪ್ರಾರಂಭವಾಗಿದೆ. ಆದ್ದರಿಂದ ಜೂನ್ ಒಳಗೆ ಪ್ರತಿಯೊಂದು ಶಾಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ದಾಖಲಾತಿ ಜೊತೆಗೆ ಲಸಿಕೆ ಕಡ್ಡಾಯಗೊಳಿಸಬೇಕು. ಶಾಲೆಯ ಮುಖ್ಯಸ್ಥರು ಹಾಗೂ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಇದಕ್ಕೆ ಕೈಜೋಡಿಸಬೇಕು. ಜೂನ್ ವೇಳೆಗೆ ಶಾಲೆ ಆರಂಭವಾದರೂ ಮಕ್ಕಳು ಧೈರ್ಯವಾಗಿ ಶಾಲೆಗೆ ಹೋಗಬಹುದು. ಕೊರೊನಾ ಖಾಯಿಲೆಯ ಭೀತಿ ಇರುವುದಿಲ್ಲ. ಪ್ರತೀ ಶಾಲೆಯಲ್ಲೂ ಲಸಿಕೆಯ ಬಗ್ಗೆ ಇದೇ ರೀತಿ ಕ್ರಮ ಕೈಗೊಂಡರೆ ಎಲ್ಲಾ ವಿದ್ಯಾರ್ಥಿಗಳು ಆರೋಗ್ಯದಿಂದ ಇರಬಹುದು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಸಂಸ್ಕೃತ

ಮಾನ್ಯರೆ,

ಹಿಜಾಬ್ ಬಗೆಗೆ ನಗರದಲ್ಲಿ ಅಬದ್ಧ ಮಾತನಾಡಿದ 'ಕನ್ನಡದ ಕಣ್ಣ'ರಿಗೆ ಎಲ್ಲೆಡೆ ಸಹಸ್ರ ನಾಮಾರ್ಚನೆ ಆಗುತ್ತಿರುವುದು ಸಹಜವೇ! ಕನ್ನಡದ ಪೂಜಾರಿಗೆ 'ಸಂಸ್ಕೃತ'ವೂ ಗೊತ್ತು ಎಂದೊಬ್ಬರ ವ್ಯಂಗ್ಯೋಕ್ತಿ ಆಣಿ ಮುತ್ತು!

– ಸಿಪಿಕೆ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಸಮಾನತೆಯ ಮುಖವಾಡವನ್ನು ಹೊತ್ತು ಅಸಮಾನತೆಯತ್ತ ಸಾಗುತ್ತಿದೆಯೇ ನಮ್ಮ ಸಮಾಜ?

ಇತ್ತೀಚೆಗಷ್ಟೇ ಬಿಡುಗಡೆಯಾಗಿರುವ ಜಾಗತಿಕ ಅಸಮಾನತೆಯ ವರದಿ ನಮ್ಮ ಮುಂದೆ ಅನೇಕ ಆಘಾತಕಾರಿ ಸಂಗತಿಗಳನ್ನು ಇಟ್ಟಿದೆ. ಪ್ಯಾರಿಸ್ ಸ್ಕೂಲ್ ಆಫ್ ಎಕನಾಮಿಕ್ಸ್ ಪ್ರಕಟಿಸುವ ಈ ವರದಿಯನ್ನು ನಾಲ್ಕು ಖ್ಯಾತ ಅರ್ಥಶಾಸ್ತ್ರಜ್ಞರು ಬರೆದಿದ್ದಾರೆ. ಅವರೆಂದರೆ ಪ್ಯಾರಿಸ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಲೂಕಾಸ್ ಚಾನ್ಸೆಲ್ ಮತ್ತು ಥಾಮಸ್ ಪಿಕೆಟಿ ಹಾಗೂ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಇಮ್ಯಾನುಯಲ್ ಸಾಯೆಜ್ ಮತ್ತು ಗೇಬ್ರಿಯಲ್ ಝುಕ್ಮ್ಯಾನ್. ವಿಶ್ವದಾದ್ಯಂತ 100 ಕ್ಕೂ ಹೆಚ್ಚು ಸಂಶೋಧಕರು ಒದಗಿಸಿರುವ ಮಾಹಿತಿಯನ್ನು ಆಧರಿಸಿ ಸಿದ್ಧಪಡಿಸಿರುವ ಈ ವರದಿ ಜಾಗತಿಕ ಅಸಮಾನತೆಯ ಸ್ವರೂಪ, ಪ್ರಮಾಣ, ಅದಕ್ಕೆ ಕಾರಣವಾಗಿರುವ ಅಂಶಗಳನ್ನು ಒಂದು ಐತಿಹಾಸಿಕ ನೆಲೆಗಟ್ಟಿನಲ್ಲಿ ಪರೀಕ್ಷಿಸಿ ವಿಶ್ಲೇಷಣೆಗೆ ಒಳಪಡಿಸಿದೆ. ಭಾರತವೂ ಸೇರಿದಂತೆ 26 ದೇಶಗಳಲ್ಲಿ ಅಸಮಾನತೆಯ ಪರಿಸ್ಥಿತಿಯನ್ನು ಅಂಕಿ–ಅಂಶಗಳ ಸಹಿತ ಈ ವರದಿಯಲ್ಲಿ ನೀಡಲಾಗಿದೆ.

ಜಗತ್ತಿನಾದ್ಯಂತ ಸರ್ಕಾರಗಳು ಆರ್ಥಿಕ ಬೆಳವಣಿಗೆಯ ಬಗ್ಗೆ ಅಂಕಿ–ಅಂಶಗಳನ್ನು ಒದಗಿಸುತ್ತವೆ. ಆದರೆ ಈ ಬೆಳವಣಿಗೆಯ ಪ್ರಯೋಜನವನ್ನು ಪಡೆದವರು ಯಾರು, ಅದರಿಂದ ಹೊರಗಿಡಲ್ಪಟ್ಟವರು ಯಾರು–ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರಗಳು ಈ ಸಂಖ್ಯಾತ್ಮಕ ಮಾಹಿತಿಯಿಂದ ದೊರೆಯುವುದಿಲ್ಲ. ಅಭಿವೃದ್ಧಿಯ ದಿಶೆಯನ್ನು ಅಳೆಯಲು ಆರ್ಥಿಕ ಪ್ರಗತಿ, ಜನಾಂಗ, ಜಾತಿ, ಲಿಂಗ, ಗ್ರಾಮ–ನಗರ ವಾಸ್ತವ್ಯ, ಉದ್ಯೋಗ ಹಿನ್ನೆಲೆ– ಇವುಗಳ ಆಧಾರದ ಮೇಲೆ ಶ್ರೇಣೀಕೃತ ವ್ಯವಸ್ಥೆಯಾಗಿ ರೂಪಿತವಾಗಿರುವ ಈ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಅಸಮಾನತೆಯನ್ನು ಎಷ್ಟರ ಮಟ್ಟಿಗೆ ಭೇದಿಸಿದೆ ಎಂಬುದನ್ನು ತಿಳಿಯುವುದು ಕೂಡ ಬಹು ಮುಖ್ಯವಾದದ್ದು. ಅನೇಕ ಸಂದರ್ಭಗಳಲ್ಲಿ ಸರಾಸರಿ ಮೌಲ್ಯಗಳು ಸಂಪತ್ತಿನ ಹಂಚಿಕೆಯಲ್ಲಿ ಕಂಡುಬರುವ ತೀವ್ರ ಸ್ವರೂಪದ ಅಸಮಾನತೆಯನ್ನು ಮುಚ್ಚಿಡುತ್ತವೆ. ಆದ್ದರಿಂದ ಆರ್ಥಿಕ ಬೆಳವಣಿಗೆಯನ್ನು ಕುರಿತ ಮಾಹಿತಿಯನ್ನು ವಿವಿಧ ಸಾಮಾಜಿಕ– ಪ್ರಾದೇಶಿಕ– ಸಾಂಸ್ಕೃತಿಕ–ರಾಜಕೀಯ ಅಂಶಗಳ ಹಿನ್ನೆಲೆಯಲ್ಲಿ ಪ್ರತ್ಯೇಕಿಸಿ ವಿಶ್ಲೇಷಣೆಗೆ ಒಳಪಡಿಸಬೇಕು ಎನ್ನುವ ಮೂಲಭೂತ ಸತ್ಯವನ್ನು ಹೊರತಂದಿರುವುದು ಈ ವರದಿಯ ವಿಶೇಷ.

> “ ಜಗತ್ತಿನಾದ್ಯಂತ ಸರ್ಕಾರಗಳು ಆರ್ಥಿಕ ಬೆಳವಣಿಗೆಯ ಬಗ್ಗೆ ಅಂಕಿ-ಅಂಶಗಳನ್ನು ಒದಗಿಸುತ್ತವೆ. ಆದರೆ ಈ ಬೆಳವಣಿಗೆಯ ಪ್ರಯೋಜನವನ್ನು ಪಡೆದವರು ಯಾರು, ಅದರಿಂದ ಹೊರಗಿಡಲ್ಪಟ್ಟವರು ಯಾರು-ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರಗಳು ಈ ಸಂಖ್ಯಾತ್ಮಕ ಮಾಹಿತಿಯಿಂದ ದೊರೆಯುವುದಿಲ್ಲ. ಅಭಿವೃದ್ಧಿಯ ದಿಶೆಯನ್ನು ಅಳೆಯಲು ಆರ್ಥಿಕ ಪ್ರಗತಿ, ಜನಾಂಗ, ಜಾತಿ, ಲಿಂಗ, ಗ್ರಾಮ-ನಗರ ವಾಸ್ತವ್ಯ, ಉದ್ಯೋಗ ಹಿನ್ನೆಲೆ- ಇವುಗಳ ಆಧಾರದ ಮೇಲೆ ಶ್ರೇಣೀಕೃತ ವ್ಯವಸ್ಥೆಯಾಗಿ ರೂಪಿತವಾಗಿರುವ ಈ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಅಸಮಾನತೆಯನ್ನು ಎಷ್ಟರ ಮಟ್ಟಿಗೆ ಭೇದಿಸಿದೆ ಎಂಬುದನ್ನು ತಿಳಿಯುವುದು ಕೂಡ ಬಹು ಮುಖ್ಯವಾದದ್ದು.

ಜಾಗತೀಕರಣದ ಯುಗ ಆರಂಭವಾದ ಮೇಲೆ ನಮ್ಮ ಮುಂದೆ ನಿಂತ ಒಂದು ಸತ್ಯವೆಂದರೆ ದೇಶ–ದೇಶಗಳ ನಡುವೆ ಅಸಮಾನತೆಯ ಪ್ರಮಾಣ ಕಡಿಮೆಯಾದದ್ದು. ಅತೀ ಶ್ರೀಮಂತ ದೇಶಗಳು ಮತ್ತು ಅತೀ ಬಡ ದೇಶಗಳ ನಡುವಿನ ಅಂತರ ಕಡಿಮೆ ಯಾಗಿದ್ದು, ಆ ದೇಶಗಳ ಆತ್ಮವಿಶ್ವಾಸ ಮತ್ತು ಆತ್ಮಾಭಿಮಾನ ಗಳೆರಡನ್ನೂ ಹೆಚ್ಚಿಸಿದೆ ಎನ್ನುವುದೇನೋ ನಿಜ. ಆದರೆ ಸಮಾನತಾ ಸಮಾಜದ ಸ್ಥಾಪನೆಯ ಕನಸನ್ನು ಹೊತ್ತಿರುವ ವರನ್ನು ಕಳವಳಕ್ಕೀಡು ಮಾಡುವ ವಿಚಾರವೆಂದರೆ ದೇಶಗಳ ಒಳಗೆ ವ್ಯಕ್ತಿ–ವ್ಯಕ್ತಿಗಳ ನಡುವೆ ಹೆಚ್ಚಿರುವ ಆರ್ಥಿಕ ಅಂತರ. ಅತೀ ಶ್ರೀಮಂತ ಶೇಕಡಾ 10 ರಷ್ಟು ಜನ ಸಂಖ್ಯೆ ಹಾಗೂ ಆರ್ಥಿಕ ಸ್ತರದ ಕೆಳಮಟ್ಟದಲ್ಲಿರುವ ಶೇಕಡಾ 50 ರಷ್ಟು ವ್ಯಕ್ತಿಗಳಲ್ಲಿ ಸರಾಸರಿ ಆದಾಯದ ಅಂತರ ದುಪ್ಪಟ್ಟು ಹೆಚ್ಚಿರುವುದು.

ಇದರಿಂದ ಹೊರಹೊಮ್ಮುವ ಕಳವಳಕಾರಿ ಸತ್ಯವೆಂದರೆ ಆರ್ಥಿಕವಾಗಿ ಹೊರಹೊಮ್ಮುತ್ತಿರುವ ದೇಶಗಳಲ್ಲಿ ಕಳೆದ ಎರಡು ದಶಕಗಳಲ್ಲಿ ಸಂಭವಿಸಿದೆ ಎಂದು ಹೇಳಲಾಗುತ್ತಿರುವ ಆರ್ಥಿಕ ಸ್ಫೋಟದ ನಡುವೆಯೂ ಶ್ರೀಮಂತರ ಮತ್ತು ಅಂಚಿನಲ್ಲಿ ನಿಂತಿರುವ ವರ್ಗಗಳ ನಡುವೆ ಅಭಿವೃದ್ಧಿಯ ಫಲಗಳ ಅಸಮಾನ ಹಂಚಿಕೆಯಾಗುತ್ತಿದ್ದು ಮೇಲ್ಮುಖ ಸಾಮಾಜಿಕ ಚಲನೆಗೆ ಅವಕಾಶಗಳು ಇಂದಿಗೂ ಬಹುಮಟ್ಟಿಗೆ ಉಳ್ಳವರ ಪಾಲಾಗುತ್ತಿವೆ ಎಂದರ್ಥ.

ದೇಶಗಳ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆಯಾಗುತ್ತಿದೆ, ಆದರೆ ಸರ್ಕಾರಗಳು, ಎಂದರೆ ಸಾರ್ವಜನಿಕ ವಲಯ ಬಡವಾಗುತ್ತಿದೆ ಎಂದು ಜಾಗತಿಕ ಅಸಮಾನತಾ ವರದಿ ಹೇಳುತ್ತದೆ. ಹಾಗೆಂದರೆ ಸಮಾಜದ ಸಂಪತ್ತು ಹೆಚ್ಚು–ಹೆಚ್ಚು ಕೇಂದ್ರೀಕೃತವಾಗುತ್ತಿರುವುದು ಖಾಸಗಿ ವಲಯದಲ್ಲಿ. ಕೋವಿಡ್‌ನ ಕಾರಣದಿಂದಾಗಿ ಸಾರ್ವಜನಿಕ ಕ್ಷೇತ್ರದ ಸಂಪನ್ಮೂಲಗಳು ಮತ್ತಷ್ಟು ಬರಿದಾಗುತ್ತಿದ್ದು ಅಸಮಾನತೆಯನ್ನು ಎದುರಿಸುವುದು ಸರ್ಕಾರಗಳಿಗೆ ಅತೀ ದೊಡ್ಡ ಸವಾಲಾಗಿ ಪರಿಣಮಿಸಲಿದೆ ಎಂಬುದು ವರದಿ ನಮ್ಮ ಮುಂದಿಟ್ಟಿರುವ ಒಂದು ಕಟು ಸತ್ಯಗಳಲ್ಲಿ ಒಂದು.

ವಿಶ್ವದ ಬಹುಪಾಲು ಸಂಪತ್ತು ಕೇಂದ್ರೀಕೃತವಾಗುತ್ತಿರುವುದು ಶೇಕಡಾ 10 ರಷ್ಟು ಮಾತ್ರವಿರುವ ಕೋಟ್ಯಾಧಿಪತಿಗಳಲ್ಲಿ. 1990ರ ನಂತರ ಸಂಗ್ರಹವಾಗಿರುವ ಶೇಕಡಾ 38ರಷ್ಟು ಹೆಚ್ಚುವರಿ ಸಂಪತ್ತನ್ನು ಈ 1% ತಮ್ಮ ಬಳಿ ಶೇಖರಿಸಿಕೊಂಡಿದ್ದಾರೆ ಎಂದು ಹೇಳಿರುವ ವರದಿ, ಕೆಳಸ್ತರದಲ್ಲಿರುವ ಶೇಕಡಾ 50 ಜನಸಂಖ್ಯೆ ಈ ಅವಧಿಯಲ್ಲಿ ಜಗತ್ತಿನ ಶೇಕಡಾ 2 ರಷ್ಟು ಸಂಪತ್ತನ್ನು ಮಾತ್ರ ಪಡೆಯಲು ಸಾಧ್ಯವಾಗಿರುವುದು ಸಮಾಜದ ಅಂಚಿನಲ್ಲಿರುವ ವರ್ಗಗಳು ಎದುರಿಸುವ ತಾರತಮ್ಯಕ್ಕೆ ಸಾಕ್ಷಿಯಾಗಿದೆ. 1995 ರಿಂದ ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳ ಸಂಪತ್ತು ಶೇಕಡಾ 6–9 ವಾರ್ಷಿಕ ಹೆಚ್ಚಳವನ್ನು ಕಂಡಿದ್ದರೆ, ಇದೇ ಅವಧಿಯಲ್ಲಿ ಇಡೀ ಜಗತ್ತಿನ ಸರಾಸರಿ ಸಂಪತ್ತು ಬೆಳೆದಿರುವುದು ವರ್ಷವೊಂದಕ್ಕೆ ಶೇಕಡಾ 3.2 ಪ್ರಮಾಣದಲ್ಲಿ. ಕೋವಿಡ್‌ನ ಕಾಲದಲ್ಲಿ ಈ ಹೆಚ್ಚಳ ಉಲ್ಬಣಗೊಂಡಿದ್ದು 2020ರಲ್ಲಿ ಜಾಗತಿಕ ಸಂಪತ್ತಿನಲ್ಲಿ ಈ ಕೋಟ್ಯಾಧಿಪತಿಗಳ ಪಾಲು ಅತ್ಯಂತ ಹೆಚ್ಚಳವನ್ನು ಕಂಡಿದೆ. ಇದರಿಂದ ತಿಳಿಯುವುದೇನೆಂದರೆ ಮಹಾಪಿಡುಗಿನ ಕಾರಣದಿಂದಾಗಿ ಕೋಟ್ಯಾಂತರ ಮಂದಿ ಬಡವರು ತಮ್ಮ ಬದುಕಿನ ನೆಲೆಗಳನ್ನು ಕಳೆದುಕೊಂಡರೆ, ಈ ಅತೀ ಶ್ರೀಮಂತ ವರ್ಗದ ಸಂಪತ್ ಗಳಿಕೆ ಮಾತ್ರ ಅವ್ಯಾಹತವಾಗಿ ಮುಂದುವರೆಯಿತು ಎಂಬುದು.

ಭಾರತದಲ್ಲಿ ಕೂಡ ಅಸಮಾನತೆಯ ಚಿತ್ರಣ ಹೆಚ್ಚು–ಕಡಿಮೆ ಜಾಗತಿಕ ಪರಿಸ್ಥಿತಿಯನ್ನೇ ಹೋಲುತ್ತದೆ. ಬ್ರಿಟಿಷ್ ಆಳ್ವಿಕೆಯಲ್ಲಿ ದೇಶದ ಶೇಕಡಾ 10 ಜನಸಂಖ್ಯೆಯಲ್ಲಿ 50 % ಆದಾಯ ಕೇಂದ್ರೀಕೃತವಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದು ಪಂಚ–ವಾರ್ಷಿಕ ಯೋಜನೆಗಳು, ಯೋಜಿತ ಸಾಮಾಜಿಕ ಬದಲಾವಣೆಯನ್ನು ತರುವತ್ತ ಗಮನಹರಿಸಿದ್ದರಿಂದ ಈ ಪರಿಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆ ಉಂಟಾಯಿತು. ಆದರೆ 1990ರ ದಶಕದಿಂದ ಆರಂಭವಾದ ಆರ್ಥಿಕ ಉದಾರೀಕರಣ ನೀತಿಯ ಕಾರಣದಿಂದಾಗಿ ತೀವ್ರ ಸ್ವರೂಪದ ಆರ್ಥಿಕ ಅಂತರ ಕಂಡು ಬಂದು ಮೇಲ್ಸ್ತರದಲ್ಲಿರುವ ಶೇಕಡಾ 1 ರಷ್ಟು ಶ್ರೀಮಂತರು ಆರ್ಥಿಕ ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು ತಂದ ಅನುಕೂಲಗಳ ಸಿಂಹಪಾಲನ್ನು ಪಡೆಯುವಂತಾಯಿತು. ಆದರೆ ಕೆಲ ಮಧ್ಯಮ ಮತ್ತು ಬಡ ವರ್ಗಗಳಲ್ಲಿ ಆರ್ಥಿಕ ಸುಧಾರಣೆಗಳ ಪರಿಣಾಮ ತೀರಾ ಕಡಿಮೆ ಪ್ರಮಾಣದಲ್ಲಿ ಕಂಡು ಬಂತು. ತಳ ಆರ್ಥಿಕ ಗುಂಪುಗಳಿಂದ ಕೆಳಮಧ್ಯಮ ವರ್ಗಕ್ಕೆ ಮೇಲ್ಮುಖ ಚಲನೆಯನ್ನು ಪಡೆದಿದ್ದ ಶೇಕಡಾ 30 ರಷ್ಟು ಕೋವಿಡ್ ತಂಡ ಸಂಕಷ್ಟಗಳ ಕಾರಣದಿಂದಾಗಿ ಮತ್ತೆ ಆರ್ಥಿಕ ಹಿಂಬೀಳಿಕೆಯನ್ನು ಕಂಡದ್ದು ಅಸಮಾನತೆಯ ಕರಾಳ ಮುಖ ದರ್ಶನವನ್ನು ನೀಡಿದೆ.

ಭಾರತೀಯ ಸಮಾಜದಲ್ಲಿ ಲಿಂಗ ಆಧಾರಿತ ಅಸಮಾನತೆ ತೀರಾ ಹೆಚ್ಚಿನ ಪ್ರಮಾಣದಲ್ಲಿದೆ. ದೇಶದ ಆದಾಯದಲ್ಲಿ ಮಹಿಳಾ ಶ್ರಮಿಕ ವರ್ಗದ ಪಾಲು ಶೇಕಡಾ 18 ಮಾತ್ರ. ಇದು 21% ಇರುವ (ಚೀನಾ ದೇಶ ಹೊರತು ಪಡಿಸಿ) ಏಷಿಯಾ ಖಂಡದ ಸರಾಸರಿ ಆದಾಯಕ್ಕಿಂತ ಕಡಿಮೆ ಇದೆ. ಮಧ್ಯ ಪ್ರಾಚ್ಯ ದೇಶಗಳನ್ನು ಹೊರತುಪಡಿಸಿ ಇಡೀ ವಿಶ್ವದಲ್ಲೇ ಕಡಿಮೆ ಇರುವ ಸ್ಥಿತಿಯಲ್ಲಿ ನಾವಿದ್ದೇವೆ. ಒಂದೆಡೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಪಾಲು ಶೇ.50.5ಕ್ಕೆ ಹೋಗಿದ್ದು ಉದ್ಯೋಗ ಕ್ಷೇತ್ರದಲ್ಲಿ ಮಾತ್ರ ಇಂದಿಗೂ ಅವರ ಪಾಲು ಹೆಚ್ಚಳವನ್ನು ಕಾಣದಿರುವುದು ಸಮಕಾಲೀನ ಸಂದರ್ಭದ ವಿಪರ್ಯಾಸಗಳಲ್ಲಿ ಒಂದು.

ಭಾರತದಲ್ಲಿ ಇಂದು ಪ್ರತಿ ಕ್ಷೇತ್ರದಲ್ಲೂ ಖಾಸಗಿ ವಲಯದ ಪ್ರವೇಶ ಅಧಿಕ ಪ್ರಮಾಣದಲ್ಲಿ ಆಗಿದ್ದು ಅದರ ಪರಿಣಾಮವನ್ನೂ ಅತ್ಯಂತ ಪ್ರಖರವಾಗಿ ಎದುರಿಸುತ್ತಿರುವವರು ಕೆಳ ಮಧ್ಯಮ ವರ್ಗ ಮತ್ತು ಸಂಪನ್ಮೂಲ ವಂಚಿತರು. ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯ, ಸಾರಿಗೆ, ಸಂಪರ್ಕ, ತಾಂತ್ರಿಕ ಸೌಲಭ್ಯ, ನೀವು ಯಾವ ಕ್ಷೇತ್ರವನ್ನೇ ಹೆಸರಿಸಿ, ಗುಣಮಟ್ಟದ ಸೇವೆ ಬೇಕೆಂದರೆ ಖಾಸಗಿ ಸಂಸ್ಥೆಗಳತ್ತ ನೋಡಬೇಕು ಎನ್ನುವ ಭಾವನೆ ಆಳವಾಗಿ ಬೇರು ಬಿಟ್ಟಿದ್ದು ಸೇವೆಗಳೆಲ್ಲ ವಸ್ತುಗಳಾಗಿ ಪರಿವರ್ತಿತವಾಗುತ್ತಿವೆ. ಸಾಮಾಜಿಕ ವೆಚ್ಚ ಇಳಿಮುಖವಾಗುತ್ತಿದ್ದು ಖಾಸಗಿ ವೆಚ್ಚ ಹೆಚ್ಚಾಗುತ್ತಿದೆ. ಅಸಮಾನತೆ ಮತ್ತಷ್ಟು ಬೆಳೆಯುತ್ತಿದೆ.

20ನೇ ಶತಮಾನದ ಆರಂಭದಲ್ಲಿದ್ದ ಪಾಶ್ಚಿಮಾತ್ಯ ಆಧಿಪತ್ಯದ ಕಾಲದಲ್ಲಿ ಇದ್ದಷ್ಟೇ ಪ್ರಖರವಾದ ಮಟ್ಟದಲ್ಲಿ ಜಾಗತಿಕ ಅಸಮಾನತೆ ಇದೆ ಎಂದು ತಿಳಿಸಿರುವ ಜಾಗತಿಕ ಅಸಮಾನತಾ ವರದಿ ಈ ಪರಿಸ್ಥಿತಿಯಿಂದ ಹೊರ ಬರಲು ಬಹು ದೂರ ನಾವು ಸಾಗಬೇಕಿದೆ ಎಂಬ ಎಚ್ಚರಿಕೆಯನ್ನು ನೀಡಿದೆ. ಇನ್ನು ಮುಂದಾದರೂ ಸಮಾನತೆಯನ್ನು ನಾವು ಸಾಧಿಸಿಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿರುವವರೆಲ್ಲ ಈ ಸಮಾಜಕ್ಕೆ ಅಗತ್ಯವಿರುವುದು 'ಸಮತೆ' ಎಂಬ ಸತ್ಯವನ್ನು ಮನಗಂಡು ಕಾರ್ಯಪ್ರವೃತ್ತವಾಗಬೇಕಿದೆ.

ಮಹಿಳೆಯರ ಪುನರ್ವಸತಿ ಕೇಂದ್ರ 'ಶಕ್ತಿಧಾಮ'ಕ್ಕೆ 25ರ ಸಂಭ್ರಮ

ಶಕ್ತಿಧಾಮ ವಿದ್ಯಾಶಾಲೆಗೂ ಶಂಕುಸ್ಥಾಪನೆ

ಇಂದು ಮುಖ್ಯಮಂತ್ರಿಗಳಿಂದ ಇನ್‌ಫೋಸಿಸ್ ಫೌಂಡೇಷನ್ ಬ್ಲಾಕ್ ಲೋಕಾರ್ಪಣೆ

ಮೈಸೂರು, ಏ. 6(ಆರ್‌ಕೆ)– ಶೋಷಣೆಗೆ ಒಳಗಾದ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸಿ ಅವರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಕ್ತಿಧಾಮಕ್ಕೆ 25ರ ಸಂಭ್ರಮ.




ಬೊಮ್ಮಾಯಿ



ಕೆಂಪಯ್ಯ

ಈ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶಕ್ತಿಧಾಮ ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರದಲ್ಲಿ ನಿರ್ಮಿಸಿರುವ ಇನ್‌ಫೋಸಿಸ್ ಫೌಂಡೇಷನ್ ಬ್ಲಾಕ್ ಕಟ್ಟಡವನ್ನು ಸಿಎಂ ಬಸವರಾಜ ಬೊಮ್ಮಾಯಿ ಅವರು ನಾಳೆ (ಏ. 7) ಸಂಜೆ 4 ಗಂಟೆಗೆ ಲೋಕಾರ್ಪಣೆ ಮಾಡಲಿದ್ದಾರೆ.

ಇದೇ ವೇಳೆ ಶಕ್ತಿಧಾಮ ವಿದ್ಯಾಶಾಲಾ ಕಟ್ಟಡ ನಿರ್ಮಾಣಕ್ಕೂ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ನೆರವೇರಿಸುವರು. ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಇನ್‌ಫೋಸಿಸ್ ಕಾರ್ಯನಿರ್ವಾಹಕ ಉಪಾಧ್ಯಕ್ಷ ಶ್ರೀಪಾಜಿ ಮ್ಯಾಥ್ಯೂ, ಚಲನಚಿತ್ರ ನಟ ಶಿವರಾಜ್‌ಕುಮಾರ್, ಶಕ್ತಿಧಾಮದ ಅಧ್ಯಕ್ಷೆ ಗೀತಾ ಶಿವರಾಜ್‌ಕುಮಾರ್, ಉಪಾಧ್ಯಕ್ಷರಾದ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಹಾಗೂ ಶಾಸಕ ಎಸ್.ಎ. ರಾಮದಾಸ್ ಭಾಗವಹಿಸುವರು. ಶೋಷಿತ ಮಹಿಳೆಯರು ಮತ್ತು ಅವರ ಮಕ್ಕಳಿಗೆ ಆಶ್ರಯ ನೀಡಿ ಅವರ ಅಭಿವೃದ್ಧಿ ಮಾಡುವ ಸಲುವಾಗಿ 1997ರಲ್ಲಿ ಪ್ರಾರಂಭವಾದ 'ಶಕ್ತಿಧಾಮ' ಈಗ 25 ವರ್ಷಗಳನ್ನು ಪೂರೈಸಿ, ಅಪಾರ ಸಂಖ್ಯೆಯ ನಿರಾಶ್ರಿತ ಮಹಿಳೆಯರು ಮತ್ತು ಮಕ್ಕಳಿಗೆ ಬದುಕು ಕಟ್ಟಿಕೊಟ್ಟಿದೆ. ಈ ಹಿನ್ನೆಲೆ ಯಲ್ಲಿ ಇನ್‌ಫೋಸಿಸ್ ಫೌಂಡೇಷನ್ ಶಕ್ತಿ ಧಾಮದಲ್ಲಿ ಫೌಂಡೇಷನ್ ಬ್ಲಾಕ್ ಹೆಸರಿ ನಲ್ಲಿ ಕಟ್ಟಡ ನಿರ್ಮಿಸಿದೆ. ಇದರೊಂದಿಗೆ ಬೃಹತ್ ವಿದ್ಯಾಶಾಲಾ ನಿರ್ಮಿಸಲು ಸಹ ಶಂಕು ಸ್ಥಾಪನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.





ಶಕ್ತಿಧಾಮ ನಡೆದು ಬಂದ ದಾರಿ

ಕೌಟುಂಬಿಕ ಹಿನ್ನೆಲೆ ಕಳೆದುಕೊಂಡು ಶೋಷಣೆಗೆ ಒಳಗಾದ ಮಹಿಳೆಯರ ಪುನರ್ವಸತಿ ಹಾಗೂ ಅಭಿವೃದ್ಧಿಗಾಗಿ ಶಕ್ತಿಧಾಮವು 1997ರಲ್ಲಿ ಆರಂಭಗೊಂಡಿತು. ಪುರುಷ ಪ್ರಧಾನ ಸಮಾಜದ ನಮ್ಮ ಕಾನೂನು ಶೋಷಿತ ಮಹಿಳೆಯರನ್ನು ಸುಲಭವಾಗಿ ಶಿಕ್ಷೆಗೆ ಗುರಿ ಮಾಡುತ್ತದೆ. ಆದರೆ ಅಂದಿನ ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದ ಕೆಂಪಯ್ಯನವರು ನೊಂದ ಮಹಿಳೆಯರ ದುಃಖಕ್ಕೆ ಮಾನವೀಯ ನೆಲೆಯ ಪರಿಹಾರ ಹುಡುಕುತ್ತಾ ವರನಟ ಡಾ. ರಾಜ್‌ಕುಮಾರ್ ಹಾಗೂ ಪತ್ನಿ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಸಮಸ್ಯೆಯನ್ನು ನಿವೇದಿಸಿದರು. ಅದಕ್ಕೆ ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿಯವರೂ ಸಹ ಸ್ಪಂದಿಸಿ ಆಶೀರ್ವದಿಸಿದ್ದರು.

ಹೀಗೆ ಡಾ. ರಾಜ್ ದಂಪತಿಗಳ ಅಂತಃಕರಣಪೂರ್ವಕ ಸ್ಪಂದನೆಯಿಂದಾಗಿ 'ಶಕ್ತಿಧಾಮ' ಅಸ್ತಿತ್ವಕ್ಕೆ ಬಂದಿತು. ಸಮಾನ ಮನಸ್ಕ ಧರ್ಮದರ್ಶಿಗಳೂ ಈ ಕಾರ್ಯಕ್ಕೆ ಕೈಜೋಡಿಸಿದ್ದರು. ಪಾರ್ವತಮ್ಮ ರಾಜ್‌ಕುಮಾರ್ ಅವರ ಅಧ್ಯಕ್ಷತೆಯಲ್ಲಿ, ಮಹಿಳಾಪರ ಕಾಳಜಿಯುಳ್ಳ ಸದಸ್ಯರ ಶ್ರಮದಿಂದಾಗಿ ಶಕ್ತಿಧಾಮವು 25 ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿದೆ. ಆರಂಭದಿಂದ ಈವರೆಗೆ 4000ಕ್ಕೂ ಹೆಚ್ಚು ಶೋಷಿತ ಮಹಿಳೆಯರಿಗೆ ಆಪ್ತಸಮಾಲೋಚನೆ, ತಾತ್ಕಾಲಿಕ ಆಶ್ರಯವನ್ನು ನೀಡಲಾಗಿದೆ. ಸಾವಿರಾರು ಮಹಿಳೆಯರು ಮತ್ತು ಅವರ ಮಕ್ಕಳಿಗೆ ಪುನರ್ವಸತಿ ಮತ್ತು ಆರ್ಥಿಕ ಸ್ವಾವಲಂಬನೆಯನ್ನೂ ಕಲ್ಪಿಸಲಾಗಿದೆ. ಬಡ, ಶೋಷಿತ ಕುಟುಂಬಗಳಿಂದ ಬಂದ, ಅವಕಾಶ ವಂಚಿತ ತಳಸಮುದಾಯದ ಹೆಣ್ಣುಮಕ್ಕಳಿಗೆ ಶಿಕ್ಷಣದ ಮೂಲಕ ಸ್ವಾವಲಂಬನೆಯ ಬದುಕು ಕಟ್ಟಿಕೊಡುವ ಉದ್ದೇಶದಿಂದ ಈಗಾಗಲೇ 160ಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ವಸತಿಸಹಿತ ಶಿಕ್ಷಣ ಸೌಲಭ್ಯವನ್ನು ಕಲ್ಪಿಸಲಾಗಿದ್ದು,



ಮುಂದಿನ ವರ್ಷಗಳಲ್ಲಿ ಮತ್ತಷ್ಟು ಹೆಣ್ಣುಮಕ್ಕಳಿಗೆ ಅವಕಾಶ ನೀಡಲು ಹೊಸದಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ಪಾರ್ವತಮ್ಮ ರಾಜ್‌ಕುಮಾರ್ ಅವರ ನಂತರ ಸೊಸೆ ಗೀತಾ ಶಿವರಾಜ್‌ಕುಮಾರ್ ಅವರು ಅಧ್ಯಕ್ಷರಾಗಿ ಸಮರ್ಪಣಾ ಮನೋಭಾವನೆಯಿಂದ ಶಕ್ತಿಧಾಮವನ್ನು ಮುನ್ನಡೆಸುತ್ತಿದ್ದಾರೆ. ಅದಕ್ಕೆ ಶಿವರಾಜ್‌ಕುಮಾರ್ ಬೆನ್ನೆಲುಬಾಗಿ ನಿಂತಿದ್ದಾರೆ.

ಗುರುವಾರ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿಯವರ ಅಮೃತ ಹಸ್ತದಿಂದ 'ಶಕ್ತಿಧಾಮ ವಿದ್ಯಾಶಾಲೆ'ಯ ಶಿಲಾನ್ಯಾಸವು ನೆರವೇರಲಿದೆ. ಇದಕ್ಕೆ ಸರ್ಕಾರದ ನೆರವಿನ ಆಶ್ವಾಸನೆಯೂ ದೊರೆತಿದೆ. ಹೀಗೆ ಬೃಹತ್ ಶಾಲಾ ಕಟ್ಟಡ ನಿರ್ಮಾಣಕ್ಕೆ ನೆರವು ನೀಡುವ ಮೂಲಕ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರವು ನೆರವಾಗುತ್ತಿರುವುದು, ಇನ್‌ಫೋಸಿಸ್ ನಿರ್ಮಿಸಿ ಕೊಟ್ಟಿರುವ ಕಟ್ಟಡದ ಉದ್ಘಾಟನೆ ನೆರವೇರುತ್ತಿರುವುದು ಇನ್ನೂ ಹೆಚ್ಚಿನ ಸಂಖ್ಯೆಯ ಅವಕಾಶ ವಂಚಿತ ಹೆಣ್ಣುಮಕ್ಕಳಿಗೆ, ನೊಂದ ಮಹಿಳೆಯರ, ಮಕ್ಕಳ ಸ್ವಾವಲಂಬನೆಯ ಧೀಮಂತ ಮಾರ್ಗವೊಂದು ತೆರೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಸಮಾಜದ ಸಮಸ್ತ ಜನರ ನೆರವು–ಸಹಕಾರಗಳಿರುವುದು ಶಕ್ತಿಧಾಮಕ್ಕೆ ಬಲಬಂದಂತಾಗಿದೆ.



ಇಂದು ಲೋಕಾರ್ಪಣೆಗೊಳ್ಳಲಿರುವ ಇನ್‌ಫೋಸಿಸ್ ಫೌಂಡೇಶನ್ ಬ್ಲಾಕ್.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನನಗೆ 2023ರ ಚುನಾವಣೆ ಮುಖ್ಯವಲ್ಲ: ಶಾಂತಿಯ ತೋಟ ಕರ್ನಾಟಕಕ್ಕೆ ಧಕ್ಕೆ ತರಲು ಬಿಡುವುದಿಲ್ಲ

ಮೈಸೂರಲ್ಲಿ ಸರ್ವಜನಾಂಗದ ಶಾಂತಿಯ ತೋಟ ವಿಶೇಷ ಭಾವೈಕ್ಯತಾ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಗುಡುಗು




ಮೈಸೂರಿನ ಕಲಾಮಂದಿರದಲ್ಲಿ ಲೋಕನಾಯಕ ಜೆ.ಪಿ.ವಿಚಾರ ವೇದಿಕೆಯಿಂದ ಬುಧವಾರ 'ಸರ್ವ ಜನಾಂಗದ ಶಾಂತಿಯ ತೋಟ' ಒಂದು ಭಾವೈಕ್ಯತೆಯ ಚರ್ಚೆ ಕಾರ್ಯಕ್ರಮ ನಡೆಯಿತು.

ಮೈಸೂರು, ಏ.6(ಆರ್‌ಕೆಬಿ)– ನನಗೆ 2023ರ ಚುನಾವಣೆ ಮುಖ್ಯವಲ್ಲ. ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ಆದರೆ ಈ ತೋಟಕ್ಕೆ ಹಿಂದೂ ಸಮಾಜದ ಕೆಲವರು ಧಕ್ಕೆ ತರುವ ಯತ್ನ ಮಾಡುತ್ತಿದ್ದಾರೆ. ಅದನ್ನು ತಡೆಯುವ ಉದ್ದೇಶದಿಂದ ದನಿ ಎತ್ತಿದ್ದೇನೆ. ಹೋರಾಟಕ್ಕಿಳಿದಿದ್ದೇನೆ. ಕುವೆಂಪು ಹೇಳಿದಂತೆ ಹಿಂದೂ, ಕ್ರೈಸ್ತ, ಮುಸಲ್ಮಾನ.. ಪಾರಸಿಕ, ಜೈನರುದ್ಯಾನ. ಇದು ಉಳಿಯಬೇಕು. ಜನ ಶಾಂತಿಯಿಂದಿರಬೇಕು ಎಂಬುದು ನನ್ನ ಹೋರಾಟ. ಅದಕ್ಕೆ ನಾಂದಿ ಹಾಡಿದ್ದೇನೆ. ಹೋರಾಟ ನಿರಂತರವಾಗಿರಲಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಲೋಕನಾಯಕ ಜೆ.ಪಿ.ವಿಚಾರ ವೇದಿಕೆ ಬುಧವಾರ ಏರ್ಪಡಿಸಿದ್ದ 'ಸರ್ವ ಜನಾಂಗದ ಶಾಂತಿಯ ತೋಟ' ಒಂದು ಭಾವೈಕ್ಯತೆಯ ಚರ್ಚೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕರಾವಳಿಯ ಶಾಲೆಯೊಂದರಲ್ಲಿ ಪ್ರಾರಂಭವಾದ ಸಮವಸ್ತ್ರದ ವಿಷಯದಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸದೇ ಸಮರ್ಪಕವಾಗಿ ಪರಿಸ್ಥಿತಿ ನಿರ್ವಹಣೆ ಮಾಡಿದ್ದರೆ ಇಂದಿನ ಪರಿಸ್ಥಿತಿ ರಾಜ್ಯದಲ್ಲಿ ಇರುತ್ತಿರಲಿಲ್ಲ. ಸಣ್ಣ ಘಟನೆಯನ್ನು ದೊಡ್ಡದು ಮಾಡಲು ಮುಂದಾದ ಕೆಲವು ಕಿಡಿಗೇಡಿ, ಸಮಾಜಘಾತುಕ ಶಕ್ತಿಗಳಿಗೆ ಪ್ರೋತ್ಸಾಹ ಕೊಟ್ಟು ಸರ್ಕಾರ ಮೌನಕ್ಕೆ ಶರಣಾಯಿತು. ಈ ವಿಷಯ ಮಾತನಾಡಲು ದೊಡ್ಡ ದೊಡ್ಡ ರಾಜಕೀಯ ಪಕ್ಷಗಳು ಭಯ ಬಿದ್ದವು. ಮತ್ತೆ ಚುನಾವಣೆಯಲ್ಲಿ ನಮ್ಮ ಹಣೆ ಬರಹ ಏನಾಗುತ್ತೋ ಎಂಬ ಭಾವನೆಯಿಂದ ಜವಾಬ್ದಾರಿ ನಿರ್ವಹಿಸಬೇಕಾದ ರಾಜಕೀಯ ಜನಪ್ರತಿನಿಧಿಗಳು ಮೌನಕ್ಕೆ ಶರಣಾದರು. ಹೀಗಾಗಿ ಕೆಲವು ಸಮಾಜಘಾತುಕ ಶಕ್ತಿಗಳು ಜಿಲ್ಲೆ, ರಾಜ್ಯದಲ್ಲಿ ವ್ಯಾಪಕವಾಗಿ ಈ ಅನಗತ್ಯ ವಿಚಾರ ಹರಡಿ ಕೆಟ್ಟ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ ಎಂದು ಸರ್ಕಾರವನ್ನು ಟೀಕಿಸಿದರು.

ಜಾತ್ರಾ ಮಹೋತ್ಸವದಲ್ಲಿ ಹಿಂದೂ–ಮುಸ್ಲಿಮರು ಸಾಮರಸ್ಯದಿಂದ ಅಂಗಡಿ ಹಾಕಿ ಪರಸ್ಪರ ಸಹಕಾರ ಮನೋಭಾವದಿಂದ ಇದ್ದರು. ಅದಕ್ಕೆ ಧಕ್ಕೆ ತರುವ ರೀತಿ ಕಿಡಿಗೇಡಿಗಳು ಬ್ಯಾನರ್, ಕರಪತ್ರಗಳನ್ನು ಹಂಚಿದರು. ಕಳೆದ 40–50 ವರ್ಷಗಳಿಂದ ಇದು ನಡೆದು ಬಂದಿದ್ದರೂ ಅದರ ಬಗ್ಗೆ ಮಾತನಾಡದವರು ಈಗೇಕೆ ಮಾಡುತ್ತಿದ್ದಾರೆ ಎಂದು ನಾನು ವಿಧಾನಸಭೆಯಲ್ಲಿ ಪ್ರಶ್ನಿಸಿದ್ದೇನೆ. ಸರ್ವ ಜನಾಂಗದ ಶಾಂತಿಯ ತೋಟವನ್ನು ಹಾಳು ಮಾಡಬೇಡಿ ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದೇನೆ ಎಂದರು.

ಹಿಂದೂ–ಮುಸ್ಲಿಂ ನೂರಾರು ವರ್ಷಗಳಿಂದ ಪರಸ್ಪರ ಅನ್ಯೋನ್ಯವಾಗಿ ಬದುಕುತ್ತಿದ್ದಾರೆ. ಹಿಜಾಬ್, ಹಲಾಲ್ ಕಟ್, ಆಜಾನ್ ಎಂದು ಹೇಳಿಕೊಂಡು ಇವರ ಮಧ್ಯೆ ವೈಮನಸ್ಯ, ದ್ವೇಷ ತಂದಿಡುವ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆಯೂ ನಾನು ಪ್ರಶ್ನಿಸಿದ್ದೇನೆ. ಕೆಲವರು ಬಿಜೆಪಿಯವರೇ ಕುಮಾರಸ್ವಾಮಿ ಅವರಿಗೆ ಸುಪಾರಿ ಕೊಟ್ಟಿದ್ದಾರೆ ಎಂಬ ಚರ್ಚೆ ಶುರು ಮಾಡಿದ್ದಾರೆ. ಇದು ನನಗೆ ಅತಿಯಾದ ನೋವು ತರುವ ಸಂಗತಿ ಎಂದು ಹೇಳಿದರು.

2023ರ ಚುನಾವಣೆ ನನಗೆ ಮುಖ್ಯವಲ್ಲ. ಈ ನಾಡಿನ 6.5 ಕೋಟಿ ಜನರೇ ನನಗೆ ಸುಪಾರಿ ಕೊಟ್ಟಿದ್ದಾರೆ. ನಾವು ಭೂಮಿಗೆ ಹೇಗೆ ಬಂದಿದ್ದೇವೋ ಹಾಗೆ ಹೋಗುವಾಗಲೂ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. 2014ರಿಂದ ಈ ದೇಶದಲ್ಲಿ ಯಾರೂ ಮಾತನಾಡುವ ಪರಿಸ್ಥಿತಿ ಉಳಿದಿಲ್ಲ. ಯಾವುದೇ ರಾಷ್ಟ್ರೀಯ ಪಕ್ಷಗಳ ಮುಖಂಡರು ವಾಸ್ತವಾಂಶ, ಸತ್ಯ ಮಾತನಾಡಿದರೆ ಯಾವುದಾದರೂ ಒಂದು ರೀತಿಯಲ್ಲಿ ಅವರಿಗೆ ಹಿಂಸೆ ಕೊಡುವುದು, ಅಘೋಷಿತ ತುರ್ತುಪರಿಸ್ಥಿತಿ ರೀತಿ ಇದೆ. ಅನ್ಯಾಯ ಮಾಡಬೇಡಿ, ದೇಶ ಹಾಳು ಮಾಡಬೇಡಿ, ಸತ್ಯಾಂಶವನ್ನು ಹೊರಗಿಡಿ ಎಂದೆ. ಯಾರೂ ಸಹಕರಿಸಲಿಲ್ಲ ಎಂದು ಕುಮಾರಸ್ವಾಮಿ ಬೇಸರದಿಂದ ನುಡಿದರು.

ಮಾಂಸದಂಗಡಿಗೆ ರಾತ್ರೋರಾತ್ರಿ ಲೈಸೆನ್ಸ್ ಕೊಟ್ಟವರ್ಯಾರು? ಹಿಂದವಿ ಮೀಟ್ ಸೆಂಟರ್‌ಗೆ ರಾತ್ರೋರಾತ್ರಿ ಅನುಮತಿ ನೀಡಿದವರು ಯಾರು? ಹೊಟ್ಟೆಪಾಡಿಗೆ ಜೀವನಕ್ಕಾಗಿ ಅಂಗಡಿ ಮಾಡಲು ಲೈಸೆನ್ಸ್ ಕೇಳಿದರೆ ಸಿಗುವುದಿಲ್ಲ. ಆದರೆ ಇವರಿಗೆ ರಾತ್ರೋರಾತ್ರಿ ಲೈಸೆನ್ಸ್ ಕೊಟ್ಟವರ್ಯಾರು? ಯಾರಾದರೂ ಚರ್ಚೆ ಮಾಡುತ್ತಿದ್ದಾರೆಯೇ? ಇವರು ಸಸ್ಯಾಹಾರಿಗಳು. ಇವರಿಗೇಕೆ ಮಾಂಸ ಮಾರುವ ಚಿಂತೆ ಬಂತು? ಹಿಂದುತ್ವದ ಸಂದೇಶ ನೀಡುತ್ತಿರುವವರೇ ನಮಗಿಂತ ಹೆಚ್ಚಾಗಿ ಮಾಂಸ ಬಳಸುವವರು. ಅವರು ನನಗೆ ಏನು ಬೇಕಾದರೂ ಹೇಳಲಿ ಎಂದು ಕಿಡಿಕಾರಿದರು.

ಮೌನಕ್ಕೆ ಶರಣಾಗಿರುವ ಸಿಎಂ: ಮುಖ್ಯಮಂತ್ರಿಗಳೇ ಮೌನಕ್ಕೆ ಶರಣಾಗಿದೆ ನಿಮ್ಮ ಸರ್ಕಾರ. ಏಕೆ ಮೌನ ಬಸವನಂತಾಗಿದ್ದೀರಿ ಎಂದು ಕೇಳಿದರೆ, ಅದಕ್ಕವರು, ಆಮೇಲೆ ಹೇಳುತ್ತೇನೆ ಎನ್ನುತ್ತಾರೆ. ಆದರೆ ನಾನೆಂದೂ ಯಾರ ಮನೆ ಬಾಗಿಲಿಗೆ ನನ್ನ ಸ್ವಾರ್ಥಕ್ಕೋಸ್ಕರ ಇಂದಿನವರೆಗೂ ಹೋಗಿಲ್ಲ. ಇಂದು ನಾಡಿನಲ್ಲಿರುವ ಪರಿಸ್ಥಿತಿ ನೋಡಿ ನಾನು ದನಿ ಎತ್ತಿದ್ದೇನೆಯೇ ಹೊರತು ಮತಗಳಿಗೋಸ್ಕರವಾಗಿ ಅಲ್ಲ. ಈ ವೇದಿಕೆ ಮೂಲಕ ಸ್ಪಷ್ಟವಾಗಿ ಈ ಚಾಮುಂಡೇಶ್ವರಿ ಸನ್ನಿಧಾನದಲ್ಲಿ ಹೇಳುತ್ತಿದ್ದೇನೆ. ನನಗೆ ಜನರು ಬದುಕು ಬೇಕು ಅಷ್ಟೆ ಎಂದರು.

ಕಲಾಪಗಳಲ್ಲಿ ರೈತರ ಬಗ್ಗೆ ಜನರ ಸಮಸ್ಯೆಗಳ ಬಗ್ಗೆ ಚರ್ಚೆಸಲ್ಲ. ಹಿಜಾಬ್ ಅಂತೆ, ಹಲಾಲ್‌ಕಟ್ ಅಂತೆ. ಆಜಾನ್ ಅಂತೆ. ಈಗ ಮುಸ್ಲಿಮರ ಬಳಿ ಮಾವು ಕೊಳ್ಳಬಾರದಂತೆ. ರೈತ ಕಷ್ಟಪಟ್ಟು ಬೆಳೆದ ಬೆಳೆ ರೈತನ ಮಾವು. ಹುಡುಗಾಟ ಆಡಬೇಡಿ. ಹಣ್ಣು, ದ್ರಾಕ್ಷಿ, ಹುಣಸೆಹಣ್ಣು, ರೇಷ್ಮೆಗೂಡು ಮುಸ್ಲಿಂ ಬಂಧುಗಳು ಖರೀದಿ ಮಾಡದಿದ್ದರೆ ಹೇಗೆ? ದೆಹಲಿಯಲ್ಲಿ ಶಾಂತಿಯಿಂದ ಪ್ರತಿಭಟನೆ ಮಾಡುತ್ತಿದ್ದ ಕಡೆ 5 ದಿನ ದೊಂಬಿ ಎಬ್ಬಿಸಿ 53 ಜನರ ಮಾರಣಹೋಮ ಮಾಡಿದರು. ಅವರಲ್ಲಿ ಯಾರಿಗಾದರೂ ಶಿಕ್ಷೆ ಕೊಟ್ಟಿದ್ದಾರೆಯೇ? ಇದರ ಬಗ್ಗೆ ದನಿ ಎತ್ತಿದ್ದೇನೆ. ಯಾರೂ ದನಿ ಎತ್ತಲಿಲ್ಲ. ಹಾಗಾಗಿ ನಾನು ದನಿ ಎತ್ತಿ ಹೊರಟಿದ್ದೇನೆ. ನಮಗೆ ತೊಂದರೆ ಆದರೂ ಪರವಾಗಿಲ್ಲ. ಶಾಂತಿಗಾಗಿ ಹೊರಟಿದ್ದೇನೆ. ಆಜಾನ್ ಬಗ್ಗೆ ಕರಪತ್ರ ಹಂಚಿದವರು, ಬ್ಯಾನರ್ ಕಟ್ಟಿದವರನ್ನು ಯಾಕೆ ಬಂಧಿಸಲಿಲ್ಲ ಎಂದು ಪ್ರಶ್ನಿಸಿದರು.

ಕರ್ನಾಟಕ ಉತ್ತರಪ್ರದೇಶ ಆಗಲು ಬಿಡುವುದಿಲ್ಲ: ಕರ್ನಾಟಕ ಉತ್ತರಪ್ರದೇಶ ಮಾಡಲು ಬಿಡುವುದಿಲ್ಲ. ಈ ಸಂದೇಶ ಕರ್ನಾಟಕದಿಂದಲೇ ಆರಂಭವಾಗಬೇಕು. ಕೀಳು ಮಟ್ಟದ ವಾಟ್ಸಾಪ್ ಸಂದೇಶಗಳಿಗೂ ನಾನು ಹೆದರುವುದಿಲ್ಲ ಎಂದರು.

ನಾವು ಇವರ ವಿರುದ್ಧ ಮಾತನಾಡಿದರೆ ನಾವು ರಾಷ್ಟ್ರದ್ರೋಹಿಗಳಂತೆ. ಇವರೆಲ್ಲರೂ ರಾಷ್ಟ್ರಪ್ರೇಮಿಗಳಂತೆ. ಪೆಟ್ರೋಲ್ ಬೆಲೆ 111 ಮಾಡಿ, ಮೂರು ನಾಮ ಹಾಕಿದ್ದಾರೆ. ಗ್ಯಾಸ್ ದರ ಗಗನಕ್ಕೇರಿದೆ. ಕಡಿಮೆ ಮಾಡಲು ಹೋರಾಟ ಮಾಡಿ ಹಿಂದೂ ಪ್ರೇಮಿಗಳೇ ಎಂದು ಕುಮಾರಸ್ವಾಮಿ ಹಿಂದೂಪರ ಸಂಘಟನೆಗಳಿಗೆ ಕರೆ ನೀಡಿದರು.

ಕೇಸರಿ ಬಟ್ಟೆ ಧರಿಸಿ, ಬೆಂಕಿ ಹಚ್ಚುವ ಕೆಲಸ ಬೇಡ: ಕೇಸರಿ ಬಟ್ಟೆ ಹಾಕಿಕೊಂಡು ಬೆಂಕಿ ಹಚ್ಚುವ ಕೆಲಸ ಮಾಡಬೇಡಿ. ಕೇಸರಿ ಪವಿತ್ರವಾದ ಬಟ್ಟೆ. ಬೀದಿಯಲ್ಲಿ ಓಡಾಡುವವರು ಹಾಕಿಕೊಂಡು ಜೈ ಶ್ರೀರಾಂ ಎಂದು ರಾವಣ ರಾಜ್ಯ ಮಾಡಬೇಡಿ. ಸಮಾಜದಲ್ಲಿರುವ ಸಹಬಾಳ್ವೆಯನ್ನು ಈ ಕಿಡಿಗೇಡಿಗಳು ಕಲುಷಿತಗೊಳಿಸುತ್ತಿದ್ದಾರೆ. ಅವರಿಗೆ ಬುದ್ಧಿ ಕೊಡಿ ಎಂದು ನಿಮ್ಮ ಪವಿತ್ರ ರಂಜಾನ್ ವೇಳೆ ದೇವರಲ್ಲಿ ಪ್ರಾರ್ಥನೆ ಮಾಡಿ ಎಂದು ಮುಸ್ಲಿಮರಲ್ಲಿ ಮನವಿ ಮಾಡಿದರು.

ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ದುಷ್ಟ ಶಕ್ತಿಗಳ ಬಗ್ಗೆ ಎಚ್ಚರಿಕೆಯಿಂದ ವರ್ತಿಸಿ, ಆದರೆ ಹೆದರಬೇಕಿಲ್ಲ ಎಂದು ಮುಸ್ಲಿಮರಲ್ಲಿ ಧೈರ್ಯ ತುಂಬಿದರು. ಸರ್ಕಾರಕ್ಕೆ 1 ತಿಂಗಳ ಅವಕಾಶ ನೀಡಿದ್ದೇನೆ. ತಿಳಿ ವಾತಾವರಣ ನಿರ್ಮಿಸಿ ಎಂದು ಎಚ್ಚರಿಕೆ ನೀಡಿದ್ದೇನೆ. ಇದೇ ರೀತಿ ಮುಂದುವರಿದರೆ ಸರ್ಕಾರವನ್ನೇ ಕಿತ್ತೊಗೆಯುತ್ತೇವೆ ಎಂದು ಆಕ್ರೋಶದಿಂದ ನುಡಿದರು. ಕಾರ್ಯಕ್ರಮದಲ್ಲಿ ಚಿಂತಕ ಪ್ರೊ.ಪಿ.ವಿ.ನಂಜರಾಜ ಅರಸು, ಪತ್ರಕರ್ತ ಬಿ.ಎಂ.ಹನೀಫ್, ಅಖಿಲ ಭಾರತ ಮಿಲ್ಲಿ ಕೌನ್ಸಿಲ್ ಅಧ್ಯಕ್ಷ ಮೌಲಾನಾ ಜಕಾವುಲ್ಲಾ ಸಿದ್ದಿಕಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮೈಸೂರು ಸಿಎಸ್‌ಐ ಅಧ್ಯಕ್ಷ ರೆವರೆಂಡ್ ಗುರುಶಾಂತ, ಎಂಎಲ್‌ಸಿ ಗಳಾದ ಕೆ.ಎನ್.ಶ್ರೀಕಂಠೇಗೌಡ, ಸಿ.ಎನ್.ನಂಜೇಗೌಡ, ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಇನ್ನಿತರರು ಉಪಸ್ಥಿತರಿದ್ದರು.

> “ಎರಡು ಬಾರಿ ಮುಖ್ಯಮಂತ್ರಿಯಾಗಿರುವ ನನಗೆ ಈಗ ಬೇಕಿರುವುದು ಶಾಂತಿ. ಸಮಾಜದಲ್ಲಿ ಆತಂಕ, ಭಯದ ವಾತಾವರಣ ನಿರ್ಮಿಸುತ್ತಿರುವವ ವಿರುದ್ಧ ನನ್ನ ಹೋರಾಟ. ದನಿ ಎತ್ತಿ ನಿಷ್ಕಲ್ಮಶದಿಂದ ಹೋರಾಡುತ್ತೇನೆ. ದುಷ್ಟ ಶಕ್ತಿಗಳನ್ನು ಮಟ್ಟ ಹಾಕಲು ನನ್ನ ಹೋರಾಟ. ನೀವು ಮತ ಯಾರಿಗಾದರೂ ಹಾಕಿರಿ. ನಾನು ಮತಕ್ಕಾಗಿ ಹೋರಾಟ ಮಾಡುತ್ತಿಲ್ಲ ಎಂಬುದನ್ನು ಈ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಹೇಳುತ್ತಿದ್ದೇನೆ. **– ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ**

> “ಪಕ್ಕದ ಮನೆಯವನು ಹಿಂದೂ ಇರಲಿ, ಮುಸ್ಲಿಂ ಇರಲಿ ಅವನ ಸಂರಕ್ಷಣೆ ಮಾಡುವುದು ನಿಮ್ಮ ಕೆಲಸ. ಇಷ್ಟು ಮಾತ್ರವಲ್ಲ ಕುರಾನ್ ಹೇಳುತ್ತದೆ. ಯಾರೇ ಬೇಡುವವರು ಬಂದರೂ ಹಿಂದೂ ಬರಲಿ, ಮುಸ್ಲಿಂ ಬರಲಿ ಅವನನ್ನು ತೃಪ್ತಿಪಡಿಸಿ ಕಳಿಸು. ಇಂದು ಮಸೀದಿಗೆ ಹಿಂದೂಗಳನ್ನು ಬರಬೇಡ ಎಂದು ಹೇಳುವ ಅಧಿಕಾರ ಯಾವ ಮುಸ್ಲಿಮರಿಗೂ ಇಲ್ಲ. ಏಕೆಂದರೆ ಅದು ದೇವರ ಮನೆ. ವಸುದೈವ ಕುಟುಂಬಕಂ, ಸರ್ವೇಜನ ಸುಖಿನೋ ಭವಂತು. ಇದು ಧರ್ಮದ ಪೂರ್ವ ಸಿದ್ಧಾಂತ. ಇವನಾರವ ಇವನಾರವ ಎನಿಸದಿರಯ್ಯ ಇವ ನಮ್ಮವ ಇವ ನಮ್ಮವ ಎನಿಸಯ್ಯ ಎನಗಿಂತ ಕಿರಿಯನಿಲ್ಲ.. ಇದರ ಸಾರ ಹೇಳಿದ ನಾಡಿನಲ್ಲಿ ಹುಟ್ಟಿರುವ ನಾವು, ಇಂತಹ ಕಾರ್ಯಕ್ರಮಗಳನ್ನು ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ವಿಜಯಪುರ ಇಂತಹ ಕಡೆ ಕೊಂಡೊಯ್ಯಬೇಕು. ನಮ್ಮ ಗುರಿ ಒಂದೇ. 1995ರಲ್ಲಿ ಏನು ಮಾಡಿದ್ದೇವೋ ಅದನ್ನು 2023ರಲ್ಲಿ ಮಾಡೋಣ ಎಂದು ಸಂಕಲ್ಪ ತೊಡೋಣ
> **– ಸಿ.ಎಂ.ಇಬ್ರಾಹಿಂ, ಮಾಜಿ ಕೇಂದ್ರ ಸಚಿವ**

> “ಮೊದಲು ಮೊಟ್ಟೆ ಗಲಾಟೆ, ನಂತರ ತಲೆ ಮೇಲಿನ 'ಬಟ್ಟೆ' ಗಲಾಟೆ, ಬಳಿಕ 'ಹೊಟ್ಟೆ'ಗೆ ತಿನ್ನುವ ಆಹಾರದ ಗಲಾಟೆ. ದಾರಿ ತಪ್ಪಿದ ಮನುಷ್ಯರಿಗೆ ಸರಿ ದಾರಿ ತೋರಿಸಲು ಇರುವುದು ಧರ್ಮ. ಆದರೆ ಇಂದು ಧರ್ಮ ದ್ರೋಹದ ಕೆಲಸ ನಡೆಯುತ್ತಿದೆ. ಅಂಥ ಧರ್ಮ ದ್ರೋಹಿಗಳಿಗೆ ಬುದ್ಧಿ ಕಲಿಸಬೇಕಾಗಿದೆ. ಧರ್ಮ ಭೇದ ಬಿಡೋಣ. ಧರ್ಮ ಧರ್ಮಗಳ ಮಧ್ಯೆ ಬೆಂಕಿ ಹಚ್ಚಿದವರಿಗೆ ಮುಂದೆ ನರಕ ದರ್ಶನ ಕಾದಿದೆ. ಆ ಕೆಲಸ ಸೃಷ್ಟಿಕರ್ತನಿಂದಲೇ ಆಗುತ್ತದೆ. ಹಾಗಾಗಿ ಪರಸ್ಪರ ಸಹಕಾರ ಮನೋಭಾವದಿಂದ ಬದುಕುವುದನ್ನು ಕಲಿಯಬೇಕಿದೆ. ಅದಕ್ಕಾಗಿ ಇಂತಹ ಕಾರ್ಯಕ್ರಮ ಹೆಚ್ಚು ಹೆಚ್ಚು ನಡೆಯಬೇಕು.
> **– ಬಸವಲಿಂಗಮೂರ್ತಿ ಶರಣರು, ಬಸವಧ್ಯಾನ ಮಂದಿರ**

ವಿಕೃತ ಸಂತೋಷದಿಂದ ಸಂಭ್ರಮಿಸುತ್ತಿರುವ ಸಮಾಜ: ಡಾ.ಮಾಲಗತ್ತಿ ಬೇಸರ

ಮೈಸೂರು: ಇಂದು ನಮ್ಮ ಸಮಾಜ ವಿಕೃತ ಸಂತೋಷದಿಂದ ಸಂಭ್ರಮಿಸುತ್ತಿದೆ. ಇದು ಭಾರತೀಯ ಪರಂಪರೆಯ ಪ್ರತೀಕ ಎನ್ನುತ್ತಾರೆ. ಭಾರತೀಯ ಪರಂಪರೆಯ ಸ್ವರೂಪವೇ ಬೇರೆ. ಹೀಗಾಗಿ ನನಗೆ ಇಲ್ಲಿ ಶರೀಫರ ಹಾಡು ನೆನಪಾಗುತ್ತದೆ ಎಂದು ಸಾಹಿತಿ ಡಾ.ಅರವಿಂದ ಮಾಲಗತ್ತಿ ತಿಳಿಸಿದರು.

ಸರ್ವ ಜನಾಂಗದ ಶಾಂತಿಯ ತೋಟ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ತರವಲ್ಲ ತಗಿ ನಿನ್ನ ತಂಬೂರಿ... ಬರದೇ ಬಾರಿಸದಿರು ತಂಬೂರಿ...' ಎಂಬ ಶರೀಫರ ಹಾಡು ನೆನಪಾಗುತ್ತದೆ. ತಂಬೂರಿ ಎಂದರೆ ಇಂದಿನ ರಾಜಕಾರಣಕ್ಕೂ ಈ ಮಾತು ಅನ್ವಯಿಸುತ್ತದೆ. ಧಾರ್ಮಿಕ ನಾಯಕರಿಗಷ್ಟೇ ಅಲ್ಲ, ಸಮಾಜದ ಪುಡಿ ನಾಯಕರಿಗೂ ಇದು ಅನ್ವಯವಾಗುತ್ತದೆ. ಶರೀಫರ ಈ ಹಾಡು ಇಂದಿನ ಸಂದರ್ಭಕ್ಕೆ ಹೆಚ್ಚು ಅರ್ಥಪೂರ್ಣ ಹಾಗೂ ಪೂರಕ ಎನಿಸುತ್ತದೆ ಎಂದರು.

ವ್ಯಾಪಾರ ಧರ್ಮ ಬೇರೆ, ಧರ್ಮವೇ ವ್ಯಾಪಾರವಾಗದು. ವ್ಯಾಪಾರ ಧರ್ಮ ಮನುಷ್ಯತ್ವದಿಂದ ಕೂಡಿದ್ದು, ಆರ್ಥಿಕ ಪರಿಭಾಷೆಯಿಂದ ಕೂಡಿದ್ದು. ಧರ್ಮ ವ್ಯಾಪಾರವಾದಾಗ ಅದು ರಕ್ತಪಾತಕ್ಕೆ ನಾಂದಿ ಹಾಡುವ ಪ್ರಕ್ರಿಯೆಗೆ ಒಲವು ತೋರಿದ ಹಾಗಾಗುತ್ತದೆ. ಹೀಗಾಗಿ ನಮ್ಮ ಒಲವು ಹೂಮಳೆ ಸುರಿಸುವುದರ ಕಡೆಗೆ ಇರಬೇಕೇ ವಿನಃ ರಕ್ತದ ಕಲೆಗಳನ್ನು ಮೂಡಿಸುವುದರ ಕಡೆಗೆ ಇರಬಾರದು ಎಂದು ಹೇಳಿದರು.

ಹಿಜಾಬ್, ಹಲಾಲ್ ಕಟ್ ಮುಗೀತು. ಈಗ ಆಜಾನ್ ಬಂದಿದೆ. ಮಾಂಸಾಹಾರದ ಬಗ್ಗೆ ಚರ್ಚೆ ಬಂದಿದೆ. ಮಾಂಸವನ್ನು ಕಡಿದು ತೂಕಕ್ಕೆ ಹಾಕುವವರು ಮುಸ್ಲಿಮರು. ಅಲ್ಲಿ ಕೊಳ್ಳುವವರೆಲ್ಲರೂ ಹಿಂದೂಗಳು. ತಲತಲಾಂತರಗಳಿಂದ ಇದು ನಡೆದು ಬಂದಿದೆ. ಅದಕ್ಕೆ ಧಕ್ಕೆ ತರಲು ಸಾಧ್ಯವಿಲ್ಲ ಎಂದರು.


ದಲಿತರು, ಹಿಂದುಳಿದವರ ಬಗ್ಗೆ ನಿಜವಾದ ಕಳಕಳಿ ಇದ್ದರೆ ಅನ್ನ ಭೇದ ಮಾಡದೆ ಬನ್ನಿ, ನಾವೆಲ್ಲ ಸಹಪಂಕ್ತಿಯಲ್ಲಿ ಕುಳಿತು ನಿಮ್ಮ ಅನ್ನ ನಿಮ್ಮದು, ನಮ್ಮ ಅನ್ನ ನಮ್ಮದು... ಬನ್ನಿ... ನಾವೆಲ್ಲ ಒಂದೇ ಕಡೆ ಕುಳಿತು ಊಟ ಮಾಡೋಣ. ಹೀಗೆ ಊಟ ಮಾಡುವುದು ತಪ್ಪಲ್ಲ ಎಂಬ ಭಾವನೆ ಬರುತ್ತದೆ. ಹಾಗಾದರೆ ಮಾತ್ರ ಈ ದೇಶದ ಉದ್ಧಾರ ಸಾಧ್ಯ ಅಲ್ಲಿಯವರೆಗೆ ಈ ದೇಶ ಸರ್ವನಾಶದ ಕಡೆಗೆ ಹೋಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೋವಿಡ್ ಸಂದರ್ಭದಲ್ಲಿ ಮಕ್ಕಳೇ ತಮ್ಮ ತಂದೆ ತಾಯಿಯ ಶವ ಮುಟ್ಟಲೂ ಹಿಂಜರಿಯುತ್ತಿದ್ದ ಸಂದರ್ಭದಲ್ಲಿ ಆ ಶವಗಳನ್ನು ಮುಸ್ಲಿಮರು ಹೆಗಲ ಮೇಲೆ ಹೊತ್ತೊಯ್ದು ಹಿಂದು ಸಂಪ್ರದಾಯದ ಪ್ರಕಾರವೇ ಶವ ಸಂಸ್ಕಾರ ಮಾಡಿದ ಉದಾಹರಣೆಗಳಿವೆ. ನಮ್ಮ ದೇಶ ವಿಶ್ವ ಗುರು ಆಗಬೇಕು ಎನ್ನಲಾಗುತ್ತಿದೆ. 15–20 ವರ್ಷಗಳ ಹಿಂದೆ ನಾನು ಬರೆದಿದ್ದೆ. ವಿಶ್ವ ಗುರು ಅತ್ಯಂತ ಶ್ರೇಷ್ಠ ಅತ್ಯುನ್ನತ ಚಿಂತನೆ. ಇಂಥ ಭಾವನೆ ಇಟ್ಟುಕೊಂಡು ಎದೆ ತಟ್ಟಿ ಹೇಳಿಕೊಳ್ಳುವ ನಾವು ಹಿಜಾಬ್, ಹಲಾಲ್‌ಕಟ್ ಹೆಸರಿನಲ್ಲಿ ಸಣ್ಣ ಸಣ್ಣ ವಿಚಾರ ಇಟ್ಟುಕೊಂಡು ಹೋದರೆ ನಾವು ವಿಶ್ವ ಗುರು ಆಗಲು ಸಾಧ್ಯವೇ ಎಂದು ಪ್ರಶ್ನಿಸಿದರು.

ವೈಯಕ್ತಿಕ ಹಿತಾಸಕ್ತಿ ಸಾಧಿಸಲು ಧರ್ಮ ಬಳಕೆ ಸಲ್ಲದು. ಸಾಮಾನ್ಯರ ಬದುಕು ನಮ್ಮದಾಗಬೇಕು. ಕುವೆಂಪು ಅವರು ಹೇಳಿದಂತೆ 'ಲೋಪಗಳು ಎಲ್ಲ ಜನಾಂಗದಲ್ಲೂ ಇರುತ್ತವೆ. ಆದರೆ ಅದನ್ನು ಕೆದಕುತ್ತಾ ಸಣ್ಣ ಗಾಯವನ್ನು ಕೆರೆದರೆ ಅದು ದೊಡ್ಡ ಗಾಯವಾಗುತ್ತದೆ. ಬೆಂಕಿ ಉಗುಳುವ ಸಮಾಜದ ಮೇಲೆ ಹೂ ಮಳೆಗರೆಯುವ ಪ್ರಯತ್ನ ನಮ್ಮದು. ಆಗಾಗ ಹೂ ಮಳೆಗರೆಯುವ ಇಂತಹ ಕಾರ್ಯಕ್ರಮಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ನಡೆಯುವಂತಾಗಬೇಕು ಎಂದು ಆಶಿಸಿದರು.

ಇಂದು 'ಪರ್ವ' ರಂಗ ಪಯಣಕ್ಕೆ ಚಾಲನೆ

ಮೈಸೂರು, ಏ. 6– ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಅವರ 'ಪರ್ವ' ನಾಟಕ ದೇಶದ ವಿವಿಧೆಡೆ ಪ್ರದರ್ಶಿಸಲಾಗುತ್ತಿದ್ದು, ನಾಳೆ (ಏ.7) ಪರ್ವ ಮಹಾರಂಗ ಪ್ರಯೋಗದ ರಂಗ ಪಯಣ ಆರಂಭವಾಗಲಿದೆ.



ಏ.7ರ ಬೆಳಗ್ಗೆ 8 ಗಂಟೆಗೆ ರಂಗಾಯಣದ ಆವರಣದಲ್ಲಿ ರಂಗಪಯಣಕ್ಕೆ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಚಾಲನೆ ನೀಡಲಿದ್ದಾರೆ. ದಾವಣಗೆರೆಯಲ್ಲಿ ಏಪ್ರಿಲ್ 9ರಂದು, ಧಾರವಾಡದಲ್ಲಿ 12, 13, ಬೆಳಗಾವಿಯಲ್ಲಿ 16, 17 ರಂದು, ವಿಜಯಪುರದಲ್ಲಿ 20, ಕಲಬುರ್ಗಿಯಲ್ಲಿ 22 ರಂದು ಪ್ರದರ್ಶನ ನೀಡಲಿದೆ. ಎರಡನೇ ಹಂತದಲ್ಲಿ ಕರಾವಳಿ, ಮಲೆನಾಡು, ಮಧ್ಯ ಕರ್ನಾಟಕದಲ್ಲಿ ಪ್ರದರ್ಶನ ನೀಡಿ, ಜೂನ್ ತಿಂಗಳಿನಲ್ಲಿ ನಾಗಪುರ, ಮುಂಬೈ, ಭೂಪಾಲ್, ಚಂಡೀಗಡ, ದೆಹಲಿಯಲ್ಲಿ ಪ್ರದರ್ಶನ ನೀಡಲಿದೆ. ಒಟ್ಟು 45 ಕಲಾವಿದ, ತಂತ್ರಜ್ಞರ ತಂಡ ಕರ್ನಾಟಕ ರಾಜ್ಯದಲ್ಲಿ ಒಟ್ಟು 44 ಪ್ರದರ್ಶನಗಳು, ಹೊರರಾಜ್ಯಗಳಲ್ಲಿ 5 ಪ್ರದರ್ಶನ, ಕೊನೆಯ ಪ್ರದರ್ಶನ ಮೈಸೂರಿನ ರಂಗಾಯಣದಲ್ಲಿ ನಡೆಯಲಿದ್ದು, 'ಪರ್ವ'ದ 50ನೇ ಪ್ರದರ್ಶನದೊಂದಿಗೆ ಈ ಮಹಾರಂಗ ಪ್ರಯೋಗದ ಯೋಜನೆಯನ್ನು ಅಂತ್ಯಗೊಳಿಸಲಿದ್ದೇವೆ. ಈ ಮಹಾರಂಗಪ್ರಯೋಗದ ಮುನ್ನ ರಂಗಾಯಣ ಏನು ಯೋಜನೆ ಹಾಕಿತ್ತೋ, ಅದರಂತೆ ನಡೆಯಲು ನಿಶ್ಚಿತ ಗುರಿ–ದಾರಿಯತ್ತ ಸಾಗಿದ್ದೇವೆ. ನಮ್ಮ ಈ ಯೋಜನೆಯ ಫಲಶ್ರುತಿಗೆ ಪ್ರೇಕ್ಷಕರೇ ನಮ್ಮ ರಕ್ಷಕರು ಎನ್ನುವುದು ಅಷ್ಟೇ ಸತ್ಯ. ಜೊತೆಗೆ ಈ ಮಹಾ ರಂಗ ಪ್ರಯೋಗದ ಯಶಸ್ಸಿಗಾಗಿ ಕಟಿಬದ್ಧರಾಗಿ ದುಡಿಯುವ ಎಲ್ಲಾ ಕಲಾವಿದರಿಗೂ ಸಲ್ಲುತ್ತದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದ್ದಾರೆ.

ಕನ್ನಡ ಕಲಿಕೆ ಕಡ್ಡಾಯ: ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು, ಏ.6– ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ಯಡಿ ಕನ್ನಡ ಭಾಷೆ ಕಲಿಕೆಯನ್ನು ಕಡ್ಡಾಯಗೊಳಿಸುವಂತಿಲ್ಲ. ಆ ಕುರಿತು ಯಾವುದೇ ನಿಯಮಗಳಿಲ್ಲ ಎಂದು ಕೇಂದ್ರ ಸರ್ಕಾರ ಅಧಿಕೃತ ಹೇಳಿಕೆ ನೀಡಿದ್ದರೂ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಎಲ್ಲಾ ವಿದ್ಯಾರ್ಥಿಗಳಿಗೂ ಕನ್ನಡ ಕಲಿಕೆ ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಆದೇಶ ನೀಡಿತ್ತು.

ಸದರಿ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ. ಪದವಿ ಹಂತದಲ್ಲಿ ಕನ್ನಡ ಕಲಿಕೆ ಕಡ್ಡಾಯ ಕುರಿತಂತೆ ರಾಜ್ಯ ಸರ್ಕಾರ ಹೊರಡಿಸಿದ್ದ ಎರಡು ಆದೇಶ (2021ರ ಆಗಸ್ಟ್ 7 ಹಾಗೂ ಸೆಪ್ಟೆಂಬರ್ 15) ಜಾರಿಗೆ ನ್ಯಾಯಾಲಯ ತಡೆಯಾಜ್ಞೆ ಜಾರಿಗೊಳಿಸಿದೆ. ಇದರಿಂದಾಗಿ ರಾಜ್ಯ ಸರ್ಕಾರಕ್ಕೆ ಭಾರೀ ಹಿನ್ನಡೆಯಾಗಿದೆ.

ಹಿನ್ನೆಲೆ ಹೀಗಿದೆ: ಕನ್ನಡ ಕಡ್ಡಾಯ ಕಲಿಕೆ ಆದೇಶ ಪ್ರಶ್ನಿಸಿ ಸಂಸ್ಕೃತ ಭಾರತಿ ಟ್ರಸ್ಟ್ ಹಾಗೂ ವಿದ್ಯಾರ್ಥಿಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠದ ಮುಂದೆ ವಿಚಾರಣೆ ನಡೆಸಲಾಗಿದೆ. ಕೆಲ ಕಾಲ ವಾದ ಆಲಿಸಿದ ಬಳಿಕ ನ್ಯಾಯಪೀಠ, ಉನ್ನತ ಶಿಕ್ಷಣದಲ್ಲಿ ಕನ್ನಡ ಕಲಿಕೆ ಕಡ್ಡಾಯ ಮಾಡಲಾಗದು. ಕೇಂದ್ರ ಸರ್ಕಾರ ಬೇರೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡ ಕಡ್ಡಾಯ ಮಾಡಲಾಗದು ಎಂದು ಹೇಳಿದೆ. ಹಾಗಾಗಿ ಸರ್ಕಾರದ ಆದೇಶಗಳಿಗೆ ತಡೆ ನೀಡಲಾಗುವುದು ಎಂದು ಆದೇಶಿಸಿತು.

ಎನ್‌ಇಪಿ ಅಡಿ ಕನ್ನಡ ಕಡ್ಡಾಯವಲ್ಲ: ರಾಷ್ಟ್ರೀಯ ಶಿಕ್ಷಣ ನೀತಿಯಡಿ ಕನ್ನಡ ಕಡ್ಡಾಯಗೊಳಿಸಿತ್ತು. ಆದರೆ ಈ ಮಧ್ಯೆ, ಕಾಲೇಜುಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಪ್ರಾದೇಶಿಕ ಭಾಷೆ ಕಡ್ಡಾಯವಲ್ಲ, ಆ ರೀತಿ ಭಾಷೆಯ ಕಲಿಕೆಯನ್ನು ಬಲವಂತ ಮಾಡುವ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತ್ತು.

ಪ್ರಮಾಣ ಪತ್ರದಲ್ಲಿ ಸ್ಥಳೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದ ಮಹತ್ವಾಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಜನರಿಗೆ ಸುಲಭವಾಗಿ ಸಮಗ್ರ ಶೈಕ್ಷಣಿಕ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಎನ್‌ಇಪಿ ಜಾರಿಗೊಳಿಸಲಾಗಿದೆ. ಎನ್‌ಇಪಿಯಲ್ಲಿ ಭಾರತದ ಭಾಷೆಗಳು, ಕಲೆ ಮತ್ತು ಸಂಸ್ಕೃತಿ ಪ್ರಚಾರ ತಲೆಬರಹ ಹೊಂದಿರುವ 22ನೇ ಅಧ್ಯಾಯವನ್ನು ಭಾರತೀಯ ಭಾಷೆ ಮತ್ತು ಪ್ರಾದೇಶಿಕ ಭಾಷೆಗಳ ಪ್ರಚಾರಕ್ಕೆ ಮೀಸಲಿಡಲಾಗಿದೆ ಎಂದು ತಿಳಿಸಿದೆ.



ಅಲ್ಲದೆ, ಈ ಅಧ್ಯಾಯದ 22.10ನೇ ಪ್ಯಾರಾದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಮಾತೃ ಭಾಷೆ/ಸ್ಥಳೀಯ ಭಾಷೆಯನ್ನು ಬೋಧನಾ ಭಾಷೆಯನ್ನಾಗಿ ಬಳಕೆ ಮಾಡಬಹುದಾಗಿದ್ದು, ದ್ವಿಭಾಷೆಗೆ ಅವಕಾಶ ನೀಡುತ್ತದೆ. ಎಲ್ಲಾ ಮಟ್ಟದಲ್ಲೂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅನುಕೂಲಕ್ಕಾಗಿ ಭಿನ್ನ ಬಗೆಯ ಶೈಕ್ಷಣಿಕ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿ ಅದು ಎಲ್ಲರಿಗೂ ದೊರೆಯುವಂತೆ ಮಾಡುವ ಉದ್ದೇಶ ಎನ್‌ಇಪಿಯಲ್ಲಿ ಹೊಂದಲಾಗಿದೆ. ಎನ್‌ಇಪಿ ಮತ್ತದರ ನಿಯಮಗಳಲ್ಲಿ ಯಾವುದೇ ಭಾಷೆಯನ್ನು ಕಡ್ಡಾಯಗೊಳಿಸುವ ಸಂಬಂಧ ಉಲ್ಲೇಖಗಳಿಲ್ಲ. ಹೀಗಾಗಿ, ಎನ್‌ಇಪಿ ನಿಯಮಗಳನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯ ಉದ್ಭವಿಸುವುದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಮರುಪರಿಶೀಲನೆಗೆ ಸೂಚನೆ: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)2020 ಹಾಗೂ ಅದರ ನಿಯಮಗಳಲ್ಲಿ ಯಾವುದೇ ಭಾಷೆಯನ್ನು ಕಡ್ಡಾಯಗೊಳಿಸುವ ಸಂಬಂಧ ಉಲ್ಲೇಖಗಳಿಲ್ಲ ಎಂಬುದಾಗಿ ಕೇಂದ್ರ ಸರ್ಕಾರವು ಸ್ಪಷ್ಟಪಡಿಸಿರುವುದರಿಂದ ಪದವಿ ಹಂತದಲ್ಲಿ ಭಾಷೆಯಾಗಿ ಕನ್ನಡ ಕಲಿಕೆ ಕಡ್ಡಾಯದ ಕುರಿತ ನಿಲುವನ್ನು ಮರುಪರಿಶೀಲಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಲಾಗುವುದು ಎಂದು ಹೈಕೋರ್ಟ್ ಆದೇಶಿಸಿತ್ತು.

ಮೈಸೂರು ಮಿತ್ರ ಗುರುವಾರ 7 ಏಪ್ರಿಲ್ 2022

ಮೇಕೆದಾಟು ಯೋಜನೆ ಜಾರಿಗೆ ನಿರಂತರ ಹೋರಾಟ



ಕಿಕ್ಕೇರಿ, ಏ.6– ಕಾವೇರಿಯೂ ನಮ್ಮದೇ, ಮೇಕೆದಾಟು ನಮ್ಮದೆ, ಹೀಗಿರುವಾಗ ಪ್ರತಿಷ್ಠೆ ಬಿಟ್ಟು ಕಾವೇರಿ ಉಳಿಸಿಕೊಳ್ಳುವ, ಬಳಸಿಕೊಳ್ಳುವ ಸಂಕಲ್ಪದಿಂದ ಪಾದ ಯಾತ್ರೆ ನಡೆಸಲಾಗಿದ್ದು,ಈ ಹೋರಾಟ ನಿರಂತರವಾಗಿರುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸಮೀಪದ ಆಲೇನಹಳ್ಳಿ ಗ್ರಾಮದ ಶಂಭು ಲಿಂಗೇಶ್ವರ ದೇಗುಲ ಉದ್ಘಾಟನಾ ಕಾರ್ಯ ಕ್ರಮಕ್ಕೆ ಭಾಗವಹಿಸಲು ತೆರಳುವಾಗ ಕಿಕ್ಕೇರಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್ ನೀಡಿದ ಸ್ವಾಗತವನ್ನು ಸ್ವೀಕರಿಸಿ ಮಾತ ನಾಡಿ, ತಾಲೂಕು ದೊಡ್ಡ ರಾಜಕೀಯ ಕ್ಷೇತ್ರವಾಗಿದೆ. ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾರು ಎಂದು ಯೋಚಿಸದೆ ಕಾಂಗ್ರೆಸ್ ಗೆಲುವಿನ ಮೇಲೆ ನಿಗಾವಹಿಸಿ ಸಂಘಟಿತ ರಾಗಿ ಪಕ್ಷದ ಗೆಲುವಿಗೆ ಸಹಕರಿಸಿ. ಜಿಲ್ಲೆ, ರಾಜ್ಯದಲ್ಲಿ ಜನತೆ ಬದಲಾವಣೆ ಪರ್ವವನ್ನು ಬಯಸಿದ್ದು, ಇದು ಕಾಂಗ್ರೆಸ್ ಗೆಲ್ಲಲು ಎಲ್ಲರ ಶ್ರಮ ಮುಖ್ಯ. ಜನರ ಮನವೊಲಿಸಿ ಹೆಚ್ಚು ಹೆಚ್ಚು ಸದಸ್ಯರನ್ನು ಅಭಿಯಾನದಲ್ಲಿ ನೋಂದಾಯಿಸಿ. ಇದು ಮುಂದೆ ಪಕ್ಷದ ಶಕ್ತಿ ಪ್ರದರ್ಶನ, ಅಧಿಕಾರದ ಗದ್ದುಗೆಗೆ ಬುನಾದಿಯಾಗಲಿದೆ ಎಂದು ನುಡಿದರು.

ಪಕ್ಷಕ್ಕೆ ಯುವಶಕ್ತಿ ಬಲುದೊಡ್ಡ ಆಸ್ತಿ. ಪಕ್ಷದ ಬಲವರ್ಧನೆಗೆ ಜಾಗೃತಿ ಮೂಡಿಸುವ ಕೆಲಸ ನಿಸ್ವಾರ್ಥದಿಂದ ಸಾಗಲಿ. ಪಕ್ಷದ ಸಂಘಟನೆಗಾಗಿ ರಾಜ್ಯಾದ್ಯಂತ ಪ್ರವಾಸ ನಡೆಸಲಾಗುತ್ತಿದ್ದು, ಕಾರ್ಯಕರ್ತರು ವಿಚಲಿತರಾಗದೆ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಶ್ರಮಿಸಿ ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದರು.

ಕಾಂಗ್ರೆಸ್ ಕಾರ್ಯಕರ್ತರು ವ್ಯಕ್ತಿ ಮತ್ತು ಹಣದ ಪೂಜೆಗೆ ಮಾರುಹೋಗದೆ ಯಾರೇ ಕಾಂಗ್ರೆಸ್ ಅಭ್ಯರ್ಥಿಯಾದರೂ ಅವರನ್ನು ಗೆಲ್ಲಿಸುವ ಮೂಲಕ ನಮ್ಮ ಶಕ್ತಿ ಪ್ರದರ್ಶನ ಮಾಡಬೇಕು ಡಿ.ಕೆ.ಶಿವಕುಮಾರ್ ಹೇಳಿದರು.

2023ರಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅತೀ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಮೂಲಕ ಆಡಳಿತದ ಚುಕ್ಕಾಣಿ ಹಿಡಿಯುವುದು ಸೂರ್ಯ ಚಂದ್ರರಷ್ಟೇ ಖಚಿತವಾಗಿದೆ ಎಂದು ಅವರು ವಿಶ್ವಾಸ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್, ಕೆಯುಐಡಿಎಫ್‌ಸಿ ಮಾಜಿ ಅಧ್ಯಕ್ಷ ಮತ್ತಿಘಟ್ಟ ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ನಗರ ವಿಭಾಗದ ಅಧ್ಯಕ್ಷ ಐಪನಹಳ್ಳಿ ನಾಗೇಂದ್ರಕುಮಾರ್, ಮಾದಾಪುರ ಡಾ.ರಾಮಕೃಷ್ಣೇಗೌಡ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು, ಮನ್ ಮುಲ್ ನಿರ್ದೇಶಕ ಡಾಲುರವಿ ಇತರರು ಭಾಗವಹಿಸಿದ್ದರು.

ಕ್ರೀಡೆಯಿಂದ ಜಗತ್ತು ಬದಲಾವಣೆ ಸಾಧ್ಯ



ಶ್ರೀರಂಗಪಟ್ಟಣ,ಏ.6(ವಿನಯ್ ಕಾರೇಕುರ) – ಜಗತ್ತನ್ನು ಬದಲಾಯಿಸುವ ಶಕ್ತಿಯನ್ನು ಕ್ರೀಡೆ ಹೊಂದಿದೆ ಎಂದು ಅಚೀವರ್ಸ್ ಅಕಾಡೆಮಿ ಅಧ್ಯಕ್ಷ ಡಾ.ರಾಘವೇಂದ್ರ ಹೇಳಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಕ್ರೀಡಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಯಿಂದ ಮೂಲಭೂತ ಹಕ್ಕು ಮತ್ತು ಸಾಮಾಜಿಕ ಸಂಬಂಧಗಳನ್ನು ಬಲಪಡಿಸಬಹುದು. ದೇಶದ ಸುಸ್ಥಿರ ಅಭಿವೃದ್ಧಿ ಮತ್ತು ಶಾಂತಿಯನ್ನು ಉತ್ತೇಜಿಸಲು ಪ್ರಬಲ ಸಾಧನವಾಗಿದೆ. 2022 ರ ಜಾಗತಿಕ ವಿಷಯವೆಂದರೆ, ಎಲ್ಲರಿಗೂ ಸುಸ್ಥಿರ ಮತ್ತು ಶಾಂತಿಯುತ ಭವಿಷ್ಯವನ್ನು ಭದ್ರಪಡಿಸುವುದು ಕ್ರೀಡೆಯ ಕೊಡುಗೆ, ಇದು ಕ್ರೀಡೆಯನ್ನು ಒಂದು ಸಾಧನವಾಗಿ ಬಳಸುವುದನ್ನು ಉತ್ತೇಜಿಸಲು ಪ್ರತಿವರ್ಷ ಏಪ್ರಿಲ್ 6 ರಂದು ವಿಶ್ವಸಂಸ್ಥೆಯು ಅಭಿವೃದ್ಧಿ ಮತ್ತು ಶಾಂತಿಗಾಗಿ ಅಂತರರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಕ್ಕಳಿಗೆ ಆಟೋಟಗಳನ್ನು ಏರ್ಪಡಿಸಿ ಹಾಗೂ ಏರೋಬಿಕ್ ಡ್ಯಾನ್ಸ್ ಮಾಡಲಾಯಿತು. ಬಲ್ಲೇನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಜಗದೀಶ್, ಶ್ರೇಯಸ್, ಕೃಷ್ಣ, ಅಪೇಕ್ಷ, ಸತೀಶ, ದೇವರಾಜ್, ಜ್ಯೋತಿ, ಗೌರಿ, ಬಬ್ಲು, ಲಿಖಿತ್ ಹಾಗೂ ಕ್ರೀಡಾಪಟ್ಟುಗಳ ಪೋಷಕರು ಉಪಸ್ಥಿತರಿದ್ದರು.

ದೇವರ ದಾಸಿಮಯ್ಯರ ಆದರ್ಶಗಳು ಇಂದಿಗೂ ಪ್ರಸ್ತುತ



ಮಂಡ್ಯ ಏ.6–ದೇವರ ದಾಸಿಮಯ್ಯರು ಸಮಾಜಕ್ಕೆ ಅಪಾರ ಕೊಡುಗೆಗಳನ್ನು ನೀಡಿದ್ದು,ಅವರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿದೆ, ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸತ್ಪ್ರಜೆಗಳಾಗಿ ಬಾಳೋಣ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ ಕುಮಾರ್ ಹೇಳಿದರು.

ನಗರದ ಕಲಾಮಂದಿರದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ದೇವರದಾಸಿಮಯ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ದೇವರ ದಾಸಿಮಯ್ಯ ಸುರಪುರ ತಾಲೂಕಿನ ಮುದನೂರಿನ ಬಡ ಕುಟುಂಬದಲ್ಲಿ ಜನಿಸಿದ್ದು, ಬಾಲ್ಯದಿಂದಲೂ ನೇಕಾರವನ್ನು ಕಾಯಕವಾಗಿ ತೊಡಗಿಸಿಕೊಂಡಿದ್ದರು. ಅಲ್ಲದೇ ಜನ ಸಾಮಾನ್ಯರಿಗೆ ಕೈಲಾದಷ್ಟು ಸಹಾಯವನ್ನು ಮಾಡುತ್ತಾ ಜೀವನವನ್ನು ಕಳೆಯುತ್ತಿದ್ದರು. ಅವರ ಜೀವನ ಎಲ್ಲರಿಗೂ ಮಾದರಿ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೈಮಗ್ಗ ನೇಕಾರರ ಸಂಘದ ಅಧ್ಯಕ್ಷ ಹರಿಪ್ರಸಾದ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊನ್ನೇಗೌಡ, ಶ್ರೀನಿವಾಸ್, ಸುಧಾ,ಆನಂದ್, ದೇವರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಚಿವ ಡಾ.ಅಶ್ವಥ್ ನಾರಾಯಣ ಜಿಲ್ಲಾ ಪ್ರವಾಸ ಇಂದು

ಮಂಡ್ಯ,ಏ.6– ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ವಿದ್ಯುನ್ಮಾನ, ಐಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣರವರು ಏ.7 ರಂದು ಮಂಡ್ಯ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 9:00 ಗಂಟೆಗೆ ಮಂಡ್ಯದ ಸ್ವರ್ಣಸಂದ್ರ ಕೆಂಪೇಗೌಡ ರಸ್ತೆಯಲ್ಲಿರುವ ಪ್ರೇರಣ – ವಿಶೇಷ ಚೇತನರ ಸಂಸ್ಥೆಗೆ ಆಗಮಿಸಿ ಸ್ಪೆಷಲ್ ಒಲಿಂಪಿಕ್ಸ್ ಭಾರತ ತಂಡದವರಿಂದ ಆಯೋಜಿಸಿರುವ ಆರೋಗ್ಯ ಶಿಬಿರ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಮೇ 1 ರಂದು ಉಚಿತ ಸಾಮೂಹಿಕ ವಿವಾಹ

ಭಾರತೀನಗರ, ಏ.6 (ಅ.ಸತೀಶ್)– ಶ್ರೀನಿಧಿಗೌಡ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೇವಾಟ್ರಸ್ಟ್ ವತಿಯಿಂದ ಮೊದಲನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಮದ್ದೂರಮ್ಮನ ಉತ್ಸವದ ಪ್ರಯುಕ್ತ ಮದ್ದೂರು ಕ್ರೀಡಾಂಗಣದಲ್ಲಿ ಮೇ 1 ರ ಭಾನುವಾರದಂದು ಏರ್ಪಡಿಸಲಾಗಿದೆ ಎಂದು ಸೇವಾಟ್ರಸ್ಟ್‌ನ ನಿರ್ದೇಶಕ ಸಿ.ಶಿವಲಿಂಗಯ್ಯ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸಾಮೂಹಿಕ ವಿವಾಹದಲ್ಲಿ ಯಾವುದೇ ಜಾತಿ, ಧರ್ಮಗಳ ಭೇದಭಾವಗಳಿರುವುದಿಲ್ಲ. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಲಾಗುವುದು. ಮತ್ತು ಸರ್ಕಾರದಿಂದ ವಿಶೇಷ ಧನಸಹಾಯ ಮಂಜೂರು ಮಾಡಿಸಿಕೊಡಲಾಗುವುದು. ಹಾಗೂ ಸರ್ಕಾರದ ಆದರ್ಶ ವಿವಾಹ ಯೋಜನೆಯಲ್ಲಿ 50 ಸಾವಿರ ಧನ ಸಹಾಯವನ್ನು ಕೊಡಿಸಿಕೊಡಲಾಗುವುದು ಎಂದರು.

ಮದುವೆಯಾಗಲು ಬಯಸುವವರು ವಧು–ವರರ ತಂದೆತಾಯಿ, ಗುರುಹಿರಿಯರ ಜೊತೆಯಲ್ಲಿ ಟ್ರಸ್ಟಿನ ಕಚೇರಿಗೆ ಬಂದು ತಮ್ಮ ಹೆಸರನ್ನು ಏ.29ರ ಶುಕ್ರವಾರದೊಳಗೆ ಹೆಸರು ನೋಂದಾಯಿಸಿಕೊಳ್ಳತಕ್ಕದ್ದು. ವಧು–ವರರಿಗೆ ಉಚಿತವಾಗಿ ಮಾಂಗಲ್ಯ, ವಸ್ತ್ರಗಳು, ಕಾಲುಂಗುರ, ಕೈಗಡಿಯಾರ ಕೊಡುವುದರ ಊಟದ ವ್ಯವಸ್ಥೆ ಕಲ್ಪಿಸಲಾಗುವುದು.

ವಧು–ವರರ ವಯಸ್ಸಿನ ಪ್ರಮಾಣ ಪತ್ರ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರ, ತಹಸೀಲ್ದಾರ್‌ರಿಂದ ವಾಸಸ್ಥಳ ದೃಢೀಕರಣ ಪತ್ರ, ಆಧಾರ್‌ಕಾರ್ಡ್ ಹಾಗೂ ಇತ್ತೀಚಿನ 3 ಭಾವಚಿತ್ರಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಬೇಕೆಂದು ತಿಳಿಸಿದ್ದಾರೆ. ಮಾಹಿತಿಗಾಗಿ ಸಿ.ಶಿವಲಿಂಗಯ್ಯ– 9945620345, ಎಸ್.ಪಿ.ಸ್ವಾಮಿ– 9945551525, ಅಂಬರಹಳ್ಳಿ ಕೃಷ್ಣ–9880615339ಗೆ ಸಂಪರ್ಕಿಸಬೇಕೆಂದು ಕೋರಲಾಗಿದೆ.



ತೈಲ, ರಸಗೊಬ್ಬರ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಪಾಂಡವಪುರ ತಾಲೂಕು ರೈತಸಂಘ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ ಸಂಚಾರ ತಡೆದು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ರೈತಸಂಘದ ತಾಲೂಕು ಅಧ್ಯಕ್ಷ ಚಿಕ್ಕಾಡೆ ಹರೀಶ್, ಕಾರ್ಯದರ್ಶಿ ಕೆನ್ನಾಳು ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಕೆ.ಟಿ ಗೋವಿಂದೇಗೌಡ, ಡಿಂಕಾ ಗ್ರಾಪಂ ಉಪಾಧ್ಯಕ್ಷ ನಂಜೇಗೌಡ, ಮುಖಂಡರಾದ ಅಮೃತಿ ರಾಜಶೇಖರ್, ಎಣ್ಣೆಹೊಳೆಕೊಪ್ಪಲು ಮಂಜು, ವೈ.ಜಿ.ರಘು, ಬೀರಶೆಟ್ಟಹಳ್ಳಿ ಗಿರೀಶ್, ಕಾಳೇಗೌಡ ಇತರರು ಭಾಗವಹಿಸಿದ್ದರು.

ಸುಂಕಾ ತೊಣ್ಣೂರಲ್ಲಿ ರಸ್ತೆ ವಿಚಾರವಾಗಿ ವ್ಯಕ್ತಿ ಮೇಲೆ ಹಲ್ಲೆ



ಪಾಂಡವಪುರ,ಏ.6– ರಸ್ತೆ ವಿಚಾರವಾಗಿ ವ್ಯಕ್ತಿಯೊಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಸುಂಕಾ ತೊಣ್ಣೂರು ಗ್ರಾಮದಲ್ಲಿ ನಡೆದಿದೆ.

ಸುಂಕಾತೊಣ್ಣೂರು ಗ್ರಾಮದ ರಮೇಶ್ ಎಂಬಾತ ಮಾರಣಾಂತಿಕ ಹಲ್ಲೆಗೆ ಒಳಗಾಗಿದ್ದು, ಪಾಂಡವಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕಜ್ಜಪ್ಪರ ಪಾಪೇಗೌಡರ ಪುತ್ರ ದೇವೇಗೌಡ ಹಲ್ಲೆ ನಡೆಸಿದ್ದಾನೆನ್ನಲಾಗಿದೆ.

ಮನೆಮುಂದಿನ ತಿರುಗಾಡುವ ರಸ್ತೆಯಲ್ಲಿ ಹಾಕಿದ್ದ ಸೌದೆಯನ್ನು ತೆರವುಗೊಳಿಸುವ ವಿಚಾರವಾಗಿ ರಮೇಶ್ ಹಾಗೂ ದೇವೇಗೌಡ ನಡುವೆ ಗಲಾಟೆಯಾಗಿದೆ. ಈ ವೇಳೆ ದೇವೇಗೌಡ ದೊಣ್ಣೆಯಿಂದ ರಮೇಶ್ ತಲೆಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಅಲ್ಲದೆ ರಮೇಶ್ ಹಾಗೂ ಅವರ ಪತ್ನಿಗೆ ಬಾಯಿಗೆ ಬಂದಂತೆ ನಿಂದಿಸಿ, ಜಾತಿನಿಂದನೆ ಮಾಡಿದ್ದಾರೆ ಎಂದು ರಮೇಶ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಘಟನೆ ಸಂಬಂಧ ಮೇಲುಕೋಟೆ ಠಾಣೆಯಲ್ಲಿ ದೂರು ದಾಖಲಾಗಿದೆ. ಬಳಿಕ ದೇವೇಗೌಡ ಕೂಡ ಹಲ್ಲೆಗೊಳಗಾಗಿರುವ ರಮೇಶ್ ಮೇಲೆ ಪ್ರತಿದೂರು ದಾಖಲಿಸಿದ್ದಾರೆ.

ಅಣ್ಣನ ಹೆಸರಿನಲ್ಲಿ ಅಕ್ರಮ ಸೇವೆ: ಶಿಕ್ಷಕನ ಅಮಾನತು

ಮೈಸೂರು, ಏ.6(ಎಂಕೆ)– ಮೃತ ಅಣ್ಣನ ನೇಮಕಾತಿ ಪತ್ರವನ್ನು ಬಳಸಿಕೊಂಡು ಸುದೀರ್ಘ 24 ವರ್ಷದಿಂದ ಶಿಕ್ಷಕ ವೃತ್ತಿ ಮಾಡುತ್ತಿದ್ದ ಆರೋಪದಡಿ ಬಂಧಿತನಾಗಿರುವ ಹುಣಸೂರು ತಾಲೂಕು ಹಿರಿಕ್ಯಾತನಹಳ್ಳಿ ಗಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಲೋಕೇಶ್(ಲಕ್ಷ್ಮಣೇಗೌಡ)ನನ್ನು ಸೇವೆಯಿಂದ ಅಮಾನತುಗೊಳಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು(ಆಡಳಿತ) ಹಾಗೂ ಶಿಸ್ತುಪ್ರಾಧಿಕಾರಿ ರಾಮಚಂದ್ರ ರಾಜೇ ಅರಸ್ ಆದೇಶಿಸಿದ್ದಾರೆ.

ಕೆ.ಆರ್.ನಗರ ತಾಲೂಕು ಡಿ.ಕೆ.ಕೊಪ್ಪಲು ಗಾಮದ ರಾಮೇಗೌಡರ ಪುತ್ರನಾದ ಲೋಕೇಶ್(ಲಕ್ಷ್ಮಣೇಗೌಡ) ತನ್ನ ಮೃತ ಅಣ್ಣ ಲೋಕೇಶ್‌ಗೆ ಅಂಚೆ ಮೂಲಕ ಶಿಕ್ಷಣ ಇಲಾಖೆಯಿಂದ ಬಂದಿದ್ದ ನೇಮಕಾತಿ ಆದೇಶ ಪತ್ರ ಹಾಗೂ ಇತರ ದಾಖಲೆಗಳನ್ನು ಶಿಕ್ಷಣ ಇಲಾಖೆಗೆ ಹಾಜರುಪಡಿಸಿ, ತಾನೇ ಲೋಕೇಶ್ ಎಂದು ಹೇಳಿಕೊಂಡು ಇಲಾಖೆಗೆ ಸೇರ್ಪಡೆಯಾಗಿ ಸರ್ಕಾರಕ್ಕೆ ವಂಚಿದ್ದಾನೆ ಎಂಬ ಆರೋಪದಡಿ ಬಂಧಿತನಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರ ನಿಯಮದಡಿ ಅಮಾನತುಗೊಳಿಸಿ ಆದೇಶಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ಸದಸ್ಯ ರಂಗಸ್ವಾಮಿ ಆರ್. ಅವರು ಡಾ. ಬಾಬೂಜಿ ಜಯಂತಿ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಇದೇ ವೇಳೆ ಎಂ.ಶ್ರೀನಿವಾಸ್, ಮಹೇಶ್, ಮಲ್ಲೇಶ್, ಪ್ರಕಾಶ್, ಸತೀಶ್, ಚೇತನ್ ಇತರರಿದ್ದರು.

ಇಂದು ಮಹಾರಾಣಿ ಕೆಂಪನಂಜಮ್ಮಣ್ಣಿ ಅಮ್ಮನವರ ದಿನಾಚರಣೆ


ಮೈಸೂರು, ಏ.6–ಮೈಸೂರಿನ ಕರ್ನಾಟಕ ಸೇನಾ ಪಡೆ ವತಿಯಿಂದ ನಾಳೆ(ಗುರುವಾರ) ಬೆಳಗ್ಗೆ 11.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಮಹಾರಾಣಿ ಕೆಂಪನಂಜಮ್ಮಣ್ಣಿ ಅಮ್ಮನವರ ದಿನಾಚರಣೆ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರಿಗೆ ಕೆಂಪನಂಜಮ್ಮಣ್ಣಿ–ವಾಣಿವಿಲಾಸ ಸನ್ನಿಧಾನ ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಹಾಗೂ ಮಹಾರಾಣಿ ಕಾಲೇಜಿನ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಡಾ. ಭಾಷ್ಯಂ ಸ್ವಾಮೀಜಿ ಸಾನಿಧ್ಯದಲ್ಲಿ ಕಾರ್ಯಕ್ರಮವನ್ನು ಶಾಸಕ ಎಲ್.ನಾಗೇಂದ್ರ ಉದ್ಘಾಟಿಸುವರು. ಕೆಂಪನಂಜಮ್ಮಣ್ಣಿ ಅಮ್ಮನವರ ಭಾವಚಿತ್ರಕ್ಕೆ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು ಪುಷ್ಪಾರ್ಚನೆ ಮಾಡುವರು. ಡಿಡಿಪಿಐ ರಾಮಚಂದ್ರ ರಾಜೇ ಅರಸ್, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಮಾಡುವರು. ಜೆಡಿಯು ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಡಾ. ಮಂಜುಳಾ ಉಮೇಶ್ ಅಧ್ಯಕ್ಷತೆ ವಹಿಸುವರು. ಅಮರನಾಥರಾಜೇ ಅರಸ್ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡುವರು. ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಟಿ.ಗಂಗಾಧರ್, ಕಾರ್ಮಿಕ ಇಲಾಖೆಯ ಸಹಾಯಕ ಆಯುಕ್ತೆ ನಾಜಿಯಾ ಸುಲ್ತಾನಾ, ಕರ್ನಾಟಕ ಸೇನಾ ಪಡೆ ರಾಜ್ಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಪ್ರಕಟಣೆ ತಿಳಿಸಿದೆ.


ಚಾಮುಂಡಿಬೆಟ್ಟದ ರಾಜೇಂದ್ರ ವಿಲಾಸ ಅರಮನೆ ಮತ್ತೆ ಹೋಟೆಲ್ ಆಗಿ ದಸರಾ ವೇಳೆಗೆ ಆರಂಭ











ಮೂರನೇ ಪುಟದಿಂದ

ಕಾಮಗಾರಿ ನಡೆಸುತ್ತಿದ್ದು, ಈವರೆಗೆ ನಡೆದಿರುವ ಕಾಮಗಾರಿ ಚಿತ್ರಗಳನ್ನು ಪ್ರಮೋದಾದೇವಿ ಒಡೆಯರ್ ಅವರು ಟೀವಿ ಮಾನಿಟರ್ ಸ್ಕ್ರೀನ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಪ್ರದರ್ಶಿಸಿ, ವಿವರಿಸಿದರು.

ಕಟ್ಟಡದಲ್ಲಿರುವ 5 ಗೋಪುರದ ಸಂರಕ್ಷಣಾ ಕೆಲಸವನ್ನು ಮೊದಲು ಕೈಗೆತ್ತಿಕೊಂಡಿದ್ದು, ಸುಮಾರು 20 ಅಡಿ ಸುತ್ತಳತೆ ಇರುವ ಪ್ರತೀ ಗೋಪುರಗಳ ಮೂಲ ವಿನ್ಯಾಸಕ್ಕೆ ಧಕ್ಕೆ ಬಾರದಂತೆ ಸೂಕ್ಷ್ಮವಾಗಿ ಕೆಲಸ ಮಾಡಬೇಕಾಗಿರುವುದರಿಂದ ಕಾಮಗಾರಿ ನಿಧಾನಗತಿಯಲ್ಲಿ ಸಾಗಲಿದೆ ಎಂದು ತಿಳಿಸಿದರು.

ನೆಲ ಮಟ್ಟದಿಂದ 120 ಅಡಿ ಎತ್ತರದ ರಾಜೇಂದ್ರ ವಿಲಾಸ ಅರಮನೆ ಕಟ್ಟಡದ ಕಿಟಕಿ, ಬಾಗಿಲು, ನೆಲ, ಗೋಪುರಗಳು, ಕೊಠಡಿಗಳ ಛಾವಣಿ ಶಿಥಿಲವಾಗಿರುವುದರಿಂದ ಹಾಗೂ ಪ್ರತಿಯೊಂದು ಸಾಮಗ್ರಿಗಳನ್ನು ಮೈಸೂರಿನಿಂದಲೇ ಕೊಂಡೊಯ್ಯಬೇಕಾಗಿರುವ ಕಾರಣ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಅವರು ಇದೇ ಸಂದರ್ಭದಲ್ಲಿ ನುಡಿದರು.

ಸುಮಾರು 80 ವರ್ಷಗಳಷ್ಟು ಹಳೆಯದಾದ ಈ ಕಟ್ಟಡದಲ್ಲಿ 1995ರವರೆಗೆ ಹೋಟೆಲ್ ನಡೆಯುತ್ತಿತ್ತು. ನಾನಾ ಕಾರಣದಿಂದಾಗಿ ಮಹಿ ವಾಟು ಸ್ಥಗಿತಗೊಂಡಿತ್ತು. ಈಗಾ ಗಲೇ ಊಟಿ, ಬೆಂಗಳೂರು ಅರಮನೆ, ಮೈಸೂರು ಅರಮನೆಯ ಎರಡು ವಿಭಾಗ ಹಾಗೂ ಜಗನ್ಮೋಹನ ಅರಮನೆಯ ನವೀಕರಣ ಮತ್ತು ಸಂರಕ್ಷಣಾ ಕೆಲಸ ಕೈಗೆತ್ತಿಕೊಂಡಿದ್ದರಿಂದಾಗಿ ಚಾಮುಂಡಿ ಬೆಟ್ಟದ ರಾಜೇಂದ್ರ ವಿಲಾಸ ಅರಮನೆ ಕಟ್ಟಡ ನವೀಕರಣ ಕಾಮಗಾರಿ ಸಾಧ್ಯವಾಗಿರಲಿಲ್ಲ. ಗತ ವೈಭವ ಸಾರುವ ಈ ಕಟ್ಟಡದ ನವೀಕರಣ ಯೋಜನೆಯನ್ನು ನಮ್ಮ ಸಂಪನ್ಮೂಲಗಳಿಂದಲೇ ಮಾಡುತ್ತಿದ್ದೇವೆಯೇ ಹೊರತು ಯಾವುದೇ ಬ್ಯಾಂಕ್‌ನಲ್ಲಿ ಸಾಲ ಸೌಲಭ್ಯ ಪಡೆದಿಲ್ಲ ಎಂದು ಪ್ರಮೋದಾ ದೇವಿ ಸ್ಪಷ್ಟಪಡಿಸಿದರು.

ಕಟ್ಟಡದ ಸದೃಢತೆ ಬಗ್ಗೆ ಸ್ಟ್ರಕ್ಚರಲ್ ಇಂಜಿನಿಯರ್‌ಗಳಿಂದ ಅಭಿಪ್ರಾಯ ಪಡೆದಿದ್ದೇವೆ ತುಂಬಾ ಗಟ್ಟಿಯಾಗಿದೆ ಎಂದು ಖಾತರಿಪಡಿಸಿಕೊಂಡ ನಂತರವೇ ನವೀಕರಣ ಕೈಗೊಳ್ಳಲಾಗುತ್ತಿದೆ. ಕಟ್ಟಡದಲ್ಲಿ ಅಳವಡಿಸಲಾಗಿರುವ ಕಬ್ಬಿಣ ತುಕ್ಕು ಹಿಡಿದಿದೆ. ಮರ, ಗಾಜುಗಳು ಹಾಗೂ ಗೋಡೆ, ಗೋಪುರಗಳ ಪ್ಲಾಸ್ಟಿಂಗ್ ಅಲ್ಲಲ್ಲಿ ಶಿಥಿಲಗೊಂಡಿದ್ದರಿಂದ ಪರಿಣಿತಿ ಪಡೆದ ಕೆಲಸಗಾರರಿಂದ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ಅಕ್ಟೋಬರ್ ಅಥವಾ ನವೆಂಬರ್ ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸವಿದೆ. 22 ಕೊಠಡಿಗಳಿರುವ ಕಟ್ಟಡಕ್ಕೆ ಹೊರ ಭಾಗದಿಂದ ಫ್ಲೆಡ್‌ಲೈಟ್‌ಗಳನ್ನು ಹಾಕಿ ಮೈಸೂರು ನಗರದಿಂದಲೂ ಅದರ ವೈಭವ ಕಾಣುವಂತೆ ಮಾಡುವುದಲ್ಲದೇ, ಸಂಪರ್ಕ ರಸ್ತೆಗಳ ದುರಸ್ತಿ ಸಹ ಮಾಡಿಸಲಾಗುವುದು ಎಂದು ಪ್ರಮೋದಾದೇವಿ ಇದೇ ವೇಳೆ ನುಡಿದರು.

ಕಾಮಗಾರಿ ಮುಗಿಯುತ್ತಿದ್ದಂತೆಯೇ ನಾವೇ ಹೋಟೆಲ್ ನಿರ್ವಹಣೆಯನ್ನೂ ಮಾಡುತ್ತೇವೆಯೇ ಹೊರತು, ಬೇರೆ ಯಾರಿಗೂ ವಹಿಸುವುದಿಲ್ಲ. ಸಾರ್ವಜನಿಕರಿಗೆ ಗುಣಮಟ್ಟದ ಸೇವೆ ಒದಗಿಸಬೇಕೆಂಬ ಉದ್ದೇಶವಿದ್ದು, ಕೈಗೆಟಕುವ ದರವನ್ನೇ ನಿಗದಿಪಡಿಸುತ್ತೇವೆ. ಯಾರು ಬೇಕಾದರೂ ಸೇವೆ ಪಡೆಯಬಹುದಾಗಿದ್ದು, ಅನಗತ್ಯ ನಿರ್ಬಂಧ ವಿಧಿಸುವುದಿಲ್ಲ ಹಾಗೂ ಯಾರು ಬೇಕಾದರೂ ಬಂದು ಕಟ್ಟಡವನ್ನು ನೋಡಬಹುದು ಎಂದು ಪ್ರಮೋದಾದೇವಿ ತಿಳಿಸಿದರು. ಅವರ ಆಪ್ತ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅರಮನೆ ಖಾಸಗಿ ನಿವಾಸದಲ್ಲಿ ಅಗತ್ಯ ಸೌಕರ್ಯ ಕಾಮಗಾರಿ

ಮೈಸೂರು ರಾಜವಂಶಸ್ಥರು ನೆಲೆಸಿರುವ ಮೈಸೂರು ಅರಮನೆಯ ಖಾಸಗಿ ನಿವಾಸದ ಅಗತ್ಯ ಸೌಕರ್ಯಗಳು ಸೇರಿದಂತೆ ಇನ್ನಿತರೆ ಕಾಮಗಾರಿಯೂ ನಡೆಯುತ್ತಿದೆ ಎಂದು ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.

ಇದು ಮೈಸೂರು ಅರಮನೆಯ ಒಂದು ಭಾಗವೇ ಆಗಿರುವುದರಿಂದ ನಿವಾಸದಲ್ಲಿ ಅಗತ್ಯವಿರುವ ಮೂಲ ಸೌಕರ್ಯಗಳ ಅನಿವಾರ್ಯತೆ ಬಗ್ಗೆ ಅರಮನೆ ಮಂಡಳಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ಅನುಮತಿ ಪಡೆದ ನಂತರ ಕಾಮಗಾರಿ ಆರಂಭಿಸಲಾಗಿದೆ ಪ್ರಮೋದಾದೇವಿ ಅವರ ಮನವಿ ಮೇರೆಗೆ ಕಾಮಗಾರಿ ಖಾಸಗಿ ನಿವಾಸಕ್ಕೆ ಸಂಬಂಧಿಸಿದ್ದಾಗಿರುವುದರಿಂದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನದಿಂದಲೇ ನಿರ್ವಹಣೆ ಮಾಡಲು ಸರ್ಕಾರ ಅನುಮತಿಸಿದೆ. ಸರ್ಕಾರ ಇದಕ್ಕಾಗಿ 2 ಕೋಟಿ ರೂ.ಗಳನ್ನು ಕಲ್ಪಿಸಿದೆ. ಈಗಾಗಲೇ 50 ಲಕ್ಷ ರೂ. ಬಿಡುಗಡೆಯೂ ಆಗಿದೆ.

ಟೌನ್‌ಶಿಪ್ ಮಾಡುವುದು ಬೇಡ

ದೇವಾಲಯಗಳಿರುವ ಧಾರ್ಮಿಕ ಕೇಂದ್ರ ಚಾಮುಂಡಿ ಬೆಟ್ಟದಲ್ಲಿ ಮನೆ, ವಾಣಿಜ್ಯ ಮಳಿಗೆಗಳಂತಹ ಕಟ್ಟಡಗಳನ್ನು ನಿರ್ಮಿಸಿ ಅದನ್ನು ಟೌನ್‌ಶಿಪ್ ಮಾಡುವುದು ಸರಿಯಲ್ಲ ಎಂದು ಪ್ರಮೋದಾದೇವಿ ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಚಾಮುಂಡೇಶ್ವರಿ, ಮಹಾಬಲೇಶ್ವರದಂತಹ ಪುರಾತನ ದೇವಾಲಯಗಳಿಗೆ ಭಕ್ತಾದಿಗಳು, ಪ್ರವಾಸಿಗರು ಚಾಮುಂಡಿ ಬೆಟ್ಟಕ್ಕೆ ಬರುತ್ತಾರೆ. ಅಲ್ಲಿ ದೇವಸ್ಥಾನದ ಅರ್ಚಕರು, ಸಿಬ್ಬಂದಿ ಹಾಗೂ ಸ್ಥಳೀಯ ಮೂಲ ಗ್ರಾಮಸ್ಥರು ಉಳಿಯಲು ಸೌಲಭ್ಯ ಒದಗಿಸಿದರಷ್ಟೇ ಸಾಕು. ಅದನ್ನು ಹೊರತುಪಡಿಸಿ ವಾಣಿಜ್ಯ ಮಳಿಗೆ, ಕಟ್ಟಡಗಳು, ಹೊರಗಿನವರು ವಾಸಿಸಲು, ಮನೆ ಕಟ್ಟಲು ಅವಕಾಶ ನೀಡಿದರೆ ಬೆಟ್ಟವು ಒಂದು ಟೌನ್‌ಶಿಪ್ ಆಗುತ್ತದೆ. ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

ಹೊರಗಿನವರೇಕೆ ಅಲ್ಲಿ ಉಳಿಯಬೇಕು?

ಸ್ಥಳೀಯ ನಿವಾಸಿಗಳು, ಅರ್ಚಕರು, ಸಿಬ್ಬಂದಿಗಳನ್ನು ಹೊರತುಪಡಿಸಿ ಹೊರಗಿನವರು ಚಾಮುಂಡಿ ಬೆಟ್ಟದಲ್ಲಿ ಮನೆ ಮಾಡಿ ಏಕೆ ಉಳಿಯಬೇಕು? ಬೆಟ್ಟದಲ್ಲಿ ಮನೆ ಮಾಡಿಕೊಂಡು ವ್ಯವಹಾರ, ವೃತ್ತಿಗೆ ಬೇರೆಡೆ ಹೋಗುವವರಿಗೆ ಚಾಮುಂಡಿ ಬೆಟ್ಟದಲ್ಲಿ ಮನೆ ನಿರ್ಮಿಸಲು ಅವಕಾಶ ಕೊಡುವುದರಲ್ಲಿ ಅರ್ಥವಿಲ್ಲ ಎಂದು ಅವರು ಇದೇ ಸಂದರ್ಭದಲ್ಲಿ ನುಡಿದರು.

ನಿಸರ್ಗ ಸೌಂದರ್ಯಕ್ಕೆ ಧಕ್ಕೆ

ಚಾಮುಂಡಿ ಬೆಟ್ಟದಲ್ಲಿ ಎಲ್ಲೆಂದರಲ್ಲಿ ಕಟ್ಟಡ ನಿರ್ಮಿಸಲು ಅವಕಾಶ ನೀಡಿದಲ್ಲಿ ಅದರ ನೈಸರ್ಗಿಕ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆಯಲ್ಲದೇ, ಮುಂದೆ ಕಾಡು ಮಾಯವಾಗಿ ಕಾಂಕ್ರೀಟ್ ನಿರ್ಮಾಣಗಳ ತಾಣವಾಗುವ ಅಪಾಯವಿದೆ ಎಂದ ಪ್ರಮೋದಾದೇವಿ ಒಡೆಯರ್, ಬೆಟ್ಟವನ್ನು ನಿಸರ್ಗದತ್ತ ಧಾರ್ಮಿಕ ಸ್ಥಳವಾಗಿಯೇ ಉಳಿಸಬೇಕು ಆಗ ಮಾತ್ರ ಯಾತ್ರಾರ್ಥಿಗಳು, ಭಕ್ತರು, ಪ್ರವಾಸಿಗರು ಹೆಚ್ಚು ಹೆಚ್ಚು ಭೇಟಿ ನೀಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮೆಟ್ಟಿಲಿಗೆ ರೇಲಿಂಗ್ ಬೇಡ

ಉತ್ಸಾಹಿ ಯುವಕರು, ದೈಹಿಕವಾಗಿ ಸದೃಢವಾಗಿರುವವರೇ ಮೆಟ್ಟಿಲುಗಳ ಮೂಲಕ ಚಾಮುಂಡಿ ಬೆಟ್ಟ ಏರುತ್ತಿರುವುದರಿಂದ ಅಲ್ಲಿಗೆ ಸ್ಟೀಲ್ ರೇಲಿಂಗ್ ಅಳವಡಿಸುವ ಅಗತ್ಯವಿಲ್ಲ. ಈಗ ಇರುವ ಮೆಟ್ಟಿಲುಗಳು ಹಾಗೇ ಇರುವುದು ಒಳಿತು. ಬೇರೆ ಯಾವುದೇ ಆಧುನಿಕ ಸಲಕರಣೆಗಳನ್ನು ಇಲ್ಲಿ ಅಳವಡಿಸುವುದು ಬೇಡ ಎಂದು ಅವರು ನುಡಿದರು.

ವೈಜ್ಞಾನಿಕ ತಡೆಗೋಡೆ ಅಗತ್ಯ

ಅತೀ ಮಳೆಯಿಂದ ಭೂಕುಸಿತವುಂಟಾಗಿರುವ ನಂದಿ ಬಳಿಯ ರಸ್ತೆಗೆ ವೈಜ್ಞಾನಿಕವಾಗಿ ತಡೆಗೋಡೆ ನಿರ್ಮಿಸುವುದು ಒಳಿತು. ವಿಪರೀತ ಕಾಂಕ್ರೀಟ್ ನಿರ್ಮಾಣಗಳು ಎಲ್ಲೆಂದರಲ್ಲಿ ಬಂದರೆ ಚಾಮುಂಡಿಬೆಟ್ಟವು ಮತ್ತೆ ಮತ್ತೆ ಕುಸಿಯುವ ಅಪಾಯ ಬಂದೊದಗಿದರೂ ಅಚ್ಚರಿಯಿಲ್ಲ ಎಂದ ಪ್ರಮೋದಾದೇವಿ ಒಡೆಯರ್, ಒಟ್ಟಾರೆ ಕಾಯ್ದೆ ತಂದಾದರೂ ಸರಿ, ತರದೆ ಇದ್ದರೂ ಚಾಮುಂಡಿ ಬೆಟ್ಟದ ನೈಸರ್ಗಿಕ ಸೌಂದರ್ಯವನ್ನು ಉಳಿಸಬೇಕೆಂಬುದು ನನ್ನ ಅಭಿಪ್ರಾಯ ಎಂದರು.

ಕಟ್ಟಡಗಳ ಸಂರಕ್ಷಿಸಬೇಕು

ಪಾರಂಪರಿಕ ವಿನ್ಯಾಸವನ್ನು ಉಳಿಸಿಕೊಂಡು ನವೀಕರಣ ಮಾಡಿ ಸಂರಕ್ಷಿಸಲು ಸಾಧ್ಯವಿದೆ ಎಂದ ಅವರು, ಎರಡು ಪ್ರತ್ಯೇಕ ಸಮಿತಿಗಳು ವಿಭಿನ್ನ ಅಭಿಪ್ರಾಯ ವ್ಯಕ್ತಪಡಿಸಿವೆ. ಸಾರ್ವಜನಿಕ ರಿಂದಲೂ ಮಿಶ್ರ ಪ್ರತಿಕ್ರಿಯೆ ಬಂದಿರಬಹುದು. ಆದರೆ ಸರ್ಕಾರ ಈ ಪಾರಂಪರಿಕ ಕಟ್ಟಡಗಳನ್ನು ಉಳಿಸುವ ನಿಟ್ಟಿನಲ್ಲಿ ದೃಢ ನಿರ್ಧಾರ ಮಾಡುವ ಅಗತ್ಯವಿದೆ ಎಂದರು.

ನಮ್ಮ ಪ್ರತಿಷ್ಠಾನದಿಂದ ಈಗಾಗಲೇ ಜಗನ್ಮೋಹನ ಅರಮನೆ, ಊಟಿ, ಬೆಂಗಳೂರು ಅರಮನೆಗಳ ನವೀಕರಣಗೊಳಿಸಿದ್ದು, ಮಯಸೂರು ಅರಮನೆಯ ಎರಡು ಭಾಗಗಳನ್ನು ಪುನರುಜ್ಜೀವನಗೊಳಿಸಿರುವುದರಿಂದ ನಮಗೇ ಜವಾಬ್ದಾರಿ ಕೊಟ್ಟರೆ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಗಳನ್ನು ಪಾರಂಪರಿಕ ಶೈಲಿಯನ್ನೇ ಉಳಿಸಿಕೊಂಡು ನವೀಕರಿಸುತ್ತೇವೆ ಎಂದು ಪ್ರಮೋದಾದೇವಿ ಒಡೆಯರ್ ಇದೇ ವೇಳೆ ತಿಳಿಸಿದರು.

ಪ್ರವಾಸಿಗರು ಮೈಸೂರಿಗೆ ಬರುವುದು ಇಲ್ಲಿನ ಪಾರಂಪರಿಕ ಕಟ್ಟಡಗಳೂ ಮತ್ತು ಸ್ಮಾರಕಗಳನ್ನು ವೀಕ್ಷಿಸುವುದಕ್ಕಾಗಿ ಎಂಬುದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈ ಎರಡೂ ಐತಿಹಾಸಿಕ ಕಟ್ಟಡಗಳನ್ನು ನೆಲಸಮಗೊಳಿಸದೇ ಸಂರಕ್ಷಿಸಬೇಕು ಎಂದು ಅವರು ತಿಳಿಸಿದರು.

ಯುವಕನ ಹತ್ಯೆ ವಿಚಾರದಲ್ಲಿ ಗೃಹ ಸಚಿವರ ಗೊಂದಲ, ಆತಂಕಕಾರಿ ಹೇಳಿಕೆ!?

ಬೆಂಗಳೂರು, ಏ. 6– ಬೆಂಗಳೂರಿನ ಹಳೇಗುಡ್ಡದ ಹಳ್ಳಿಯಲ್ಲಿ ನಿನ್ನೆ ರಾತ್ರಿ ನಡೆದ ಯುವಕನ ಕೊಲೆ ಪ್ರಕರಣ ಕುರಿತು ಗೃಹ ಸಚಿವ ಆರಗ ಜ್ಞಾನೇಂದ್ರ ನೀಡಿದ ಹೇಳಿಕೆ ವಿವಾದದ ಸ್ವರೂಪ ಪಡೆದಿದ್ದು, ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದೆ.



ಆರಗ ಜ್ಞಾನೇಂದ್ರ

ಮಂಗಳವಾರ ರಾತ್ರಿ ಚಂದ್ರು ಎಂಬ ಯುವಕನನ್ನು ಚೂರಿಯಿಂದ ಇರಿದು ಭೀಕರವಾಗಿ ಕೊಲೆ ಮಾಡಲಾಗಿತ್ತು. ಈ ಸಂಬಂಧ ಇಂದು ಬೆಳಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುವ ಭರದಲ್ಲಿ ಚಂದ್ರು ಹತ್ಯೆ ಬಗ್ಗೆ ಮಾಹಿತಿ ಪಡೆಯಲಾಗಿದೆ. ಆತನಿಗೆ ಉರ್ದು ಮಾತನಾಡುವಂತೆ ಒತ್ತಾಯ ಮಾಡಿದ್ದಾರೆ. ಚಂದ್ರುವಿಗೆ ಕನ್ನಡ ಬಿಟ್ಟರೆ ಬೇರೆ ಭಾಷೆ ಬರಲ್ಲ. ಇದರಿಂದ ತನಗೆ ಉರ್ದು ಬರಲ್ಲ ಎಂದಾಗ, ಚೂರಿಯಿಂದ ಚುಚ್ಚಿ–ಚುಚ್ಚಿ ಕೊಂದಿದ್ದಾರೆ. ಚಂದ್ರು ಒಬ್ಬ ದಲಿತ ಯುವಕ. ಪ್ರಕರಣ ಸಂಬಂಧ ಕೆಲವರನ್ನು ಬಂಧನಕ್ಕೊಳಪಡಿಸ ಲಾಗಿದೆ. ಪ್ರಕರಣದ ತನಿಖೆ ಪ್ರಗತಿಯಲ್ಲಿದೆ ಎಂದರು.

ಗೃಹ ಸಚಿವರ ಈ ಹೇಳಿಕೆ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಮುಜುಗರ ಉಂಟುಮಾಡಿತ್ತು. ಎಲ್ಲಾ ಕಡೆಯಿಂದ ವ್ಯಾಪಕ ಟೀಕೆಗಳು ವ್ಯಕ್ತವಾಯಿತು. ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವಂತಹ ಹೇಳಿಕೆ ನೀಡಿರುವುದು ಸರಿಯಲ್ಲ ಎಂಬ ಮಾತುಗಳು ಕೇಳಿಬಂದವು.

ತಮ್ಮ ಹೇಳಿಕೆ ವಿವಾದ ಸ್ವರೂಪ ಪಡೆಯುತ್ತಿರುವುದನ್ನು ಅರಿತ ಗೃಹ ಸಚಿವ ಆರಗ ಜ್ಞಾನೇಂದ್ರ, ಚಂದ್ರು ಕೊಲೆ ಪ್ರಕರಣದ ಸಂಪೂರ್ಣ ಮಾಹಿತಿ ಬಂದಿದೆ. ನಾನು ಚಂದ್ರುವಿನ ಕೊಲೆಯನ್ನು ಭಾಷೆ ವಿಚಾರಕ್ಕಾಗಿ ಆಗಿದೆ ಎಂದು ಹೇಳಿದ್ದೆ. ಇದು ನನ್ನಿಂದ ತಪ್ಪಾಗಿದೆ. ಎರಡು ಬೈಕುಗಳ ನಡುವೆ ನಡೆದ ಡಿಕ್ಕಿಯಿಂದ ವಾಗ್ವಾದ ನಡೆದು ಕೊಲೆ ನಡೆದಿದೆ ಎಂದು ಹೇಳುವ ಮೂಲಕ ತಮ್ಮ ಹೇಳಿಕೆಯನ್ನು ಹಿಂಪಡೆಯಲು ಯತ್ನಿಸಿದರು.

ಏನಿದು ಪ್ರಕರಣ?: ಹಳೇ ಗುಡ್ಡದಹಳ್ಳಿ ಸಮೀಪ ಸೋಮವಾರ ತಡರಾತ್ರಿ ಚಿಕನ್ ರೋಲ್ ತಿನ್ನಲು ಸ್ನೇಹಿತ ಸೈಮನ್ ರಾಜ್ ಜೊತೆ ಚಂದ್ರು ಹೋಗಿದ್ದ ಸಂದರ್ಭದಲ್ಲಿ ಈ ಹತ್ಯೆ ನಡೆದಿದೆ.

ರೈಲ್ವೇ ಗೂಡ್ಸ್ ಶೆಡ್‌ನಲ್ಲಿ ಹೊರಗುತ್ತಿಗೆ ಆಧಾರದಡಿ ಕೆಲಸ ಮಾಡುತ್ತಿದ್ದ ಮೃತ ಚಂದ್ರು, ತನ್ನ ಕುಟುಂಬದ ಜೊತೆಗೆ ಮಾರುತಿ ನಗರದಲ್ಲಿ ನೆಲೆಸಿದ್ದ. ಮಂಗಳವಾರ ಆತನ ಆಪ್ತ ಸ್ನೇಹಿತ ಸೈಮನ್ ರಾಜ್ ಹುಟ್ಟುಹಬ್ಬವಿತ್ತು. ಈ ಹಿನ್ನೆಲೆಯಲ್ಲಿ ಗೆಳೆಯನಿಗೆ ಇಷ್ಟದ ತಿಂಡಿ ಚಿಕನ್ ರೋಲ್ ಕೊಡಿಸುವ ಸಲುವಾಗಿ ತಡರಾತ್ರಿ 2 ಗಂಟೆ ಸುಮಾರಿಗೆ ಹಳೇ ಗುಡ್ಡದಹಳ್ಳಿಗೆ ಸೈಮನ್‌ನನ್ನು ಕರೆದುಕೊಂಡು ಚಂದ್ರು ಬಂದಿದ್ದಾನೆ. ಆರಂಭದಲ್ಲಿ ಕಿರಿದಾದ ರಸ್ತೆಯಾದ ಕಾರಣ ಶಾಹೀದ್ ಎಂಬುವವನ ಬೈಕ್ ಚಂದ್ರು ಬೈಕ್‌ಗೆ ಟಚ್ ಆಗಿದೆ. ಈ ವೇಳೆ ಚಂದ್ರು ಬೈದಿದ್ದು, ಕೊನೆಗೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಹತ್ಯೆ ನಡೆದಿದೆ ಎಂದು ಹೇಳಲಾಗಿದೆ.

ಪ್ರತಿಕ್ರಿಯಿಸಲು ಕಮಲ್‌ಪಂತ್ ನಕಾರ: ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಅವರನ್ನು ಸುದ್ದಿಗಾರರು ಈ ಬಗ್ಗೆ ಪ್ರಶ್ನಿಸಿದಾಗ ಪ್ರತಿಕ್ರಿಯಿಸದೆ ಹೊರಟು ಹೋದರು.

ಪುನರಾವರ್ತನೆ

ಕಳೆದ ವರ್ಷ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಕಾಲೇಜು ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣ ನಡೆದಿದ್ದ ಸಂದರ್ಭದಲ್ಲೂ ಅಷ್ಟೊತ್ತಿನಲ್ಲಿ ಯುವತಿ ಅಲ್ಲಿಗೆ ಯಾಕೆ ಹೋಗಬೇಕಿತ್ತು ಎಂಬ ಬೇಜವಾಬ್ದಾರಿ ಹೇಳಿಕೆ ನೀಡಿ ಗೃಹ ಸಚಿವರು ತೀವ್ರ ವಿವಾದಕ್ಕೀಡಾಗಿದ್ದರು.

ಇದೀಗ ಇಂದು ಅಂತಹದ್ದೇ ಅಜ್ಞಾನ, ಬೇಜವಾಬ್ದಾರಿಯ ನಡೆಯನ್ನು ಗೃಹ ಸಚಿವರು ಪ್ರದರ್ಶಿಸಿದ್ದು ರಾಜ್ಯದ ಗೃಹ ಸಚಿವರಾಗಿ ಈ ರೀತಿ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುವುದು ಸರಿಯೇ, ಅವರು ಆ ಸ್ಥಾನದಲ್ಲಿ ಮುಂದುವರಿಯಲು ಅರ್ಹರೇ? ಎಂಬ ಪ್ರಶ್ನೆ ಎದ್ದಿದೆ. ವಿಪಕ್ಷ ನಾಯಕ ಸಿದ್ದರಾಮಯ್ಯ, ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಗೃಹ ಸಚಿವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

ವಿವರ ತಿಳಿದುಕೊಂಡು ಪ್ರತಿಕ್ರಿಯಿಸುತ್ತೇನೆ: ಇನ್ನು ದೆಹಲಿ ಪ್ರವಾಸದಲ್ಲಿರುವ ಸಿಎಂ ಬಸವರಾಜ ಬೊಮ್ಮಾಯಿ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೊರಬಂದು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಬೆಂಗಳೂರಿನ ಜೆಜೆ ನಗರದಲ್ಲಿ ಯುವಕ ಚಂದ್ರು ಕೊಲೆ ಪ್ರಕರಣದ ಬಗ್ಗೆ ಮಾಹಿತಿಯಿಲ್ಲ, ಕೇಸು ವಿವರ ಪಡೆದು ಗೃಹ ಸಚಿವ ಆರಗ ಜ್ಞಾನೇಂದ್ರ ನೀಡಿರುವ ಹೇಳಿಕೆಯ ವಿವರ ಪಡೆದು ಪ್ರತಿಕ್ರಿಯಿಸುತ್ತೇನೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಮೈಸೂರಲ್ಲಿ ಬಿಜೆಪಿ ಸಂಸ್ಥಾಪನಾ ದಿನ ಆಚರಣೆ

ಫಲಾನುಭವಿ ಪ್ರಕೋಷ್ಠದಿಂದ ಹಲವರಿಗೆ ಸನ್ಮಾನ



ಮೈಸೂರು, ಏ.6(ಎಂಟಿವೈ)– ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರು ಬುಧವಾರ ವಿವಿಧೆಡೆ ಬಿಜೆಪಿ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತಲ್ಲದೆ, ಪಕ್ಷದ ಸಂಘಟನೆಗೆ ಶ್ರಮಿಸಿದ ಹಿರಿಯ ಕಾರ್ಯಕರ್ತರನ್ನು ಗೌರವಿಸಲಾಯಿತು.

ಮೈಸೂರಿನ ವಿವಿಧ ಕ್ಷೇತ್ರಗಳ ಬಿಜೆಪಿ ಕಾರ್ಯಕರ್ತರು ಪ್ರತ್ಯೇಕವಾಗಿ ಮೆರವಣಿಗೆ, ಸನ್ಮಾನ ಕಾರ್ಯಕ್ರಮ ಆಯೋಜಿಸುವ ಮೂಲಕ ಪಕ್ಷದ ಸಂಸ್ಥಾಪನಾ ದಿನ ಆಚರಿಸಿ, ಪಕ್ಷದ ನಿಷ್ಠೆ ಪ್ರದರ್ಶಿಸಿದರು.

ಫಲಾನುಭವಿ ಪ್ರಕೋಷ್ಠ: ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಫಲಾನುಭವಿ ಪ್ರಕೋಷ್ಠದ ವತಿಯಿಂದ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಂಗವಾಗಿ ದೊಡ್ಡ ಪರದೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾಷಣ ಬಿತ್ತರಿಸಲಾಯಿತು. ಸಂಸ್ಥಾಪನಾ ದಿನದ ಹಿನ್ನೆಲೆಯಲ್ಲಿ ಪ್ರಕೋಷ್ಠದ ಕಾರ್ಯಕರ್ತರು ಶಿವರಾಮಪೇಟೆ, ವಿನೋಬಾ ರಸ್ತೆ, ಸಂತೇಪೇಟೆ ರಸ್ತೆಯಲ್ಲಿ ಮೆರವಣಿಗೆ ನಡೆಸಿ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪ ತಲುಪಿ, ಪ್ರಧಾನಿ ಮೋದಿ ಭಾಷಣ ಕೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಎಲ್. ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ನಗರ ಪಾಲಿಕೆ ಸದಸ್ಯರಾದ ಲಕ್ಷ್ಮೀ ಕಿರಣ್‌ಗೌಡ, ಕೆ.ಜೆ.ರಮೇಶ್, ಜಗದೀಶ್, ಚಾಮರಾಜ ಕ್ಷೇತ್ರದ ಪಕ್ಷದ ಉಸ್ತುವಾರಿ, ವಿಧಾನಪರಿಷತ್ ಸದಸ್ಯ ಬಿ.ಮುನಿರಾಜುಗೌಡ, ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸೋಮಶೇಖರ ರಾಜು, ಬಿಜೆಪಿ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಮನೀಶ್ ಕುಮಾರ್, ಸೋಮ್‌ಸುಂದರ್, ಉಸ್ತುವಾರಿ ಹಿರೇಂದ್ರ, ರಾಜ್ಯ ಸಮಿತಿ ಸದಸ್ಯರಾದ ಉಮೇಶ್, ಫಲಾನುಭವಿ ಪ್ರಕೋಷ್ಠದ ಸಂಚಾಲಕ ಆರ್.ಪರಮೇಶ್, ಸಹ ಸಂಚಾಲಕರಾದ ಗದಾಧರ್, ಮಮತಾ, ಸೋಮಶೇಖರ್, ದೀಪಕ್, ರೇವಣ್ಣ, ಸೋಹನ್ ನಾಯಕ್, ಶ್ರೀಕಂಠ, ಭಾರತಿ ಪಶುಪತಿ, ಪೂರ್ಣಿಮಾ ಚಂದ್ರಪ್ಪ, ಶ್ರೀನಿವಾಸ್, ಪ್ರದೀಪ್, ಚೇತನ್, ಅನಿತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿ ಕಚೇರಿಯಲ್ಲಿ ಸನ್ಮಾನ: ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಬಿಜೆಪಿ ಹಿರಿಯ ಕಾರ್ಯಕರ್ತರಾದ ಶಾಂತಾ ಸೋಮಶೇಖರ್, ಗಂಗಾಧರ್ (ಗಂಗಣ್ಣ), ಮಹದೇವು(ನಲ್ಲಿ), ಶೇಷಯ್ಯ, ಹಿನ್‌ಕಲ್ ಶ್ರೀನಿವಾಸ್ ಹಾಗೂ ಪರೀಕ್ಷಾ ಪೇ ಚರ್ಚೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿ ಎಂ.ಬಿ. ತರುಣ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ವಕ್ತಾರ ಮಹೇಶ್, ನಗರಾಧ್ಯಕ್ಷ ಶ್ರೀವತ್ಸ ಫಲಾನುಭವಿ ಪ್ರಕೋಷ್ಠದ ಸಂಚಾಲಕ ಆರ್. ಪರಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ



ಮೈಸೂರು, ಏ.6(ಎಂಕೆ)– ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ, ಪತ್ರಕರ್ತ ಗಣೇಶ್ ಅಮೀನಗಡ, ಸಾಹಿತಿಗಳಾದ ಯಲ್ಲಪ್ಪ ಕೆಕೆ ಪುರ, ಪ್ರೊ ಮೈಸೂರು ಕೃಷ್ಣಮೂರ್ತಿ ಹಾಗೂ ಆಲೂರು ದೊಡ್ಡ ನಿಂಗಪ್ಪ ಅವರನ್ನು ಅಭಿನಂದಿಸಲಾಯಿತು.

ಮೈಸೂರು ವಿಜಯನಗರ 1ನೇ ಹಂತದಲ್ಲಿರುವ ಸಾಹಿತ್ಯ ಭವನದಲ್ಲಿ ಜಿಲ್ಲಾ ಕಸಾಪ, ಕನ್ನಡ ಸಾಹಿತ್ಯ ಕಲಾಕೂಟ, ಸ್ನೇಹ ಸಿಂಚನ ಟ್ರಸ್ಟ್ ಹಾಗೂ ಹಿಮಾಲಯ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಹಿರಿಯ ವಿದ್ವಾಂಸ ಡಾ.ಪ್ರಧಾನ ಗುರುದತ್ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, ಪ್ರಶಸ್ತಿ ಪುರಸ್ಕೃತರು ತಮ್ಮ ಕ್ಷೇತ್ರದಲ್ಲಿ ಮತ್ತಷ್ಟು ಕೊಡುಗೆ ನೀಡಬೇಕು ಎಂದು ಹೇಳಿದರು.

ಡಾ.ಯೋಗಣ್ಣ ವೈದ್ಯ ಸಾಹಿತಿಯಾಗಿದ್ದು, ವೈದ್ಯಕೀಯ ವಿಶ್ವಕೋಶ ತಯಾರಿಕೆಯಲ್ಲಿದ್ದಾರೆ. ವೈದ್ಯ ಸಾಹಿತಿಗಳು ಬಹಳ ವಿರಳ. ಯೋಗಣ್ಣರಿಗೆ ರಾಷ್ಟ್ರಮಟ್ಟದ ಪ್ರಶಸ್ತಿಗಳು ಲಭಿಸಬೇಕು. ಹಾಗೆಯೇ ರಂಗಭೂಮಿಯೊಂದಿಗೆ ಕಳೆದ 30 ವರ್ಷಗಳಿಂದ ಒಡನಾಟ ಇಟ್ಟುಕೊಂಡಿರುವ ಪತ್ರಕರ್ತ ಗಣೇಶ್ ಅಮೀನಗಡ ಹಾಗೂ ಪ್ರಶಸ್ತಿ ಪುರಸ್ಕೃತರೆಲ್ಲರೂ ಸಾಧಕರಾಗಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಲೀಲಾ ಪ್ರಕಾಶ್ ಮಾತನಾಡಿ, ಸಾಹಿತ್ಯಕ್ಕೆ ನೋವನ್ನು ದೂರ ಮಾಡುವ ಶಕ್ತಿ ಇದೆ. ಆದರೆ ಇತ್ತೀಚಿನ ಸಾಹಿತ್ಯದಲ್ಲಿ ನೋವನ್ನು ಬಿಂಬಿಸುವ ಕೃತಿಗಳಿಗೆ ಹೆಚ್ಚು ಮನ್ನಣೆ ಸಿಗುತ್ತಿರುವುದು ಬೇಸರದ ಸಂಗತಿಯಾಗಿದೆ. ಸಾಹಿತ್ಯ ರಚನೆ ನಿಮ್ಮ ನೆನಪನ್ನು ಕೊನೆವರೆಗೂ ಉಳಿಸುವಂತಿರಬೇಕು ಎಂದು ಹೇಳಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷರಾದ ವೈ.ಡಿ. ರಾಜಣ್ಣ, ಎಂ.ಚಂದ್ರಶೇಖರ್, ಯೂನಿವರ್ಸಲ್ ಅಕಾಡೆಮಿ ಅಧ್ಯಕ್ಷ ಪ್ರಕಾಶ್ ಬಿ.ಎಸ್ ಹಳ್ಳಿ, ಸ್ನೇಹ ಸಿಂಚನ ಟ್ರಸ್ಟ್‌ನ ಮ.ನ.ಲತಾ ಮೋಹನ್, ಹಿಮಾಲಯ ಪ್ರತಿಷ್ಠಾನದ ಅನಂತ್ ದೀಕ್ಷಿತ್ ಉಪಸ್ಥಿತರಿದ್ದರು.

ರಾಜ್ಯ ಹೋಟೆಲ್ ಮಾಲೀಕರ ಸಂಘಕ್ಕೆ ಎಂ. ರಾಜೇಂದ್ರ ಗೌರವಾಧ್ಯಕ್ಷ

ಬೆಂಗಳೂರು, ಏ. 6– ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾಗಿ ಬೆಂಗಳೂರಿನ ಹೋಟೆಲ್ ಸ್ವಾತಿ ಗ್ರೂಪ್‌ನ ಜಿ.ಕೆ. ಶೆಟ್ಟಿ (ಗೋಪಾಲಕೃಷ್ಣ ಶೆಟ್ಟಿ) ಮತ್ತು ಗೌರವಾಧ್ಯಕ್ಷರಾಗಿ ಬಿಜೆಪಿ ಮುಖಂಡರೂ ಆದ ಮೈಸೂರು ಹೋಟೆಲ್ ಮಾಲೀಕರ ಸಂಘದ ಮಾಜಿ ಅಧ್ಯಕ್ಷ ಎಂ. ರಾಜೇಂದ್ರ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.



ರಾಜ್ಯ ಸಂಘದ ಮೈಸೂರು ಜಿಲ್ಲೆಯ ನಿರ್ದೇಶಕರಾಗಿ ಸಿ. ನಾರಾಯಣಗೌಡ, ಕೆ. ಪ್ರಕಾಶ ಶೆಟ್ಟಿ, ರವಿಶಾಸ್ತ್ರಿ, ಉಗ್ರಯ್ಯ, ಸುಬ್ರಹ್ಮಣ್ಯ ತಂತ್ರಿ ಆಯ್ಕೆಯಾಗಿದ್ದಾರೆ. ರಾಜೇಂದ್ರಅವರನ್ನು ರಾಜ್ಯ ಹೋಟೆಲ್ ಮಾಲೀಕರ ಸಂಘದ ಗೌರವಾಧ್ಯಕ್ಷರಾಗಿ ಆಯ್ಕೆ ಮಾಡಿರುವುದು ಮೈಸೂರಿನ ಎಲ್ಲರಿಗೂ ಸಂತೋಷವನ್ನುಂಟು ಮಾಡಿದೆ ಎಂದಿರುವ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಸಂಘದ ಕಾರ್ಯದರ್ಶಿಗಳು, ನಾಮನಿರ್ದೇಶಕರು ಹಾಗೂ ರಾಜ್ಯದ ಎಲ್ಲಾ ಹೋಟೆಲ್ ಉದ್ಯಮಿಗಳಿಗೆ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದ್ದಾರೆ.

ಏ.10, 14 ರಂದು ಮಾಂಸ ಮಾರಾಟ ನಿಷೇಧ

ಮೈಸೂರು, ಏ.6– ನಗರದಲ್ಲಿ ಶ್ರೀ ರಾಮ ನವಮಿ ಪ್ರಯುಕ್ತ ಏ.10 ಭಾನುವಾರ ಹಾಗೂ ಮಹಾವೀರ ಜಯಂತಿ ಪ್ರಯುಕ್ತ ಏ.14 ಗುರುವಾರದಂದು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುರಿ, ಮೇಕೆ, ಕೋಳಿ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ಕಡ್ಡಾಯವಾಗಿ ನಿಷೇಧಿಸಿದ್ದು, ನಗರಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿ ಗಳನ್ನು ಮುಚ್ಚಲು ಆದೇಶ ನೀಡಲಾಗಿದೆ ಎಂದು ಪಾಲಿಕೆಯ ಆರೋಗ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಟ್ಟೆಗಳ ಜೀವನ: ವಿಶೇಷ ಉಪನ್ಯಾಸ

ಮೈಸೂರು, ಏ.6(ಎಂಕೆ)– ಅರಿವು ಟ್ರಸ್ಟ್ ಹಾಗೂ ಮೈಂಡ್ಸ್ ಯುನೈಟೆಡ್ ಟ್ರಸ್ಟ್, ಇನ್ಫೋಸಿಸ್ ಫೌಂಡೇಶನ್ ನೇಚರ್ ಕ್ಲಬ್ ಅಂಡ್ ಲೈಬ್ರರಿ ವತಿಯಿಂದ ಏ.8 ರಂದು ಸಂಜೆ 6 ಗಂಟೆಗೆ ನಗರದ ಶ್ರೀರಾಂಪುರದಲ್ಲಿರುವ ಅರಿವು ಶಾಲೆಯಲ್ಲಿ 'ಚಿಟ್ಟೆಗಳ ಜೀವನ' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬಟರ್‌ಫ್ಲೈ ಪಾರ್ಕ್ ಖ್ಯಾತಿಯ ಸಮ್ಮಿಲನ್ ಶೆಟ್ಟಿ 'ಚಿಟ್ಟೆಗಳ ಜೀವನ' ಕುರಿತು ಉಪನ್ಯಾಸ ನೀಡಲಿದ್ದಾರೆ. ಚಿಟ್ಟೆಗಳ ದೈನಂದಿನ ಚಟುವಟಿಕೆಗಳ ಕುರಿತು 'ಲೈಫ್ ಆಫ್ ಬಟರ್ ಫ್ಲೈಸ್' ಎಂಬ ಸಾಕ್ಷ್ಯಚಿತ್ರ ನಿರ್ಮಾಣ ಮಾಡಿರುವ ಇವರು, ಮೂಡಬಿದರೆ ಬಳಿಯ ಬೆಳವಾಯಿಯಲ್ಲಿ ರಾಜ್ಯದ ಮೊದಲ 'ಚಿಟ್ಟೆ ಪಾರ್ಕ್' ಅಭಿವೃದ್ಧಿ ಪಡಿಸಿದ್ದಾರೆ. ಚಿಟ್ಟೆಗಳು ಮೊಟ್ಟೆ ಇಡುವುದರಿಂದ ಹಿಡಿದು ಅವುಗಳ ಜೀವನ ಶೈಲಿ ಕುರಿತು ತಿಳಿಸಿಕೊಡಲಿದ್ದಾರೆ.

ಬಿಜೆಪಿ ಸಂಸ್ಥಾಪನಾ ದಿನ: ಜಿಲ್ಲೆಯಲ್ಲಿ ಅರ್ಥಪೂರ್ಣ ಆಚರಣೆ

ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ತಾಲೂಕು ಸೇರಿದಂತೆ ಜಿಲ್ಲಾದ್ಯಂತ ಬಿಜೆಪಿ ಸಂಸ್ಥಾಪನಾ ದಿನವನ್ನು ಬಿಜೆಪಿ ಕಾರ್ಯಕರ್ತರು, ಮುಖಂಡರು ಶೋಭಾಯಾತ್ರೆ ನಡೆಸುವ ಜೊತೆಗೆ ಸಾಧಕರನ್ನು ಸನ್ಮಾನಿಸಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದಲ್ಲಿ ಪೂಜೆ, ಶೋಭಾಯಾತ್ರೆ, ಜನಸಂಘದ ಹಿರಿಯರಿಗೆ ಸನ್ಮಾನ



ಚಾಮರಾಜನಗರ, ಏ.6(ಎಸ್‌ಎಸ್)– ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ನಗರದಲ್ಲಿ ಬುಧವಾರ ಜಿಲ್ಲಾ ಬಿಜೆಪಿ ವತಿಯಿಂದ ದೇವಸ್ಥಾನದಲ್ಲಿ ವಿಶೇಷ ಪೂಜೆ, ಶೋಭಾಯಾತ್ರೆ ಹಾಗೂ ಜನ ಸಂಘದ ಹಿರಿಯ ಕಾರ್ಯಕರ್ತರನ್ನು ಸನ್ಮಾನಿಸುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು.

ನಗರದ ಶ್ರೀಕಾಳಿಕಾಂಬ ದೇವಸ್ಥಾನದಲ್ಲಿ ಬೆಳಗ್ಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಬಿಜೆಪಿ ಸಂಸ್ಥಾಪನಾ ದಿನದ ಆಚರಣೆಗೆ ಚಾಲನೆ ನೀಡಲಾಯಿತು. ನಂತರ ದೇವಸ್ಥಾನದ ಮುಂಭಾಗದಿಂದ ಬಿಜೆಪಿ ಜಿಲ್ಲಾ ಕಚೇರಿವರೆಗೆ ಶೋಭಾಯಾತ್ರೆ ನಡೆಸಲಾಯಿತು. ಈ ವೇಳೆ ಬಿಜೆಪಿ ಕೈ ಬೀಸಿದ ನಾಯಕರುಗಳಿಗೆ ಹಾಗೂ ಬಿಜೆಪಿ ಪಕ್ಷದ ಕಾರ್ಯಕರ್ತರು ಜೈಕಾರ ಕೂಗಿದರು.

ನಂತರ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಅಳವಡಿಸಿದ್ದ ಬೃಹತ್ ಎಲ್‌ಇಡಿ ಪರದೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ಕಾರ್ಯಕ್ರಮದ ನೇರ ಪ್ರಸಾರವನ್ನು ವೀಕ್ಷಿಸಲಾಯಿತು.

ಸನ್ಮಾನ: ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಜನ ಸಂಘದ ಹಿರಿಯ ಕಾರ್ಯಕರ್ತರನ್ನು ಸನ್ಮಾನಿಸಲಾಯಿತು. ನಂಜುಂಡಶೆಟ್ಟಿ ಉರುಫ್ ಪೈಲ್ವಾನ್, ಡಿ.ನರಸಿಂಹಯ್ಯ ಹಾಗೂ ಪಿ.ಶ್ರೀಕಂಠ ಅವರನ್ನು ಸನ್ಮಾನಿಸುವ ಮೂಲಕ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಸುಂದರ್, ಪ್ರಧಾನ ಕಾರ್ಯದರ್ಶಿ ನಾರಾಯಣ ಪ್ರಸಾದ್, ಹಾಸನ ಜಿಲ್ಲಾ ಉಸ್ತುವಾರಿ ಜಿ.ನಿಜಗುಣರಾಜು, ಉಪಾಧ್ಯಕ್ಷ ಪಿ.ವೃಷಬೇಂದ್ರಪ್ಪ, ರೈತ ಮುಖಂಡ ಅಮ್ಮನಪುರ ಮಲ್ಲೇಶ್, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಚೂಡಾ ಅಧ್ಯಕ್ಷ ಶಾಂತಮೂರ್ತಿ, ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಚಾಮುಲ್ ನಿರ್ದೇಶಕ ಮಲೆಯೂರು ರವಿಶಂಕರ್, ಮುಖಂಡರಾದ ಡಾ.ಎ.ಆರ್.ಬಾಬು, ನಟರಾಜು, ಶಿವಕುಮಾರ್, ಚಂದ್ರಶೇಖರ್, ರಾಜೇಶ್, ಶಿವು, ಎನ್.ಮಂಜುನಾಥ್, ಪದ್ಮ, ರಂಗಸ್ವಾಮಿ, ಮಹದೇವ ನಾಯ್ಕ, ವೇಣು ಗೋಪಾಲ್, ಸಿ.ಎಸ್.ಸುರೇಶ್‌ನಾಯಕ, ದಾಕ್ಷಾಯಿಣಿ, ಗೋಪಾಲಕೃಷ್ಣ, ಶಿವಣ್ಣ ಇತರರಿದ್ದರು.

ಹನೂರಿನಲ್ಲಿ ಅದ್ದೂರಿಯಾಗಿ ಬಿಜೆಪಿ ಸಂಸ್ಥಾಪನಾ ದಿನಾಚರಣೆ



ಹನೂರು, ಏ.6(ಸೋಮು)– ಪಟ್ಟಣದಲ್ಲಿ ಬಿಜೆಪಿ ಒಬಿಸಿ ಜಿಲ್ಲಾ ಸಂಯೋಜಕ ಬಿ.ವೆಂಕಟೇಶ್ ನೇತೃತ್ವದಲ್ಲಿ ಹನೂರು ಮತ್ತು ಮಹದೇಶ್ವರ ಬೆಟ್ಟ ಮಂಡಲದಿಂದ ಬಿಜೆಪಿ ಸಂಸ್ಥಾಪನಾ ದಿನ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಅಪಾರ ಸಂಖ್ಯೆಯ ಬಿಜೆಪಿ ಮುಖಂಡರು, ಕಾರ್ಯಕರ್ತರೊಂದಿಗೆ ಬಿ.ವೆಂಕಟೇಶ್ ಪಟ್ಟಣದ ಟಿಎಪಿಎಂಸಿ ಪೆಟ್ರೋಲ್ ಬಂಕ್‌ನಿಂದ ಬಿಜೆಪಿ ಚಿಹ್ನೆಯ ಬಾವುಟಗಳನ್ನು ಹಿಡಿದು ಬಿಜೆಪಿ ಪರ ಘೋಷಣೆಗಳನ್ನು ಕೂಗುತ್ತ ಬೃಹತ್ ಮೆರವಣಿಗೆ ಮೂಲಕ ಖಾಸಗಿ ಬಸ್ ನಿಲ್ದಾಣ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಗೌರಿ ಶಂಕರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಜಮಾವಣೆಗೊಂಡರು.

ಕಲಾ ತಂಡಗಳ ಮೆರುಗು: ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ವೀರಗಾಸೆ ಕುಣಿತ ಸೇರಿದಂತೆ ವಿವಿಧ ಕಲಾ ತಂಡಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಮೆರವಣಿಗೆ ವೇಳೆ ಪಟ್ಟಣದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಬೃಹತ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು.

ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಬಿಜೆಪಿ ಮುಖಂಡರು, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿರುವ ವಿಡಿಯೋ ತುಣುಕುಗಳನ್ನು ಬೃಹತ್ ಪರದೆ ಮೇಲೆ ಸಾದರಪಡಿಸಲಾಯಿತು. ಈ ವೇಳೆ ವಿವಿಧ ಗ್ರಾಮಗಳ 6 ವಿಶೇಷಚೇತನರಿಗೆ ಉಚಿತ ತ್ರಿಚಕ್ರ ವಾಹನಗಳನ್ನು ವಿತರಿಸಲಾಯಿತು. ಬಳಿಕ, ಆಶಾ ಕಾರ್ಯಕರ್ತೆಯರು, ಸೈನಿಕರು, ರೈತರನ್ನು ಸನ್ಮಾನಿಸಲಾಯಿತು.

ಬಿಜೆಪಿ ಒಬಿಸಿ ಜಿಲ್ಲಾ ಸಂಯೋಜಕ ಬಿ.ವೆಂಕಟೇಶ್ ಮಾತನಾಡಿ, ಏ. 6, 1980 ರಂದು ಬಿಜೆಪಿ ಪಕ್ಷ ಅಸ್ತಿತ್ವಕ್ಕೆ ಬಂದು ಅತಿ ಹೆಚ್ಚು ಸದಸ್ಯರನ್ನು ಹೊಂದಿದೆ. ಬಿಜೆಪಿ ಮೂಲಕ ಭಾರತ ವಿಶ್ವಗುರುವಾಗಿದೆ. ಶ್ಯಾಮ್ ಪ್ರಕಾಶ್ ಮುಖರ್ಜಿ, ದೀನ್ ದಯಾಳ್ ಉಪಾಧ್ಯಾಯ, ವಾಜಪೇಯಿ, ಲಾಲ್‌ಕೃಷ್ಣ ಅಡ್ವಾಣಿಯಂತ ಮಹನೀಯರ ತ್ಯಾಗ-ಬಲಿದಾನದ ಮೂಲಕ ಬಿಜೆಪಿ ಇಂದು ಉತ್ತುಂಗ ಸ್ಥಿತಿಗೆ ತಲುಪಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿಯವರು ವಿಶ್ವದ ನಾಯಕರಾಗಿ ಭಾರತವನ್ನು ಇನ್ನೂ ಪ್ರಜ್ವಲಿಸುವಂತೆ ಮಾಡಿದ್ದಾರೆ ಎಂದರು.

ಒಬಿಸಿ ಜಿಲ್ಲಾ ಮೋರ್ಚಾ ಅಧ್ಯಕ್ಷ ನಟರಾಜ ಗೌಡ್ರು ಮಾತನಾಡಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಒಬಿಸಿ, ಎಸ್‌ಸಿ ಮೋರ್ಚಾ, ಎಸ್‌ಟಿ ಮೋರ್ಚಾ ಜಿಲ್ಲಾ ಮತ್ತು ತಾಲೂಕು, ಮಂಡಲದ ಪದಾಧಿಕಾರಿಗಳು, ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ವಿವಿಧ ಗ್ರಾಮಗಳ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಹಿರಿಯ ಮುತ್ಸದ್ಧಿಗಳ ತ್ಯಾಗದ ಫಲದಿಂದ ಬಿಜೆಪಿ ಉತ್ತುಂಗ ಸ್ಥಾನ



ಗುಂಡ್ಲುಪೇಟೆ, ಏ.6(ಸೋಮ್.ಜಿ)– ಹಿರಿಯ ಮುತ್ಸದ್ಧಿ, ರಾಜಕಾರಣಿಗಳ ತ್ಯಾಗದ ಫಲವಾಗಿ ದೇಶದಲ್ಲಿ ಭಾರತೀಯ ಜನತಾ ಪಾರ್ಟಿ ಉತ್ತುಂಗ ಸ್ಥಾನಕ್ಕೇರಿದೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ಪಟ್ಟಣದಲ್ಲಿ ಬಿಜೆಪಿ ಸಂಸ್ಥಾಪನಾ ದಿನ ಕಾರ್ಯಕ್ರಮದ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶೋಭಾಯಾತ್ರೆ ನಡೆಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯು ಉದಯವಾಗಿ 42ವರ್ಷಗಳು ತುಂಬಿದೆ. ಇದರ ಸವಿನೆನಪಿಗಾಗಿ ಸಂಸ್ಥಾಪನಾ ದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೇವಲ ಎರಡು ಸ್ಥಾನಗಳಿಂದ ಪ್ರಾರಂಭವಾದ ಬಿಜೆಪಿ ಇತಿಹಾಸ ಇಂದು ನಾಗಾಲೋಟದಲ್ಲಿ ಮುಂದುವರಿದಿದೆ. ಇದಕ್ಕೆ ಹಿರಿಯ ಮುತ್ಸದ್ಧಿಗಳ ತ್ಯಾಗದ ಫಲವೇ ಕಾರಣವಾಗಿದೆ ಎಂದರು.

ಪಟ್ಟಣದ ಶ್ರೀವಿಜಯನಾರಾಯಣಸ್ವಾಮಿ ದೇವಾಲಯದಿಂದ ಹೊರಟ ಶೋಭಾಯಾತ್ರೆಯು ಪಟ್ಟಣ ಪ್ರಮುಖ ಬೀದಿಗಳಲ್ಲಿ ಸಾಗಿತು. ಈ ವೇಳೆ ಚೂಡಾ ಅಧ್ಯಕ್ಷ ಶಾಂತಮೂರ್ತಿ, ಮಂಡಲಾಧ್ಯಕ್ಷ ಜಗದೀಶ್, ಯುವ ಮೋರ್ಚಾ ಅಧ್ಯಕ್ಷ ಪ್ರಣಯ್, ಪಿಕಾರ್ಡ್ ಬ್ಯಾಂಕಿನ ನಿರ್ದೇಶಕ ಬಸವಣ್ಣ ಮುಖಂಡ ಮಹದೇವಪ್ರಸಾದ್ ಸೇರಿದಂತೆ ಬಿಜೆಪಿ ವಿವಿಧ ಘಟಕಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಹಾಜರಿದ್ದರು.

ಬಿಎಸ್‌ಎಫ್ ಯೋಧನಿಗೆ ಸ್ವಾಗತ



ಚಾಮರಾಜನಗರ, ಏ.6(ಎಸ್‌ಎಸ್)– ಕಳೆದ 22 ವರ್ಷಗಳಿಂದ ಬಿಎಸ್‌ಎಫ್‌ನಲ್ಲಿ ಸೇವೆ ಸಲ್ಲಿಸಿ, ನಿವೃತ್ತಗೊಂಡು ಬುಧವಾರ ನಗರಕ್ಕೆ ಆಗಮಿಸಿದ ಯೋಧ ಸಿ.ಆರ್.ಸಂತೋಷ್ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ನಗರಕ್ಕೆ ಬೆಳಗ್ಗೆ ತಿರುಪತಿ ರೈಲಿನಲ್ಲಿ ಆಗಮಿಸಿದ ಸಂತೋಷ್ ಅವರನ್ನು ರೈಲ್ವೆ ನಿಲ್ದಾಣದಲ್ಲಿ ಹೂವಿನ ಹಾರ ಹಾಕಿ, ಆರತಿ ಬೆಳಗಿ ಬರಮಾಡಿಕೊಳ್ಳಲಾಯಿತು. ನಂತರ ತೆರೆದ ವಾಹನದಲ್ಲಿ ಮಂಗಳವಾದ್ಯ ಸಮೇತ ಮೆರವಣಿಗೆಯಲ್ಲಿ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನಕ್ಕೆ ಕರೆತರಲಾಯಿತು. ನಂತರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಬಣಜಿಗರ ಬೀದಿಯಲ್ಲಿರುವ ಸೀತಾರಾಮ ಮಂದಿರದಲ್ಲಿ ದಾಸ ಬಣಜಿಗರ ಜನಾಂಗದಿಂದ ನಡೆದ ಕಾರ್ಯಕ್ರಮದಲ್ಲಿ ಸಂತೋಷ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಮುಖಂಡರಾದ ಸಿ.ವಿ.ಶ್ರೀನಿವಾಸಶೆಟ್ಟಿ, ಎನ್.ಶ್ರೀನಿವಾಸಶೆಟ್ಟಿ, ನಂದಕುಮಾರ್, ಎ.ಜಯಕೃಷ್ಣ, ರಂಗರಾಮು, ಚಂದ್ರಶೇಖರ್, ಪದ್ಮ ಪುರುಷೋತ್ತಮ್, ಶ್ರೀಧರ್, ಹರ್ಷ ಇತರರು ಇದ್ದರು. ಸಿ.ಆರ್.ಸಂತೋಷ್ ಅವರು ನಗರದ ರಂಗರಾಮು ಹಾಗೂ ಪದ್ಮಿನಿ ಅವರ ಪುತ್ರ.

ಬಸವಣ್ಣ ನಿಧನ



ಚಾಮರಾಜನಗರ, ಏ.6– ತಾಲೂಕಿನ ದೇಮಹಳ್ಳಿ ಗ್ರಾಮದ ನಿವಾಸಿ ಹಾಗೂ ಎಲ್‌ಐಸಿ ಏಜೆಂಟ್ ಡಿ.ಕೆ.ಬಸವಣ್ಣ ಉರುಫ್ ಸೋಮಣ್ಣ (67) ಬುಧವಾರ ಮಧ್ಯಾಹ್ನ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಾರ್ವತಮ್ಮ ನಿಧನ



ಗುಂಡ್ಲುಪೇಟೆ, ಏ.6– ತಾಲೂಕಿನ ಕೊಡಸೋಗೆ ಗ್ರಾಮದ ನಿವಾಸಿ ಪಾರ್ವತಮ್ಮ (86) ಬುಧವಾರ ಸಂಜೆ ನಿಧನರಾದರು.

ಮೃತರು ಬಿಜೆಪಿ ಮುಖಂಡ ಕೆ.ಎಲ್.ಮಹದೇವಸ್ವಾಮಿ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರಕ್ಕೆ ಕಾರು ಡಿಕ್ಕಿ: ಮಹಿಳೆ ಸಾವು, 6 ಮಂದಿಗೆ ಗಾಯ



ಗುಂಡ್ಲುಪೇಟೆ, ಏ.6(ಸೋಮ್.ಜಿ)– ಮರಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಮಹಿಳೆ ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, 6 ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಮೇಲುಕಾಮನಹಳ್ಳಿ ಗೇಟ್ ಸಮೀಪ ಬುಧವಾರ ನಡೆದಿದೆ.

ಹೈದರಾಬಾದ್ ಮೂಲದ ವಿಜಯಲಕ್ಷ್ಮಿ (50) ಮೃತಪಟ್ಟವರು. ಇವರು ಕುಟುಂಬ ಸಮೇತ ಊಟಿಗೆ ಇನ್ನೋವಾ ಕ್ರಿಸ್ಟಾ ಕಾರಿನಲ್ಲಿ ತೆರಳುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ತಾಲೂಕಿನ ಮೇಲುಕಾಮನಹಳ್ಳಿ ಗೇಟ್ ಸಮೀಪ ರಸ್ತೆ ಬದಿಯ ಮರವೊಂದಕ್ಕೆ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಚಾಲಕನ ಹಿಂಬದಿಯ ಸೀಟ್‌ನಲ್ಲಿ ಕುಳಿತಿದ್ದ ವಿಜಯಲಕ್ಷ್ಮೀ ಅವರ ತಲೆಗೆ ಗಂಭೀರ ಗಾಯವಾಗಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಉಳಿದಂತೆ ಕಾರಿನಲ್ಲಿದ್ದ ಇವರ ಪತಿ ವೆಂಕಯ್ಯ, ಸಂಬಂಧಿಕರಾದ ಪದ್ಮಾವತಿ, ರಾಜೇಶ್, ಮಕ್ಕಳಾದ ಸುಶ್ಮಾ, ವೃಂದಾ ಹಾಗೂ ಚಾಲಕ ಸೇರಿ 6ಮಂದಿಗೆ ಗಾಯಗಳಾಗಿದ್ದು, ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತ ದೇಹವನ್ನು ಚಾಮರಾಜನಗರದ ಶೈತ್ಯಾಗಾರಕ್ಕೆ ರವಾನಿಸಲಾಯಿತು. ಘಟನೆ ನಡೆದ ಕೂಡಲೇ ಸ್ಥಳಕ್ಕೆ ಹೈವೇ ಪೆಟ್ರೋಲ್ ವಾಹನದ ಚಾಲಕ ಹೊರೆಯಾಲ ಮಹದೇವಸ್ವಾಮಿ ತೆರಳಿ ಗಾಯಾಳುಗಳನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸುವ ಜೊತೆಗೆ ಮೃತ ವಿಜಯಲಕ್ಷ್ಮೀ ಅವರ ಮೈಮೇಲಿದ್ದ ಲಕ್ಷಾಂತರ ರೂ. ಬೆಲೆ ಬಾಳುವ ಚಿನ್ನಾಭರಣಗಳನ್ನು ವಾರಸುದಾರರಿಗೆ ಒಪ್ಪಿಸಿದರು.

ಡಿಸಿ ಕಚೇರಿ ಮುಂದೆ ಅರೆ ವೈದ್ಯಕೀಯ ಸಿಬ್ಬಂದಿ ಪ್ರತಿಭಟನೆ



ಮಡಿಕೇರಿ, ಏ.6– ಕೋವಿಡ್ ಸಂಕಷ್ಟದ ಕಾಲದಲ್ಲಿ ದುಡಿಸಿಕೊಂಡು ಇದೀಗ ಏಕಾಏಕಿ ಕೆಲಸದಿಂದ ವಜಾಗೊಳಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅರೆ ವೈದ್ಯಕೀಯ ಸಿಬ್ಬಂದಿ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳು ನಗರದ ಗಾಂಧಿ ಮಂಟಪ ಮುಂಭಾಗ ಜಮಾಯಿಸಿ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಕೆಲಸಕ್ಕೆ ಮರು ನೇಮಕಗೊಳಿಸಬೇಕು ಎಂಬ ಘೋಷಣೆಗಳೊಂದಿಗೆ ಜಿಲ್ಲಾಧಿಕಾರಿ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಈ ಸಂದರ್ಭ ಮಾತನಾಡಿದ ಮಾಲ್ದಾರೆ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೌಶಿಕ್, ಕೊರೊನಾ ವ್ಯಾಪಕವಾಗಿ ಹರಡುವ ಸಂದರ್ಭ 2020ರ ಆಗಸ್ಟ್‌ನಲ್ಲಿ ನಮ್ಮನ್ನು ಕರ್ತವ್ಯಕ್ಕೆ ನೇಮಕಗೊಳಿಸಿದರು. ಆ ಸಂದರ್ಭ ಜಿಲ್ಲೆಯ ವಿವಿಧ ತಾಲೂಕುಗಳಿಗೆ 45 ಜನ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಆದರೆ, ಇದೀಗ ಮಾರ್ಚ್ 31ಕ್ಕೆ ಏಕಾಏಕಿ ಕರ್ತವ್ಯದಿಂದ ತೆರವುಗೊಳಿಸಿ ಸರ್ಕಾರ ಅನ್ಯಾಯ ಎಸಗಿದೆ ಎಂದು ಆರೋಪಿಸಿದರು.

ಕೋವಿಡ್ ಸಮಯದಲ್ಲಿ ವಿವಿಧ ವಿಭಾಗದಲ್ಲಿ ಹಗಲು, ರಾತ್ರಿ ಎನ್ನದೆ ಕೆಲಸ ನಿರ್ವಹಿಸಿದ್ದೇವೆ. ಸರ್ಕಾರ ಸೇವಾ ಭದ್ರತೆಯೊಂದಿಗೆ ಕೆಲಸದಲ್ಲಿ ಮುಂದುವರೆಸಬೇಕು ಎಂದು ಆಗ್ರಹಿಸಿದರು. ಕೋವಿಡ್ ಕರ್ತವ್ಯ ನಿರ್ವಹಿಸಿದ್ದ ಮತ್ತೋರ್ವ ಸಿಬ್ಬಂದಿ ಬಿನ್ನಿ ಮಾತನಾಡಿ, ಕೋವಿಡ್ ಸಮಯದಲ್ಲಿ ವೈಯಕ್ತಿಕ ಬದುಕು ಬಿಟ್ಟು ಕರ್ತವ್ಯ ನಿರ್ವಹಿಸಿದ್ದೇವೆ. ಕೋವಿಡ್ ಮುಗಿಯಿತು ಎಂದು ಏಕಾಏಕಿ ಕರ್ತವ್ಯದಿಂದ ತೆರವುಗೊಳಿಸಿದ್ದಾರೆ. ಕೊರೊನಾ ವಾರಿಯರ್ಸ್ ಎಂದು ಹೇಳಿ ಈಗ ಏಕಾಏಕಿ ಈ ರೀತಿ ಮಾಡುವುದು ಸರಿಯಲ್ಲ. ಕರ್ತವ್ಯದಲ್ಲಿ ಮುಂದುವರೆಸಿದರೆ ವೈಯಕ್ತಿಕ ಜೊತೆ ಕುಟುಂಬಕ್ಕೂ ನೆರವಾಗುತ್ತದೆ ಎಂದರು. ಈ ಸಂದರ್ಭ ಪ್ರಮುಖರಾದ ರವಿರಾಜ್, ವಿಶ್ವಾಸ್, ಪೂಜಿತಾ, ಪ್ರಜ್ವಲ್ ಮತ್ತಿತರರು ಹಾಜರಿದ್ದರು.

ಹೆಬ್ಬಾಲೆಯಲ್ಲಿ ರೈತರಿಂದ ಸಂಭ್ರಮದ 'ಹೊನ್ನಾರು ಉತ್ಸವ'



ಕುಶಾಲನಗರ, ಏ.6– ಇಲ್ಲಿಗೆ ಸಮೀಪದ ಹೆಬ್ಬಾಲೆ ಗ್ರಾಮದಲ್ಲಿ ಯುಗಾದಿ ಹಬ್ಬದ ಹೊಸ ಸಂವತ್ಸರದ ಅಂಗವಾಗಿ ರೈತರು ಜನಪದ ಸಂಸ್ಕೃತಿಯ ಪ್ರತೀಕವಾದ ಹೊನ್ನಾರು ಉತ್ಸವ (ಚಿನ್ನದ ಉಳುಮೆ) ವನ್ನು ಸಂಭ್ರಮ, ಸಡಗರದೊಂದಿಗೆ ಆಚರಿಸಿದರು. ರೈತರು ತಮ್ಮ ಎತ್ತು, ಕರುಗಳು, ರಾಸುಗಳನ್ನು ಸಿಂಗರಿಸಿ, ವಿಶೇಷ ಪೂಜೆ ಸಲ್ಲಿಸಿ ಕೃಷಿ ಪರಿಕರಗಳಾದ ನೇಗಿಲು, ನೊಗ, ಎತ್ತಿನಗಾಡಿ ಇತ್ಯಾದಿಗಳಿಗೆ ಪೂಜೆ ಸಲ್ಲಿಸಿದರು. ಹೆಬ್ಬಾಲೆ ಗ್ರಾಮದ ಬಸವೇಶ್ವರ ಯುವಕ ಸಂಘ ಮತ್ತು ಬನಶಂಕರಿ ದೇವಸ್ಥಾನ ಸಮಿತಿ ಆಶ್ರಯದಲ್ಲಿ ನಡೆದ ಉತ್ಸವದಲ್ಲಿ ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿ ಜಾನುವಾರುಗಳಿಗೆ ಸಾಮೂಹಿಕ ಪೂಜೆ ಸಲ್ಲಿಸಲಾಯಿತು.

ನಂತರ ಹೊಸ ಪಂಚಾಂಗದಂತೆ ಗ್ರಾಮದ ರೈತ ಮಹೇಶ್ ಅವರು ನೇಗಿಲು ಮತ್ತು ಭೂಮಿಗೆ ಪೂಜೆ ಸಲ್ಲಿಸಿ 'ಹೊನ್ನಾರು' (ಚಿನ್ನದ ಉಳುಮೆ) ಹೂಡಿ ವರ್ಷಧಾರೆ ಉಳುಮೆಗೆ ಚಾಲನೆ ನೀಡಿದರು. ಬಸವೇಶ್ವರ ದೇವಸ್ಥಾನದಿಂದ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಹೊರಟ ಹೊನ್ನಾರುಗಳು ಗ್ರಾಮದ ಬನಶಂಕರಿ ದೇವಿಗೆ ಪ್ರದಕ್ಷಿಣೆ ಹಾಕಿ ಉಳುಮೆ ಆರಂಭಿಸಿದರು.

ನಂತರ ರೈತರು ತಮ್ಮ ತಮ್ಮ ಜಮೀನಿಗೆ ತೆರಳಿ ಉಳುಮೆ ಆರಂಭಿಸಿದರು. ದೇವಸ್ಥಾನ ಸಮಿತಿ ಅಧ್ಯಕ್ಷ ಎಚ್.ಎನ್.ಬಸವರಾಜ್, ಕಾರ್ಯದರ್ಶಿ ಎಚ್.ಪಿ.ರಾಜಪ್ಪ,ಗ್ರಾಮದ ಮುಖಂಡರಾದ ರಮೇಶ್,ಗಣೇಶ್, ಜಗದೀಶ್, ಗ್ರಾ.ಪಂ.ಸದಸ್ಯ ತನುಕುಮಾರ್ ಇದ್ದರು.

ಮರದಿಂದ ಬಿದ್ದು ಕೃಷಿಕ ಸಾವು



ಸೋಮವಾರಪೇಟೆ, ಏ.6– ಕಾಫಿ ತೋಟದಲ್ಲಿ ಮರದ ಕೊಂಬೆಗಳನ್ನು ಕಟಾವು ಮಾಡುತ್ತಿದ್ದ ಸಂದರ್ಭ ಆಕಸ್ಮಿಕವಾಗಿ ಕೆಳಗೆ ಬಿದ್ದು ಕೃಷಿಕರೋರ್ವರು ದುರ್ಮರಣಕ್ಕೀಡಾಗಿರುವ ಘಟನೆ ಸಮೀಪದ ಶಾಂತಳ್ಳಿ ಗ್ರಾಮದಲ್ಲಿ ನಡೆದಿದೆ.

ಶಾಂತಳ್ಳಿ ಶ್ರೀ ಕುಮಾರಲಿಂಗೇಶ್ವರ ದೇವಾಲಯ ಸಮಿತಿಯ ಮಾಜಿ ಅಧ್ಯಕ್ಷ, ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದ ಕೃಷಿಕ ಜಿ.ಎಸ್. ರಘುಕುಮಾರ್ (51) ಎಂಬುವರೇ ಸಾವನ್ನಪ್ಪಿದವರಾಗಿದ್ದು, ಪತ್ನಿ ಸವಿತಾ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಮಂಗಳವಾರ ಸಂಜೆ ತಮ್ಮ ಮನೆ ಸಮೀಪವಿರುವ ತಮ್ಮದೇ ತೋಟದಲ್ಲಿ ಮರಗಳ ಕೊಂಬೆಗಳನ್ನು ಕಟಾವು ಮಾಡುತ್ತಿದ್ದ ಸಂದರ್ಭ ಆಯತಪ್ಪಿ ಕೆಳಬಿದ್ದು ಗಂಭೀರವಾಗಿ ಗಾಯಗೊಂಡ ರಘುಕುಮಾರ್ ಅವರನ್ನು ಸ್ಥಳೀಯರು ಸೋಮವಾರಪೇಟೆ ಸರಕಾರಿ ಆಸ್ಪತ್ರೆಗೆ ಸಾಗಿಸಿ ಪ್ರಾಥಮಿಕ ಚಿಕಿತ್ಸೆಯ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲು ಮಾಡಿದ್ದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಬುಧವಾರದಂದು ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಚಿಪ್ಪುಹಂದಿಯ ಚಿಪ್ಪು ಮಾರುತ್ತಿದ್ದ ಇಬ್ಬರ ಬಂಧನ



ಮಡಿಕೇರಿ, ಏ.6– ಅತ್ತೂರು ಗ್ರಾಮದಲ್ಲಿ ಚಿಪ್ಪುಹಂದಿಯ ಚಿಪ್ಪುಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ವಿರಾಜಪೇಟೆಯ ಚೆನ್ನಂಗಿ ಗ್ರಾಮದ ರಾಜು ಹಾಗೂ ಸೋಮವಾರಪೇಟೆ ತಾಲೂಕಿನ ಕಟ್ಟೆಪುರ ಗ್ರಾಮದ ಧರ್ಮ ಅಲಿಯಾಸ್ ಮರಿ ಎಂಬುವರೇ ಬಂಧಿತ ಆರೋಪಿಗಳಾಗಿದ್ದಾರೆ. ಅತ್ತೂರು ಗ್ರಾಮದ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಮುಂಭಾಗ ಪೆಂಗೋಲಿನ್(ಚಿಪ್ಪುಹಂದಿಯ ಚಿಪ್ಪು) ಚಿಪ್ಪುಗಳನ್ನು ಇಬ್ಬರು ವ್ಯಕ್ತಿಗಳು ಮಾರಾಟ ಮಾಡಲು ಯತ್ನಿಸುತ್ತಿದ್ದರು. ಈ ಮಾಹಿತಿ ಆಧರಿಸಿ ವಿರಾಜಪೇಟೆ ತಾಲೂಕು ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ.

ಬಂಧಿತ ಆರೋಪಿಗಳನ್ನು ಪೊನ್ನಂಪೇಟೆ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, 15 ದಿನಗಳ ನ್ಯಾಯಾಂಗ ಬಂಧನಕ್ಕೆ ಆದೇಶಿಸಲಾಗಿದೆ.

ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪ್ರಭಾರ ಅರಕ್ಷಕ ಉಪ ನಿರೀಕ್ಷಕ ಸಿ.ಯು.ಸವಿ, ಸಿಬ್ಬಂದಿಗಳಾದ ಟಿ.ಪಿ. ಮಂಜುನಾಥ್, ಕೆ.ಎಸ್. ದೇವಯ್ಯ, ಸಿ.ಬಿ.ಬೀನ, ಎಸ್.ಎಂ ಯೋಗೇಶ್ ಪಿ.ಯು. ಮುನೀರ್, ಆರ್.ನಂದ ಕುಮಾರ್, ಮೋಹನ್ ಕಾರ್ಯಾಚರಣೆ ನಡೆಸಿದರು.

ಎರಡು ತಲೆ ಹಾವು ಮಾರುತ್ತಿದ್ದ ಇಬ್ಬರ ಬಂಧನ





ಮಡಿಕೇರಿ, ಏ.6– ಅಳಿವಿನಂಚಿನಲ್ಲಿರುವ ಎರಡು ತಲೆ(ರೆಡ್ ಸ್ಯಾಂಡ್ ಬೋವ) ಹಾವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ವಿರಾಜಪೇಟೆ ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬಂಧಿಸಿದ್ದಾರೆ.

ವಿರಾಜಪೇಟೆ ತಾಲೂಕಿನ ಪೆರಂಬಾಡಿ ಬಳಿ ಕರ್ನಾಟಕ–ಕೇರಳ ರಾಜ್ಯ ಹೆದ್ದಾರಿಯಲ್ಲಿ ದಾಳಿ ನಡೆಸಿದ ಸಿಬ್ಬಂದಿಗಳು ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನ ಹಾಗೂ ಎರಡು ತಲೆಯ ಹಾವು ಸೇರಿದಂತೆ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಹಾಸನದ ಅರಸೀಕೆರೆ ನಿವಾಸಿ ಪುನೀತ್ ಕುಮಾರ್(24) ಹಾಗೂ ಬೇಲೂರು ಹಾಸನ ನಿವಾಸಿ ಚಂದನ್ ಕುಮಾರ್ ಅಲಿಯಾಸ್ ದರ್ಶನ್ (20) ಬಂಧಿತ ಆರೋಪಿಗಳಾಗಿದ್ದಾರೆ. ಬಂಧಿತರನ್ನು ಪೊನ್ನಂಪೇಟೆ ನ್ಯಾಯಾಲಯಕ್ಕೆ ಹಾಜರುಪಡಿಸಿ 15 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಿಐಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್‌ಚಂದ್ರ ನಿರ್ದೇಶನದ ಮೇರೆಗೆ, ಪ್ರಭಾರ ಪೊಲೀಸ್ ಅಧೀಕ್ಷಕ ಎನ್.ಟಿ. ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪ್ರಭಾರ ಆರಕ್ಷಕ ಉಪನಿರೀಕ್ಷಕಿ ಸಿ.ಯು.ಸವಿ, ಸಿಬ್ಬಂದಿಗಳಾದ ಟಿ.ಪಿ.ಮಂಜುನಾಥ್, ಕೆ.ಎಸ್.ದೇವಯ್ಯ, ಸಿ.ಬಿ.ಬೀನ, ಎಸ್.ಎಂ.ಯೋಗೇಶ್ ಪಿ.ಯು.ಮುನೀರ್ ಆರ್.ನಂದಕುಮಾರ್ ಹಾಗೂ ಮೋಹನ್ ಕಾರ್ಯಾಚರಣೆ ನಡೆಸಿದ್ದಾರೆ.

ಮದ್ಯದ ನಶೆಯಲ್ಲಿ ನಡುರಸ್ತೆಯಲ್ಲೇ ಲಾರಿ ನಿಲ್ಲಿಸಿ ನಿದ್ದೆಗೆ ಜಾರಿದ ಚಾಲಕ!

ಮಡಿಕೇರಿ, ಏ.6– ಕಂಠಪೂರ್ತಿ ಮದ್ಯ ಸೇವಿಸಿ ನಶೆಯ ಗುಂಗಿನಲ್ಲಿದ್ದ ಲಾರಿ ಚಾಲಕನೊಬ್ಬ ನಡುರಸ್ತೆಯಲ್ಲೇ ಲಾರಿ ನಿಲ್ಲಿಸಿ ನಿದ್ದೆಗೆ ಜಾರಿದ ಘಟನೆ ಮಡಿಕೇರಿ–ಕುಶಾಲನಗರ ಹೆದ್ದಾರಿಯ ಸುದರ್ಶನ ವೃತ್ತದ ಬಳಿ ನಡೆದಿದೆ.



ಮಂಗಳೂರಿನಿಂದ ಕುಶಾಲನಗರಕ್ಕೆ ಟೈಲ್ಸ್ ಸಾಗಿಸುತ್ತಿದ್ದ ಲಾರಿಯ ಚಾಲಕ ಮಧ್ಯಾಹ್ನದ ವೇಳೆಗೆ ಮದ್ಯ ಸೇವಿಸಿದ್ದಾನೆ. ಫುಲ್ ಟೈಟ್ ಆಗಿದ್ದರಿಂದ ಲಾರಿ ಚಲಾಯಿಸಲಾಗದೆ ಹೆದ್ದಾರಿ ಮಧ್ಯದಲ್ಲಿಯೇ ಲಾರಿಯನ್ನು ನಿಲ್ಲಿಸಿ ನಿದ್ದೆ ಮಾಡಲಾರಂಭಿಸಿದ್ದಾನೆ. ನಡುರಸ್ತೆಯಲ್ಲಿ ನಿಂತ ಲಾರಿಯನ್ನು ಕಂಡ ಇತರ ವಾಹನ ಸವಾರರು ಹತ್ತಿರ ಹೋಗಿ ನೋಡಿದಾಗ ಚಾಲಕ ನಶೆಯಲ್ಲಿ ನಿದ್ದೆಗೆ ಜಾರಿರುವ ವಿಷಯ ಗೊತ್ತಾಗಿದೆ. ಚಾಲಕನೊಂದಿಗೆ ಕ್ಲೀನರ್ ಕೂಡ ಮದ್ಯದ ಮತ್ತಿನಲ್ಲಿದ್ದು, ಆತ ಕೂಡ ಲಾರಿ ಚಲಾಯಿಸಲು ಪರದಾಡುತ್ತಿದ್ದ.

ಬಳಿಕ ಸಾರ್ವಜನಿಕರು ಲಾರಿಯನ್ನು ರಸ್ತೆ ಬದಿಗೆ ತಂದು ನಿಲ್ಲಿಸಿದ್ದಾರೆ. ವಿಷಯ ತಿಳಿದ ಪೊಲೀಸ್ ತುರ್ತು ಸೇವೆ ನೀಡುವ ಹೈವೇ ಪೆಟ್ರೋಲ್ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಬಳಿಕ ನಗರ ಸಂಚಾರ ಪೊಲೀಸ್ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ, ಮದ್ಯ ಸೇವಿಸಿದ ಲಾರಿ ಚಾಲಕನಿಗೆ ದಂಡದ ಬಿಸಿ ಮುಟ್ಟಿಸುವ ಮೂಲಕ ಚಾಲಕನ ನಶೆ ಇಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಏ.6– ಕುಶಾಲನಗರ 220/11 ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರಹೋಗುವ ಭುವನಗಿರಿ ಫೀಡರ್‌ನಲ್ಲಿ ತುರ್ತು ಕಾಮಗಾರಿಯನ್ನು ನಿರ್ವಹಿಸಬೇಕಿರುವುದರಿಂದ ಏ.7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಆದ್ದರಿಂದ, ಭುವನಗಿರಿ, ಯಡವನಾಡು, ಹುದುಗೂರು, ಸೀಗೆಹೊಸೂರು ಸುತ್ತಮುತ್ತ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಹಾಗೆಯೇ ವಿರಾಜಪೇಟೆ 66/11 ಕೆವಿ ವಿದ್ಯುತ್ ಉಪ-ಕೇಂದ್ರದಿಂದ ಹೊರ ಹೋಗುವ ಅಮ್ಮತ್ತಿ ಫೀಡರ್‌ನಲ್ಲಿ ತುರ್ತು ಕಾಮಗಾರಿಯನ್ನು ನಿರ್ವಹಿಸಬೇಕಿರುವುದರಿಂದ ಏಪ್ರಿಲ್, 7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಆದ್ದರಿಂದ ಅಮ್ಮತ್ತಿ, ಕಾವಾಡಿ, ವಿನಾಯಕನಗರ, ಕೊಮ್ಮೆತ್ತೋಡು, ಬಳುಗುಂದ, ನಲ್ವತ್ತೋಕ್ಲು ಸುತ್ತಮುತ್ತ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಪ್ರಕಟಣೆ ತಿಳಿಸಿದೆ.

ನಾಳೆ ಅರಣ್ಯ ಸಚಿವರ ಕೊಡಗು ಜಿಲ್ಲಾ ಪ್ರವಾಸ



ಮಡಿಕೇರಿ, ಏ.6– ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರಾದ ಉಮೇಶ ವಿ. ಕತ್ತಿ ಅವರು ಏ.8 ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಸಚಿವರು ಏ.8 ರಂದು ಬೆಳಗ್ಗೆ 8 ಗಂಟೆಗೆ ಮಾನವ ವನ್ಯಜೀವಿ ಸಂಘರ್ಷದ ಪ್ರದೇಶಗಳಿಗೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ಮಾಡಲಿದ್ದಾರೆ. ನಂತರ ಮಧ್ಯಾಹ್ನ 2 ಗಂಟೆಗೆ ಮಾನವ ವನ್ಯಜೀವಿ ಸಂಘರ್ಷದ ಕುರಿತು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಬಳಿಕ ಸಂಜೆ 4.30 ಗಂಟೆಗೆ ನಗರದ ಕ್ರಿಸ್ಟಲ್ ಕೋರ್ಟ್‌ನಲ್ಲಿ ನಡೆಯುವ 8ನೇ ಆವೃತ್ತಿ ಕರ್ನಾಟಕ ಹಕ್ಕಿ ಹಬ್ಬ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿ ಸುರೇಶ ಕೆ.ಅಳಗುಂಡಿ ಅವರು ತಿಳಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ 7 ಏಪ್ರಿಲ್ 2022

ಇಂದು ಮೈಸೂರು ಇನ್‌ಫೋಸಿಸ್‌ಗೆ ಸಚಿವ ಉಮೇಶ ಕತ್ತಿ ಭೇಟಿ



ಮೈಸೂರು, ಏ.6– ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಉಮೇಶ ವಿ.ಕತ್ತಿ ಏ.7 (ಗುರುವಾರ) ಮೈಸೂರಿಗೆ ಆಗಮಿಸಲಿದ್ದು, ಅಂದು ಸಂಜೆ 4 ಗಂಟೆಗೆ ಮೈಸೂರು ಇನ್‌ಫೋಸಿಸ್ ಸಂಸ್ಥೆಗೆ ಭೇಟಿ ನೀಡಲಿದ್ದಾರೆ.

ಮೂರನೇ ಪುಟದಿಂದ

ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ

ಕಾರ್ಯನಿರ್ವಹಿಸುತ್ತಿರುವ ಶಾಸ್ತ್ರೀಯ ಕನ್ನಡ ಅಧ್ಯಯನದ ಉತ್ಕೃಷ್ಟತಾ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡುವ ಬಗ್ಗೆ ಈ ಸಂದರ್ಭದಲ್ಲಿ ಪ್ರಸ್ತಾಪಿಸಲಾಯಿತು. ಸ್ವಾಯತ್ತತೆ ನೀಡಿದರೆ ಮಾತ್ರ ಅದು ರಚನಾತ್ಮಕ ಕಾರ್ಯಚಟುವಟಿಕೆ ಹಮ್ಮಿಕೊಳ್ಳಲು ಸಾಧ್ಯ ಎಂಬ ಸಂಗತಿಯನ್ನು ಕೇಂದ್ರ ಸಚಿವರಿಗೆ ಮನದಟ್ಟು ಮಾಡಿಕೊಡಲಾಯಿತು. ಕೇಂದ್ರ ಸಚಿವರು ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿ ಸ್ವಾಯತ್ತತೆ ನೀಡುವ ಬಗ್ಗೆ ಸಂಬಂಧ ಪಟ್ಟವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು ಎಂದಿದ್ದಾರೆ.

ಇದೇ ಸಂದರ್ಭದಲ್ಲಿ ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದ ಚಟುವಟಿಕೆಗಳಿಗೆ ಹೆಚ್ಚಿನ ಹಣಕಾಸು ನೆರವು ನೀಡುವಂತೆ ಮನವಿ ಸಲ್ಲಿಸಲಾಯಿತು. ಶಾಸ್ತ್ರೀಯ ಭಾಷೆಗೆ ಸಂಬಂಧಪಟ್ಟಹಾಗೆ ದೊಡ್ಡಮಟ್ಟದಲ್ಲಿ ಕಾರ್ಯಚಟುವಟಿಕೆಗಳನ್ನು ರೂಪಿಸಲು ಅಗತ್ಯ ಅನುದಾನವನ್ನು ಒದಗಿಸುವ ಕುರಿತು ಚರ್ಚಿಸಲಾಯಿತು. ಇದಕ್ಕೂ ಸಹ ಸ್ಪಂದಿಸಿದ ಕೇಂದ್ರ ಸಚಿವರು ಅನುದಾನ ಹೆಚ್ಚಳ ಮಾಡುವ ಬಗ್ಗೆ ಸಂಬಂಧಪಟ್ಟವರೊಂದಿಗೆ, ಚರ್ಚಿಸುವುದಾಗಿ ತಿಳಿಸಿದರು. ಬಹಳ ಮುಖ್ಯವಾಗಿ ಸ್ವತಃ ಧರ್ಮೇಂದ್ರ ಪ್ರಧಾನ್ ಶೀಘ್ರದಲ್ಲಿಯೇ ಮೈಸೂರಿನಲ್ಲಿರುವ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥಾನ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನು ಪರಿಶೀಲಿಸುವುದಾಗಿ ತಿಳಿಸಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಸಂಘಟನೆ ಮುಖ್ಯಸ್ಥ ಜವಾಹಿರಿ

ಅದರಲ್ಲಿ ಉಗ್ರ ಜವಾಹಿರಿ, ಮಂಡ್ಯದ ಮುಸ್ಲಿಂ ಬಾಲಕಿ ಮುಸ್ಕಾನ್‌ಳನ್ನು ಹಾಡಿ ಹೊಗಳುವುದರ ಜೊತೆಗೆ ಕವಿತೆಯೊಂದನ್ನು ವಾಚಿಸಿದ್ದಾನೆ. 'ದಿ ನೋಬಲ್ ವುಮೆನ್ ಆಫ್ ಇಂಡಿಯಾ' ಶೀರ್ಷಿಕೆಯಡಿ ಬಿಡುಗಡೆಯಾಗಿರುವ ವಿಡಿಯೋದಲ್ಲಿ ಉಗ್ರ ಜವಾಹಿರಿ ಅರೇಬಿಕ್ ಭಾಷೆಯಲ್ಲಿ ಮಾತನಾಡಿ, ಕಾವ್ಯ ವಾಚನ ಮಾಡಿದ್ದಾನೆ. ಮುಸ್ಕಾನ್ ಖಾನ್ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೋ ನೋಡಿ ಅರಿತಿದ್ದೇನೆ ಎಂದಿರುವ ಆತ, ಮುಸ್ಕಾನ್, ಮುಜಾಹಿದ್‌ನ ಸಹೋದರಿ. ಆಕೆ ಇಸ್ಲಾಂನ ಗೌರವ, ಮುಸ್ಲಿಮರ ಹೆಮ್ಮೆ. ಸುತ್ತಲೂ ತೆಗಳುವವರು ಇದ್ದರೂ ಹಿಜಾಬ್ ಪರ ಧೈರ್ಯದಿಂದ ಘೋಷಣೆ ಕೂಗಿದ್ದಾಳೆ. ಈ ಮೂಲಕ ಹಿಜಾಬ್ ನನ್ನ ನಂಬಿಕೆ ಎಂದು ಸಾರಿದ್ದಾಳೆ. ನಂಬಿಕೆಗೆ ಸ್ಫೂರ್ತಿಯಾಗಿರುವ ಮುಸ್ಕಾನ್ ನಾಸ್ತಿಕರಿಗೆ ಸವಾಲಿನ ಗಂಟೆ. ಬಹು ದೇವತೋ ವಾದದ ವಿರುದ್ಧ ಏಕ ದೇವತೆ ಕರೆ ನೀಡಿದವಳು ಮುಸ್ಕಾನ್ ಎಂದಿರುವ ಆತ, 'ಸಹೋದರಿ, ನಾವು ಸುಮ್ಮನೆ ಕೂರುವುದಿಲ್ಲ, ದೃಢವಾಗಿರು. ವಿಜಯ ಹತ್ತಿರದಲ್ಲಿದೆ ಎಂದಿರುವುದಲ್ಲದೇ ವಿಜಯಶಾಲಿಗಳಾಗಲು 'ಅಲ್ಲಾಹು ಅಕ್ಬರ್' ಎಂದು ಕೂಗಿ ಎಂದಿದ್ದಾನೆ. ನಾನು ಕವಿಯಲ್ಲ. ಆದರೂ ಮುಸ್ಕಾನ್‌ಳ ಧೈರ್ಯವನ್ನು ನೋಡಿ ಕವಿತೆ ಬರೆದಿದ್ದೇನೆ ಎಂದು ಆಕೆಯ ಕುರಿತ ಕಾವ್ಯ ವಾಚನ ಮಾಡಿದ್ದಾನೆ. ಅಲ್ಲದೇ ಭಾರತೀಯ ಮುಸ್ಲಿಮರನ್ನೂ ಕೂಡ ಪ್ರಚೋದಿಸಲು ಪ್ರಯತ್ನಿಸಿರುವ ಆತ, ಭಾರತದಲ್ಲಿರುವ ಮುಸ್ಲಿಮರು ತಮ್ಮ ಮೇಲಿನ ದಬ್ಬಾಳಿಕೆಗೆ ಪ್ರತಿಕ್ರಿಯಿಸಬೇಕಾಗಿದೆ ಎಂದಿದ್ದಾನೆ.

ನಮ್ಮನ್ನು ಬಿಟ್ಟುಬಿಡಿ...

ಬೇರೆ ದೇಶದವರು ಹೇಳುವ ಮಾತುಗಳಿಗೆ ನಾವು ತಲೆ ಕೊಡಲು ಆಗುತ್ತದೆಯೇ? ಎಂದು ಪ್ರಶ್ನಿಸಿದರು. ನನ್ನ ಮಗಳು ಅಂದು 'ಅಲ್ಲಾಹು ಅಕ್ಬರ್' ಘೋಷಣೆ ಕೂಗಿದ ಮೇಲೆ ಹಲ ವಾರು ಮುಖಂಡರು ನಮ್ಮ ಮನೆಗೆ ಬಂದರು. ನಮಗೆ ಹಣ ಅಥವಾ ಉಡುಗೊರೆ ಬೇಡ ಎಂದು ಮನವಿ ಮಾಡಿದ್ದೆ. ನಮಗೆ ದೇವರು ಕಷ್ಟ ಕೊಟ್ಟಿಲ್ಲ.

ನೆಮ್ಮದಿಯಾಗಿ ಜೀವನ ನಡೆಸುವಷ್ಟು ಹಣ ಕೊಟ್ಟಿದ್ದಾನೆ ಎಂದು ಮನವರಿಕೆ ಮಾಡಿದ್ದೇನೆ. ಆದರೆ ನಮ್ಮ ಧರ್ಮದಲ್ಲಿ ಹಣ ಕೊಡುವುದನ್ನು ಅದಿಯಾ ಎಂದು ಹೇಳುತ್ತಾರೆ. ಬಂದ ಮುಖಂಡರು ಅದಿಯಾ ಕೊಡುತ್ತಿದ್ದೇವೆ, ಬೇಡ ಎನ್ನಬಾರದು ಎಂದು ಹೇಳಿದಾಗ, ಅದನ್ನು ತೆಗೆದುಕೊಂಡಿದ್ದೇವೆ. ಮಗಳಿಗೆ ಬಂದಿರುವ ಹಣದಲ್ಲಿ ರಂಜಾನ್ ಮುಗಿದ ಬಳಿಕ ಆಸ್ಪತ್ರೆಗೆ ಆಂಬುಲೆನ್ಸ್ ಕೊಡಿಸುತ್ತೇನೆ ಎಂದು ಅವರು ಹೇಳಿದರು.

ನನ್ನ ಮಗಳಿಗೆ ಜೀವ ಭಯ ಇದೆ. ಪರೀಕ್ಷೆ ಬರೆಯಲು ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡುವಂತೆ ಪಿಇಎಸ್ ಕಾಲೇಜಿನ ಆಡಳಿತ ಮಂಡಳಿಗೆ ಮನವಿ ಮಾಡಿದ್ದೆ. ಅಲ್ಲದೇ ಸಮವಸ್ತ್ರವೂ ಪಿಯು ಕಾಲೇಜಿಗೆ ಮಾತ್ರ ಇದೆ. ಡಿಗ್ರಿ ಕಾಲೇಜಿಗೆ ಇಲ್ಲ. ಹೀಗಾಗಿ ಹಿಜಾಬ್‌ಗೆ ಅವಕಾಶ ಕೊಡಿ ಎಂದು ಕೇಳಿದ್ದೆ. ಆದರೆ ಅವರು ಅದಕ್ಕೆ ಅವಕಾಶ ಕೊಡಲಿಲ್ಲ. ನನ್ನ ಮಗಳು ಪರೀಕ್ಷೆ ಬರೆದಿಲ್ಲ. ಒಂದು ವರ್ಷ ವ್ಯರ್ಥವಾದರೂ ಪರವಾಗಿಲ್ಲ. ಹಿಜಾಬ್‌ಗೆ ಅನುಮತಿ ನೀಡುವ ಕಾಲೇಜಿಗೆ ಮಗಳನ್ನು ಸೇರಿಸುತ್ತೇನೆ ಎಂದು ತಿಳಿಸಿದರು.

ಸುಪ್ರೀಂಕೋರ್ಟ್ ಮೊರೆ ಹೋದ ಯಡಿಯೂರಪ್ಪ

ಎಂಬುವವರು ಸಲ್ಲಿಸಿದ್ದ ಖಾಸಗಿ ದೂರನ್ನು ವಿಚಾರಣೆಗೆ ಸ್ವೀಕರಿಸಿರುವ ವಿಶೇಷ ನ್ಯಾಯಾಲಯ, ದೂರುದಾರರ ಪ್ರಮಾಣೀಕೃತ ಹೇಳಿಕೆ ದಾಖಲಿಸಿ ವಿಚಾರಣಾ ಪ್ರಕ್ರಿಯೆ ಕೈಗೆತ್ತಿಕೊಂಡಿತ್ತು. ಐ.ಟಿ. ಕಾರಿಡಾರ್ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯ ಪೈಕಿ 15 ಎಕರೆ 30 ಗುಂಟೆ ಜಮೀನನ್ನು ಅಕ್ರಮವಾಗಿ ಡಿನೋಟಿಫೈ ಮಾಡಿದ ಆರೋಪ ಮಾಜಿ ಸಿಎಂ ಬಿಎಸ್‌ವೈ ಮೇಲಿದೆ. ಈ ಪ್ರಕರಣದಲ್ಲಿ ಮೂಲ ದೂರುದಾರರಾದ ವಾಸುದೇವ ರೆಡ್ಡಿ, ಮಾಜಿ ಸಚಿವ ಆರ್.ವಿ. ದೇಶಪಾಂಡೆ, ಯಡಿಯೂರಪ್ಪ ಸೇರಿದಂತೆ ಹತ್ತು ಮಂದಿಯ ವಿರುದ್ಧ ಖಾಸಗಿ ದೂರು ಸಲ್ಲಿಸಿದ್ದರು.

2015ರಲ್ಲಿ ಹೈಕೋರ್ಟ್ ದೇಶಪಾಂಡೆ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಿತ್ತು. ಉಳಿದ 8 ಜನರ ವಿರುದ್ಧದ ದೂರನ್ನು ವಿಚಾರಣಾ ನ್ಯಾಯಾಲಯ ರದ್ದುಗೊಳಿಸಿತ್ತು. ಆದರೆ 2ನೇ ಆರೋಪಿಯಾಗಿರುವ ಯಡಿಯೂರಪ್ಪ ವಿರುದ್ಧದ ಪ್ರಕರಣ ಹಾಗೆಯೇ ಇದೆ. ವಿಶೇಷ ನ್ಯಾಯಾಲಯ ಲೋಕಾಯುಕ್ತ ಪೊಲೀಸರಿಗೆ ದೂರಿನಲ್ಲಿರುವ ಆರೋಪಗಳ ಕುರಿತು ತನಿಖೆ ನಡೆಸುವಂತೆ ಆದೇಶಿಸಿತ್ತು. ತನಿಖೆ ನಡೆಸಿದ್ದ ಪೊಲೀಸರು ಎರಡು ಬಾರಿ ಯಡಿಯೂರಪ್ಪ ವಿರುದ್ಧದ ಆರೋಪಗಳಲ್ಲಿ ಹುರುಳಿಲ್ಲ ಎಂದು 'ಬಿ' ವರದಿ ಸಲ್ಲಿಸಿದ್ದರು. ಎರಡೂ ವರದಿಗಳನ್ನು ನ್ಯಾಯಾಲಯ ತಿರಸ್ಕರಿಸಿತ್ತು. 2021ರ ನ.27ರಂದು 2ನೇ 'ಬಿ' ವರದಿಯನ್ನು ತಿರಸ್ಕರಿಸಿದ್ದ ನ್ಯಾಯಾಲಯ ವಿಚಾರಣೆ ಆರಂಭಿಸುವುದಾಗಿ ಆದೇಶಿಸಿತ್ತು.

ತುರ್ತು ಪರಿಸ್ಥಿತಿ ಹಿಂಪಡೆದ ಶ್ರೀಲಂಕಾ

ಅಧ್ಯಕ್ಷರಿಗೆ ಲಭ್ಯವಾಗಿದ್ದವು. ಆದರೆ ಅಧ್ಯಕ್ಷರ ಪದತ್ಯಾಗಕ್ಕೆ ಹಲವು ಮಂದಿ ಸಂಸದರಿಂದ ಆಗ್ರಹಗಳು ಕೇಳಿ ಬಂದಿದ್ದವು. ಆಡಳಿತಾರೂಢ ಮೈತ್ರಿಕೂಟದ ಹನ್ನೊಂದು ಪಕ್ಷಗಳು ಮಂಗಳವಾರ ಸಂಸತ್ತಿನಲ್ಲಿ ಹೇಳಿಕೆ ನೀಡಿ, ತಾವು ಸ್ವತಂತ್ರ ಸಂಸದರಾಗಿ ಕಾರ್ಯ ನಿರ್ವಹಿಸುವುದಾಗಿ ಪ್ರಕಟಿಸಿದ್ದರು. ಜತೆಗೆ ರಾಜಪಕ್ಸ ಪಕ್ಷದ ಕೆಲ ಸಂಸದರು ಕೂಡಾ ಸರ್ಕಾರದಿಂದ ಅಂತರ ಕಾಯ್ದುಕೊಳ್ಳುವುದಾಗಿ ಹೇಳಿದ್ದರು. ಇದರಿಂದಾಗಿ 225 ಸ್ಥಾನಗಳ ಸಂಸತ್ತಿನಲ್ಲಿ ಸರ್ಕಾರಕ್ಕೆ ಇರುವ ಸರಳ ಬಹುಮತದ ಬಗ್ಗೆ ಸಂದೇಹ ಮೂಡಿತ್ತು.

ಹಣಕಾಸು ಸಚಿವ ಸೇರಿದಂತೆ ಹಲವು ಮಂದಿ ಸಂಪುಟ ಸಹೋದ್ಯೋಗಿಗಳು ಸಾಮೂಹಿಕವಾಗಿ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಐಎಂಎಫ್ ನೆರವು ಪಡೆಯುವ ಸಂಬಂಧ ಸಾಲ ಮರು ಹೊಂದಾಣಿಕೆ ಮಾತುಕತೆಗೆ ತಡೆ ಉಂಟಾಗಿದೆ.

ಹೈಕೋರ್ಟ್ ಮಾರ್ಗಸೂಚಿ

ಜನರಲ್‌ಗೆ ಸೂಚಿಸಿದೆಯಲ್ಲದೆ, ದೂರು ದಾಖಲಾದ ದಿನದಿಂದ ಮೂರು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸುವಂತೆ ಪೊಲೀಸರಿಗೆ ಆದೇಶಿಸಿದೆ.

"ತುಮಕೂರು ನ್ಯಾಯಾಲಯ ಹಾಗೂ ಮೈಸೂರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ಅರ್ಜಿದಾರರು ಆಯಾ ವಕೀಲರಿಗೆ ಯಾವುದೇ ಸೂಚನೆ ನೀಡಿಲ್ಲ ಎಂದು ಅರ್ಜಿದಾರರ ಪರ ವಕೀಲರು ಹೈಕೋರ್ಟ್‌ನಲ್ಲಿ ಪ್ರತಿಪಾದಿಸಿದ್ದರಿಂದ ತನಿಖೆ ನಡೆಸುವುದು ಅಗತ್ಯ" ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಸದ್ಯದ ಅರ್ಜಿಯಲ್ಲಿ ಅರ್ಜಿದಾರರು ನಿರೀಕ್ಷಣಾ ಜಾಮೀನು ಕೋರಿ ಹಿಂದೆ ಯಾವುದೇ ಅರ್ಜಿಗಳನ್ನು ಸಲ್ಲಿಸಿರುವ ಅಂಶಗಳನ್ನು ಬಹಿರಂಗಪಡಿಸಿಲ್ಲ ಎಂಬುದನ್ನು ಹೈಕೋರ್ಟ್ ಪತ್ತೆ ಹಚ್ಚಿದೆ.

ಮಾರ್ಗಸೂಚಿ: ಒಂದೇ ಪ್ರಕರಣದಲ್ಲಿ ಈ ರೀತಿ ಯಾವ್ಯಾವ ನ್ಯಾಯಾಲಯಗಳ ಮುಂದೆ ಇದೇ ರೀತಿಯ ಅರ್ಜಿಗಳನ್ನು ಸಲ್ಲಿಸಲಾಗಿದೆಯೇ ಎಂಬುದನ್ನು ಕಂಡುಹಿಡಿಯಲು ನಿಯಮಿತ ಅಥವಾ ನಿರೀಕ್ಷಣಾ ಜಾಮೀನು ಕೋರಿ ಪ್ರತಿ ಅರ್ಜಿಯನ್ನು ಪರಿಶೀಲಿಸಲು ಪ್ರತಿ ಕೋರ್ಟ್ ನಲ್ಲಿ ಕಾರ್ಯವಿಧಾನ ಅಭಿವೃದ್ಧಿಪಡಿಸಬೇಕು ಎಂದು ಹೈಕೋರ್ಟ್, ರಿಜಿಸ್ಟ್ರಾರ್–ಜನರಲ್‌ಗೆ ನಿರ್ದೇಶನ ನೀಡಿದೆ. ಪೊಲೀಸರಿಂದ ವಿವರಗಳನ್ನು ಪಡೆದ ನಂತರ ಆರೋಪಿಯ ಮೇಲಿನ ಹಿಂದಿನ ಆದೇಶ ಅಥವಾ ಜಾಮೀನಿಗಾಗಿ ಬಾಕಿ ಇರುವ ಅರ್ಜಿಗಳ ಕುರಿತು ಆಯಾ ನ್ಯಾಯಾಲಯಗಳಿಗೆ ಮಾಹಿತಿಯನ್ನು ಪೂರೈಸಲು ಪ್ರಾಸಿಕ್ಯೂಟರ್ ಇಲಾಖೆಯು ಎಲ್ಲಾ ಸಾರ್ವಜನಿಕ ಅಭಿಯೋಜಕರಿಗೆ ಸೂಚಿಸಬೇಕು ಎಂದು ಹೈಕೋರ್ಟ್ ನಿರ್ದೇಶಿಸಿದೆ. ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದಾಗ ವಕೀಲರ ವಕಾಲತ್‌ಗೆ ಒತ್ತಾಯಿಸುವಂತೆ ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯಗಳ ನೋಂದಣಿಗೂ ಸಹ ಸೂಚಿಸಲಾಗಿದೆ.

ತನಿಖಾಧಿಕಾರಿ ಬದಲಾಯಿಸಿ: ಈ ಮಧ್ಯೆ, ಅರ್ಜಿದಾರರ ವಿರುದ್ಧದ ಕ್ರಿಮಿನಲ್ ಮೊಕದ್ದಮೆ ತನಿಖೆಗೆ ಮಾಡಲು ತನಿಖಾಧಿಕಾರಿ ವಿಫಲರಾಗಿರುವುದು ಮಾತ್ರವಲ್ಲದೆ ನ್ಯಾಯಾಲಯಗಳಿಗೆ ವಂಚನೆ ಮಾಡಲು ಅವಕಾಶ ನೀಡಿದ್ದರಿಂದ ತನಿಖಾಧಿಕಾರಿಯನ್ನು (ಐಒ) ಬದಲಾಯಿಸುವಂತೆ ಪೊಲೀಸ್ ಮಹಾನಿರ್ದೇಶಕರು ಮತ್ತು ಇನ್ಸ್‌ಪೆಕ್ಟರ್ ಜನರಲ್ ಅವರಿಗೆ ನ್ಯಾಯಾಲಯ ನಿರ್ದೇಶನ ನೀಡಿದೆ. ನಿರೀಕ್ಷಣಾ ಜಾಮೀನಿಗಾಗಿ ಅರ್ಜಿದಾರರು ವಂಚನೆಯಿಂದ ನಾನಾ ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಿರುವುದು ತಿಳಿದಿದ್ದರೂ ಸಹ ಬಂಧಿಸದೆ ಇರುವುದು ಸರಿಯಲ್ಲ ಎಂದು ನ್ಯಾಯಪೀಠ ಹೇಳಿದೆ.

ಆನ್‌ಲೈನ್ ಅವಾಂತರ; ಮದ್ಯ ಸರಬರಾಜಿನಲ್ಲಿ ವ್ಯತ್ಯಯ: ಮೈಸೂರು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ

ಕೆಎಸ್‌ಬಿಸಿಎಲ್ ಡಿಪೋ ಎದುರು ಮದ್ಯ ಮಾರಾಟಗಾರರ ಪ್ರತಿಭಟನೆ

ಮೈಸೂರು,ಏ.6(ಪಿಎಂ)–ಮದ್ಯ ಖರೀದಿಸಲು ಜಾರಿಗೆ ತಂದಿರುವ ಆನ್‌ಲೈನ್ ವ್ಯವಸ್ಥೆ ದೋಷಪೂರಿತ. ಇದರಿಂದ ಮಳಿಗೆಗಳಿಗೆ ಮದ್ಯ ಪೂರೈಕೆಯಲ್ಲಿ ವಿಳಂಬವಾಗಿ, ಮದ್ಯಪ್ರಿಯರ ಬೇಡಿಕೆಯಂತೆ ಮದ್ಯ ಪೂರೈಸಲು ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಿ ಮದ್ಯ ವರ್ತಕರು (ಸನ್ನದುದಾರರು) ಇಂದು ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ (ಕೆಎಸ್‌ಬಿಸಿಎಲ್) ಡಿಪೋಗಳಿಂದ ಮದ್ಯ ಖರೀದಿಸಲು ಆನ್‌ಲೈನ್ ವ್ಯವಸ್ಥೆ ಕಡ್ಡಾಯಗೊಳಿಸಿ, ಜಾರಿಗೆ ತರಲಾಗಿದೆ. ಆದರೆ ಈ ವ್ಯವಸ್ಥೆಗೆ ಸರ್ವರ್ ಸಮಸ್ಯೆ ಎದುರಾಗಿದೆ ಎಂದು ಮದ್ಯ ವರ್ತಕರು ದೂರಿ, ಬುಧವಾರ ರಾಜ್ಯಾದ್ಯಂತ ಆಯಾಯ ಕೆಎಸ್‌ಬಿಸಿಎಲ್ ಡಿಪೋಗಳ ಎದುರು ಪ್ರತಿಭಟನೆ ನಡೆಸಿದ್ದಾರೆ.

ಅಂತೆಯೇ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಡಿಪೋ ಎದುರು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಈ ನೂತನ ವ್ಯವಸ್ಥೆಯನ್ನು ಏಕಪಕ್ಷೀಯವಾಗಿ ಜಾರಿ ಮಾಡಲಾಗಿದೆ. ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಈ ವ್ಯವಸ್ಥೆಯನ್ನು ಸಂಪೂರ್ಣ ವಿರೋಧಿಸಿತ್ತು. ಆದರೂ ಇದರ ಸಾಧಕ–ಬಾಧಕಗಳ ಬಗ್ಗೆ ಅಸೋಸಿಯೇಷನ್‌ನ ಪದಾಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಬದಲು ಕೆಎಸ್‌ಬಿಸಿಎಲ್ ಮುಖ್ಯಸ್ಥರು ಏಕಾಏಕಿ ಜಾರಿಗೆ ತಂದಿದ್ದಾರೆ. ಈ ವ್ಯವಸ್ಥೆ ಸಂಪೂರ್ಣ ವಿಫಲವಾಗಿದ್ದು, ಕೆಎಸ್‌ಬಿಸಿಎಲ್‌ನ ಈ ನಿರ್ಧಾರದಿಂದ ಸರ್ಕಾರಕ್ಕೆ ಬರುವ ತೆರಿಗೆ ಮಾತ್ರವಲ್ಲದೆ, ವರ್ತಕರ ಲಾಭಾಂಶಕ್ಕೂ ಹೊಡೆತ ಬಿದ್ದಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕಳೆದ ನಾಲ್ಕೈದು ದಿನಗಳಿಂದ ಒಂದೊಂದು ಮಳಿಗೆಗೆ 2ರಿಂದ 3 ಸಾವಿರ ರೂ. ನಷ್ಟ ಉಂಟಾಗಿದೆ. ಈ ಹಿಂದೆ ಇದ್ದ ವ್ಯವಸ್ಥೆಯನ್ನೂ ಮುಂದುವರೆಸಬೇಕು. ಆ ಮೂಲಕ ಕಳೆದ ನಾಲ್ಕೈದು ದಿನಗಳಿಂದ ಉಂಟಾಗಿರುವ ಮದ್ಯದ ಕೃತಕ ಅಭಾವವನ್ನು ನಿವಾರಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಹಾಗೂ ಮೈಸೂರು–ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ಅಧ್ಯಕ್ಷ ಎಸ್.ಗುರುಸ್ವಾಮಿ, ಕೆಎಸ್‌ಬಿಸಿಎಲ್‌ನಲ್ಲಿ ಅಳವಡಿಸಿರುವ ಹೊಸ ಸಾಫ್ಟ್‌ವೇರ್ ದೋಷಪೂರಿತವಾಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಈ ಆನ್‌ಲೈನ್ ವ್ಯವಸ್ಥೆ ಜಾರಿ ಜೊತೆಗೆ 6 ತಿಂಗಳ ಕಾಲ ಹಳೇ ವ್ಯವಸ್ಥೆಯಡಿಯೂ ಮದ್ಯ ಖರೀದಿಗೆ ಅವಕಾಶ ನೀಡುವ ಮೂಲಕ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲು ಅವಕಾಶ ಕಲ್ಪಿಸಬೇಕೆಂದು ಮನವಿ ಮಾಡಿದೆವು. ಇದಕ್ಕೆ ಅಧಿಕಾರಿಗಳು ಒಪ್ಪಲಿಲ್ಲ. ಕೊನೆಗೆ ಒಂದು ತಿಂಗಳಾದರೂ ಕಾಲಾವಕಾಶ ಕೊಡಿ ಎಂದರೆ, ಅದಕ್ಕೂ ನಿರಾಕರಿಸಿದರು ಎಂದು ಕಿಡಿಕಾರಿದರು.

ಏ.4ರಿಂದ ಈ ಹೊಸ ವ್ಯವಸ್ಥೆ ಜಾರಿಗೆ ಬಂದಿದೆ. ಈ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ, ಸನ್ನದುದಾರರು ವ್ಯವಹಾರ ನಡೆಸುವುದು ಕಷ್ಟವಾಗಿದೆ. ಇದರಿಂದ ರಾಜ್ಯದಲ್ಲಿ ಕಳೆದ ಮೂರು ದಿನಗಳಿಂದ ಅಂದಾಜು ಸಾವಿರ ಕೋಟಿ ರೂ. ಹಣ ಕೆಎಸ್‌ಬಿಸಿಎಲ್ ಬ್ಯಾಂಕ್ ಖಾತೆಗೆ ಸನ್ನದುದಾರಿಂದ ಸಂದಾಯವಾಗಿದೆ. ಇದರ ಬಡ್ಡಿ ಯಾರಿಗೆ ಹೋಗುತ್ತದೆ? ಎಂದು ಪ್ರಶ್ನಿಸಿದರು.

ಹೊಸ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಮೊದಲು ಯಾವುದಾದರೂ ನಿರ್ದಿಷ್ಟ ವ್ಯಾಪ್ತಿಯೊಳಗೆ ಜಾರಿಗೊಳಿಸಬೇಕಿತ್ತು. ಅದು ಯಶಸ್ವಿಯಾದ ನಂತರ ವಿಸ್ತರಿಸಬೇಕಿತ್ತು. ಆದರೆ ಅದನ್ನು ಮಾಡದೇ ಅಧಿಕಾರಿಗಳು ದರ್ಪ ಮೆರೆಯುತ್ತಿದ್ದಾರೆ. ಏನೇ ಕೇಳಿದರೂ ನಿರ್ಲಕ್ಷ್ಯದ ಉತ್ತರ ನೀಡುತ್ತಾರೆ. ದಾಸ್ತಾನು ಡಿಪೋದಲ್ಲಿ ಬಿದ್ದಿದ್ದು, ಸಾಫ್ಟ್‌ವೇರ್ ದೋಷದಿಂದ ಬಿಲ್ಲಿಂಗ್ ಆಗುತ್ತಿಲ್ಲ. ಇದರಿಂದ ಮಳಿಗೆಗಳಿಗೆ ಮದ್ಯ ಪೂರೈಕೆ ಆಗುತ್ತಿಲ್ಲ. ಹಾಗಾಗಿ ಕಳೆದ ಮೂರು ದಿನಗಳಿಂದ ವಹಿವಾಟಿಗೆ ಭಾರೀ ಹೊಡೆತ ಬಿದ್ದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಡಿಪೋ ವ್ಯವಸ್ಥಾಪಕ ಎನ್.ಲೋಕೇಶ್ ಅವರ ಮೂಲಕ ಕೆಎಸ್‌ಬಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿ, ಪ್ರತಿಭಟನೆ ಅಂತ್ಯಗೊಳಿಸಲಾಯಿತು.

ಸಂಘದ ಉಪಾಧ್ಯಕ್ಷರಾದ ಕೆ.ಪಿ.ಪರಮೇಶ್, ಎಲ್.ಭಾಸ್ಕರ್, ಪ್ರಧಾನ ಕಾರ್ಯದರ್ಶಿ ಆರ್.ಲಕ್ಷ್ಮಣ್, ಕಾರ್ಯದರ್ಶಿ ಕೆ.ಎಸ್.ಮುರಳಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕೆಎಸ್‌ಬಿಸಿಎಲ್ ಡಿಪೋ ಎದುರು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ, ಡಿಪೋ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು.

ಸಾಫ್ಟ್‌ವೇರ್ ಸಂಬಂಧ ತನಿಖೆಯಾಗಲಿ

ಗುಣಮಟ್ಟದ ಸಾಫ್ಟ್‌ವೇರ್ ಅಳವಡಿಸಿಲ್ಲ ಎಂಬ ಅನುಮಾನವಿದ್ದು, ಈ ಸಂಬಂಧ ತನಿಖೆಯೂ ಆಗಬೇಕು. ಸನ್ನದುದಾರರ ಹಿತದೃಷ್ಟಿಯಿಂದ ಏಪ್ರಿಲ್ ತಿಂಗಳಾಂತ್ಯದವರೆಗೆ ಹೊಸ ಮತ್ತು ಹಳೇ ಎರಡೂ ವ್ಯವಸ್ಥೆಯಡಿ ಮದ್ಯ ಖರೀದಿಸಲು ಅವಕಾಶ ಕಲ್ಪಿಸಬೇಕು. ಆನ್‌ಲೈನ್‌ನಲ್ಲಿ ರಾತ್ರಿ 9ರಿಂದ ಬೆಳಗ್ಗೆ 9ರವರೆಗೆ ಇಂಡೆಂಟ್ ಮಾಡಲು ಸಮಯ ನಿಗದಿ ಮಾಡಿದ್ದಾರೆ. ಆದರೆ ರಾತ್ರಿ ಮಳಿಗೆ ಮುಚ್ಚುವುದೇ ತಡವಾಗುತ್ತದೆ. ಹಾಗಾಗಿ ಈ ಸಮಯವನ್ನು ಬೆಳಗ್ಗೆ 9ರಿಂದ ರಾತ್ರಿ 9ರವರೆಗೆ ಬದಲಾಯಿಸಬೇಕು. ಮಳಿಗೆಗಳಲ್ಲಿ ಲೋಕಲ್ ಮದ್ಯದ ಕೊರತೆ ಹೆಚ್ಚಾಗಿದೆ. ದುಬಾರಿ ಬೆಲೆಯ ಮದ್ಯ ಲಭ್ಯವಿದೆ. –ಎಸ್.ಗುರುಸ್ವಾಮಿ

ಕಳಪೆ ಸಾಫ್ಟ್‌ವೇರ್ ಅಳವಡಿಕೆ ಆರೋಪ

ಮೈಸೂರು,ಏ.6(ಪಿಎಂ)– ಆನ್‌ಲೈನ್ ಮೂಲಕ ಮದ್ಯ ಖರೀದಿಸುವ ವ್ಯವಸ್ಥೆ ಒಳ್ಳೆಯದೇ. ಆದರೆ ಅದಕ್ಕೆ ಕಾಲಾವಕಾಶ ನೀಡಬೇಕಿತ್ತು. ಇಲ್ಲಿ ಆನ್‌ಲೈನ್ ವ್ಯವಸ್ಥೆಗೆ ಅಳವಡಿಸಿರುವ ಸಾಫ್ಟ್‌ವೇರ್ ಕಳಪೆಯಾಗಿದ್ದು, ಇದರಲ್ಲಿ ರಾಜ್ಯ ಮಟ್ಟದ ಕೆಎಸ್‌ಬಿಸಿಎಲ್ ಅಧಿಕಾರಿಗಳು ಅವ್ಯವಹಾರ ನಡೆಸಿರುವ ಅನುಮಾನ ಇದೆ ಎಂದು ಟ್ರೂ ಸ್ಪಿರಿಟ್ಸ್‌ನ ವ್ಯವಸ್ಥಾಪಕ ನಿರ್ದೇಶಕರೂ ಆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮದ್ಯ ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಲಕ್ಷ್ಮಣ್ ಶಂಕೆ ವ್ಯಕ್ತಪಡಿಸಿದರು.

ಈ ಹಿಂದೆ ಫೋನ್‌ನಲ್ಲಿ ಆರ್ಡರ್ ಮಾಡಿದರೆ ಡಿಪೋದಿಂದ ಮದ್ಯ ಪೂರೈಕೆ ಆಗುತ್ತಿತ್ತು. ಈಗ ಜಾರಿಗೊಳಿಸಿರುವ ಹೊಸ ವ್ಯವಸ್ಥೆ ಒಳ್ಳೆಯದೇ. ಗುಣಮಟ್ಟದ ಸಾಫ್ಟ್‌ವೇರ್ ಅಳವಡಿಸದ ಹಿನ್ನೆಲೆಯಲ್ಲಿ ಸಮಸ್ಯೆ ಉದ್ಭವಿಸಿದೆ. ರಾಜ್ಯ ಮಟ್ಟದ ಕೆಎಸ್‌ಬಿಸಿಎಲ್ ಅಧಿಕಾರಿಗಳು ಶಾಮೀಲಾಗಿ ಸಾಧಾರಣ ಸಾಫ್ಟ್‌ವೇರ್ ಕಂಪನಿಗೆ ಜವಾಬ್ದಾರಿ ನೀಡಿದ್ದಾರೆ. ಸಾಫ್ಟ್‌ವೇರ್ ಹೊಣೆಯನ್ನು ಇನ್ಫೋಸಿಸ್, ಟಾಟಾ ಇಂಟೆಲ್, ವಿಪ್ರೋ ಇಂತಹ ದೊಡ್ಡ ಕಂಪನಿಗಳಿಗೆ ನೀಡಬೇಕಿತ್ತು. ಮದ್ಯ ಸರಬರಾಜಿನಲ್ಲಿ ವ್ಯತ್ಯಯವಾಗಿ, ನಮಗೆ ಉಂಟಾಗಿರುವ ನಷ್ಟಕ್ಕೆ ಹೊಣೆ ಯಾರು? ಎಂದು ಪ್ರಶ್ನಿಸಿದರಲ್ಲದೆ, ಮುಖ್ಯಮಂತ್ರಿಗಳು, ಅಬಕಾರಿ ಸಚಿವರು ಸನ್ನದುದಾರರ ಸಮಸ್ಯೆಗಳ ನಿವಾರಣೆಗೆ ಶೀಘ್ರ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಅಲ್‌ಖೈದಾ ಇದ್ದರೆ ಬಂಧಿಸಲಿ, ಅದು ಬಿಟ್ಟು ಏನೇನೋ ಮಾತನಾಡಬೇಡಿ

ಬಿಜೆಪಿ ವಿರುದ್ಧ ಮಾಜಿ ಕೇಂದ್ರ ಸಚಿವ ಸಿ.ಎಂ.ಇಬ್ರಾಹಿಂ ಕಿಡಿ



ಮೈಸೂರು, ಏ.6(ಆರ್‌ಕೆಬಿ)– ಹಿಜಾಬ್ ವಿಚಾರದಲ್ಲಿ ಮಂಡ್ಯದಲ್ಲಿ ಅಲ್ಲಾ ಹು ಅಕ್ಬರ್ ಎಂದು ಘೋಷಣೆ ಕೂಗಿದ್ದ ವಿದ್ಯಾರ್ಥಿನಿ ಮುಸ್ಕಾನಾ ಎಂಬ ಹುಡುಗಿಗೆ ಅಲ್‌ಖೈದಾ ಸಂಘಟನೆ ಏನೆಂದೇ ಗೊತ್ತಿಲ್ಲ. ಇದೆಲ್ಲಾ ಬಿಜೆಪಿಯವರ ಸೃಷ್ಟಿ ಎಂದು ಮಾಜಿ ಕೇಂದ್ರ ಸಚಿವ ಸಿ.ಎಂ.ಇಬ್ರಾಹಿಂ ತಿಳಿಸಿದರು. ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಲ್‌ಖೈದಾಗೂ ಕರ್ನಾಟಕ ಮತ್ತು ಭಾರತಕ್ಕೆ ಸಂಬಂಧವಿಲ್ಲ. ಅಲ್‌ಖೈದಾ, ಪಾಲಾಖೈದಾ ಎಂದು ಇವರೇ ಸೃಷ್ಟಿ ಮಾಡುತ್ತಿದ್ದಾರೆ. ಅಲ್‌ಖೈದಾ ಇದ್ದರೆ ಅವರನ್ನು ಹುಡುಕಿ ಬಂಧಿಸಲಿ. ಅದು ಬಿಟ್ಟು ಅನಗತ್ಯವಾಗಿ ಏನೇನೋ ಮಾತನಾಡಬೇಡಿ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದರು. ಬೆಂಗಳೂರಿನಲ್ಲಿ ನಡೆದ ಯುವಕನ ಕೊಲೆ ವಿಚಾರದಲ್ಲಿ ಗೃಹ ಸಚಿವರ ಭಿನ್ನ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರಿಗೆ ತಲೆ ಕೆಟ್ಟಿದೆ. ಮಂಗನಿಗೆ ಹೆಂಡ ಕುಡಿಸಿದರೆ ಹೇಗೆ ನೃತ್ಯ ಮಾಡುತ್ತದೆಯೋ ಹಾಗೇ ಅವರು ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಹೆಚ್ಚೆಚ್ಚು ಮದ್ಯ ಕುಡಿಸಿ ಆದಾಯ ದ್ವಿಗುಣಗೊಳಿಸಿ

ಅಬಕಾರಿ ಇಲಾಖೆಗೆ ಟಾರ್ಗೆಟ್ ಕೊಟ್ಟ ಸರ್ಕಾರ

ಬೆಂಗಳೂರು, ಏ.6– ಆದಾಯ ಗಳಿಕೆಗೆ ಮುಂದಾದ ಬೊಮ್ಮಾಯಿ ಸರ್ಕಾರ ಕುಡಿಯುವವರ ಸಂಖ್ಯೆ ಹೆಚ್ಚಿಸಿ ಎನ್ನುವ ಅರ್ಥದಲ್ಲಿ ಅಬಕಾರಿ ಇಲಾಖೆಗೆ ಟಾರ್ಗೆಟ್ ಕೊಟ್ಟಿದೆ. 2022–23ನೇ ಸಾಲಿನಲ್ಲಿ ಬರೋಬ್ಬರಿ 29 ಕೋಟಿ ಆದಾಯ ನೀಡುವಂತೆ ಬೊಮ್ಮಾಯಿ ಸರ್ಕಾರ ಅಬಕಾರಿ ಇಲಾಖೆಗೆ ಟಾರ್ಗೆಟ್ ಕೊಟ್ಟಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಆದಾಯ ಸಂಗ್ರಹ ಗುರಿಯಲ್ಲಿ 4,420 ಕೋಟಿ ರೂ. ಹೆಚ್ಚಿಸಿದೆ. ಪ್ರಸಕ್ತ ವರ್ಷ ಬಜೆಟ್‌ನಲ್ಲಿಯೂ ಮದ್ಯ ದರವನ್ನು ಹೆಚ್ಚಿಸಿಲ್ಲ. ಹೀಗಿದ್ದರೂ, ದರ ಏರಿಸುವ ಬದಲು 'ಜನರಿಗೆ ಹೆಚ್ಚು ಮದ್ಯ ಕುಡಿಸಿ, ಹೆಚ್ಚು ಆದಾಯ ಗಳಿಸಿ' ತತ್ವಕ್ಕೆ ಸರ್ಕಾರ ಮುಂದಾಗಿದೆ. ಇದರಿಂದಾಗಿ ರಾಜ್ಯದ ಶೇ.85 ಹಳ್ಳಿಗಳಲ್ಲಿ ಈಗಾಗಲೇ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟಕ್ಕೆ ಸರ್ಕಾರವೇ ಪುಷ್ಟಿ ನೀಡಿದಂತಾಗಿದೆ.

2021–22ರಲ್ಲಿ 24,580 ಕೋಟಿ ಸಂಗ್ರಹ ಸರ್ಕಾರ ಗುರಿಯಾಗಿತ್ತು. ಆದರೆ ಈಗ 26,276 ಕೋಟಿ ಸಂಗ್ರಹವಾಗಿದೆ. ಒಟ್ಟಿನಲ್ಲಿ ಅಬಕಾರಿಯಿಂದ ಅಧಿಕ ಆದಾಯವಿದೆ ಎಂದು ತಿಳಿದ ಸರ್ಕಾರ ರಾಜ್ಯದಲ್ಲಿ ಮದ್ಯ ಹೆಚ್ಚು ಮಾರಾಟ ಆಗಬೇಕು, ಕುಡುಕರ ಸಂಖ್ಯೆ ಹೆಚ್ಚಾಗಬೇಕು ಎಂದು ಅಬಕಾರಿ ಇಲಾಖೆಗೆ ಟಾರ್ಗೆಟ್ ಕೊಟ್ಟಿದೆ.

ಬೆಂಗಳೂರಿನಲ್ಲಿ ಯುವಕನ ಕೊಲೆ ಪ್ರಕರಣ

ಗೃಹ ಸಚಿವರ ಗೊಂದಲದ ಹೇಳಿಕೆ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರು, ಏ.6(ಜಿಎ)– ಬೆಂಗಳೂರಿನ ಚಂದ್ರು ಎಂಬ ಯುವಕನ ಕೊಲೆ ವಿಚಾರದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ನೀಡಿರುವ ಹೇಳಿಕೆ ಖಂಡಿಸಿ ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ನ್ಯಾಯಾಲಯದ ಮುಂಭಾಗವಿರುವ ಗಾಂಧಿ ವೃತ್ತದ ಬಳಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಸದಸ್ಯರು ಪ್ಲೇಕಾರ್ಡ್ ಹಿಡಿದು ಗೃಹ ಸಚಿವರ ವಿರುದ್ಧ ವಿವಿಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಬೆಂಗಳೂರಿನಲ್ಲಿ ಚಂದ್ರು ಎಂಬ ಯುವಕ ಚೂರಿ ಇರಿತದಿಂದ ಕೊಲೆಯಾಗಿರುವ ವಿಷಯಕ್ಕೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಯುವಕನಿಗೆ ಉರ್ದು ಭಾಷೆ ಮಾತನಾಡಲು ಬರುವುದಿಲ್ಲವೆಂದು ಚುಚ್ಚಿ ಕೊಲೆ ಮಾಡಿದ್ದಾರೆಂದು ಹೇಳಿಕೆ ನೀಡುವುದರ ಮೂಲಕ ರಾಜ್ಯದಲ್ಲಿ ಕೋಮುಗಲಭೆ ಸೃಷ್ಟಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ಕುಮ್ಮಕ್ಕಿನಿಂದ ರಾಜ್ಯದಲ್ಲಿ ಧಾರ್ಮಿಕ ಅರಾಜಕತೆಯನ್ನು ಸೃಷ್ಟಿ ಮಾಡಲು ಹೊರಟಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಹಿಜಾಬ್, ಹಲಾಲ್, ಅಜಾನ್ ಮತ್ತು ಈಗ ಮಾವು ಮಾರಾಟದ ವಿಚಾರಕ್ಕೂ ಧರ್ಮದ ಲೇಪನ ಮಾಡುತ್ತಿದ್ದಾರೆ. ಈ ಮೂಲಕ ಕೋಮು ಸೌಹಾರ್ದತೆಗೆ ಧಕ್ಕೆ ತರಲು ಹೊರಟಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಗಳು ಗೃಹ ಸಚಿವರನ್ನು ಸಚಿವ ಸಂಪುಟದಿಂದ ವಜಾ ಮಾಡುವುದರ ಮೂಲಕ ಸಾಮರಸ್ಯ, ಸೌಹಾರ್ದತೆ ಎತ್ತಿ ಹಿಡಿಯಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಸವಿತಾ ಸಮಾಜ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಸಂವಿಧಾನ ಸಂರಕ್ಷಣೆ ಅಧ್ಯಕ್ಷ ಎನ್.ಭಾಸ್ಕರ್, ಆರ್.ಕೆ.ರವಿ, ಮಹೇಂದ್ರ ಕಾಗಿನೆಲೆ, ಸತ್ಯ ನಾರಾಯಣ್, ತ್ಯಾಗರಾಜ್, ನಿಹಾಲ್, ಡಿ.ಪಿ.ಪ್ರಕಾಶ್, ಕೆಆರ್. ಗೋಪಾಲ ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

ಕೊಡಗಿನ ಮನುವಿನಿಂದ ಪುನರ್ಜನ್ಮ ಪಡೆದ ಐವರು!

ಅಪೋಲೋ ಬಿಜಿಎಸ್ ಆಸ್ಪತ್ರೆಯಿಂದ ಸಾಕಾರ



ಮೈಸೂರು,ಏ.6–ಇತ್ತೀಚೆಗೆ ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಮೃತಪಟ್ಟ ಕೊಡಗಿನ ಸೋಮವಾರಪೇಟೆ ನಿವಾಸಿಯ ಅಂಗಾಂಗಗಳು ಐವರಿಗೆ ಪುನರ್ಜನ್ಮ ನೀಡಿದೆ. ಮೆದುಳು ನಿಷ್ಕ್ರಿಯಗೊಂಡಿದ್ದ ಸೋಮವಾರಪೇಟೆಯ ಮನು(48) ಎಂಬುವರ ಅಂಗಾಂಗಗಳನ್ನು ದಾನ ಮಾಡುವ ಬಗ್ಗೆ ಅಪೋಲೋ ಬಿಜಿಎಸ್ ವೈದ್ಯರು ನೀಡಿದ ಸಲಹೆಯನ್ನು ಒಪ್ಪಿ ಅವರ ಪತ್ನಿ ಮತ್ತು ಪುತ್ರಿ ಮೃತ ವ್ಯಕ್ತಿಯ ಅಂಗಾಂಗ ದಾನ ಮಾಡಿದ್ದಾರೆ.

ಮಾ.30ರಂದು ಮಧ್ಯಾಹ್ನ ಗಂಭೀರ ಸ್ಥಿತಿಯಲ್ಲಿದ್ದ ಮನು ಅವರನ್ನು ಸಿಎಸ್‌ಐ ಹೋಲ್ಡ್ಸ್ ವರ್ತ್ ಸ್ಮಾರಕ ಆಸ್ಪತ್ರೆಯಿಂದ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ಕರೆತರಲಾಗಿತ್ತು. ಅವರಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಏ.1ರಂದು ರಾತ್ರಿ 9.30ಕ್ಕೆ ಮೆದುಳು ನಿಷ್ಕ್ರಿಯವಾಗಿದೆ ಎಂದು ವೈದ್ಯರು ಘೋಷಿಸಿದರು. ಅಲ್ಲದೇ ಅವರ ಕುಟುಂಬದವರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ಕೌನ್ಸಿಲಿಂಗ್ ನಡೆಸಲಾಯಿತು ಎಂದು ಅಪೋಲೋ ಬಿಜಿಎಸ್ ಆಸ್ಪತ್ರೆ ಉಪಾಧ್ಯಕ್ಷ ಎನ್.ಜಿ.ಭಾರತೀಶ ರೆಡ್ಡಿ ತಿಳಿಸಿದ್ದಾರೆ.

ಏಪ್ರಿಲ್ 2ರಂದು ಮುಂಜಾನೆ ಮನು ಅವರ ಅಂಗಾಂಗಗಳ ಕಸಿ ಪ್ರಕ್ರಿಯೆಯನ್ನು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ನಡೆಸಿ, ಅವರ ಯಕೃತ್ತು, ಎರಡು ಮೂತ್ರ ಪಿಂಡಗಳನ್ನು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ, ಹೃದಯ ಕವಾಟುಗಳನ್ನು ಬೆಂಗಳೂರಿನ ಎನ್‌ಹೆಚ್ ಆಸ್ಪತ್ರೆ, ಕಾರ್ನಿಯಾಗಳನ್ನು ಮೈಸೂರಿನ ಲಯನ್ 'ಐ' ಬ್ಯಾಂಕ್ ಸ್ವೀಕರಿಸಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಲಿಸುತ್ತಿದ್ದ ಬೈಕ್ ಮೇಲೆ ಮುರಿದು ಬಿದ್ದ ಮರದ ಕೊಂಬೆ ಓರ್ವ ಸ್ಥಳದಲ್ಲೇ ಸಾವು; ಮತ್ತೊಬ್ಬನಿಗೆ ಗಾಯ

ಹೊಮ್ಮರಗಳ್ಳಿ ಗ್ರಾಮದಲ್ಲಿ ಘಟನೆ



ನವೀನ್

ಹೆಚ್.ಡಿ.ಕೋಟೆ, ಏ.6(ಮಂಜು/ರಾಜೇಶ್)–ಚಲಿಸುತ್ತಿದ್ದ ಬೈಕ್ ಮೇಲೆ ಭಾರೀ ಗಾತ್ರದ ಮರದ ಕೊಂಬೆ ಮುರಿದು ಬಿದ್ದು ಓರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೋರ್ವ ಗಾಯಗೊಂಡಿರುವ ಘಟನೆ ಬುಧವಾರ ಮಧ್ಯಾಹ್ನ ತಾಲೂಕಿನ ಹೊಮ್ಮರಗಳ್ಳಿ ಗ್ರಾಮ ಬಳಿ ಸಂಭವಿಸಿದೆ.

ತಾಲೂಕಿನ ಬೆಳಗನಹಳ್ಳಿ ಗ್ರಾಮದ ಗೋಪಾಲಕೃಷ್ಣ ಪುತ್ರ ನವೀನ್(20) ಮೃತಪಟ್ಟ ಬೈಕ್ ಸವಾರ ಹಾಗೂ ಬೈಕ್ ಹಿಂಬದಿಯಲ್ಲಿ ಕುಳಿತ್ತಿದ್ದ ಹೆಚ್.ಡಿ.ಕೋಟೆ ಪುರಸಭಾ ಸದಸ್ಯ ಮಿಲ್‌ನಾಗರಾಜು ಪುತ್ರ ಶಿವಮಣಿ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆ ವಿವರ: ನವೀನ್ ಹಾಗೂ ಶಿವಮಣಿ ಬೈಕ್‌ನಲ್ಲಿ ಹೆಚ್.ಡಿ.ಕೋಟೆಯಿಂದ ಮೈಸೂರಿಗೆ ತೆರಳುತ್ತಿದ್ದರು. ಹೊಮ್ಮರಗಳ್ಳಿಯ ಗ್ರಾಮ ಪಂಚಾಯತಿ ಕಚೇರಿ ಬಳಿ ಭಾರೀ ಗಾತ್ರದ ಹಳೇ ಅರಳಿಮರದ ಕೊಂಬೆ ಬೈಕ್ ಮೇಲೆ ಮುರಿದು ಬಿದ್ದಿದೆ. ಬೈಕ್ ಮೇಲೆ ಕೊಂಬೆ ಬಿದ್ದ ರಭಸಕ್ಕೆ ಬೈಕ್ ಚಲಾಯಿಸುತ್ತಿದ್ದ ನವೀನ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಬೈಕ್ ಹಿಂಬದಿ ಕುಳಿತ್ತಿದ್ದ ಶಿವಮಣಿ ಕಾಲು ಮುರಿತಗೊಂಡಿದೆ. ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಹೆಚ್.ಡಿ.ಕೋಟೆ ಸರ್ಕಲ್ ಇನ್ಸ್‌ಪೆಕ್ಟರ್ ಬಸವರಾಜು, ಹಂಪಾಪುರ ಠಾಣೆ ಮುಖ್ಯಪೇದೆ ಮಹದೇವ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಹೆಚ್.ಡಿ.ಕೋಟೆ ಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಮೃತದೇಹ ಹಸ್ತಾಂತರಿಸಲಾಯಿತು. ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುರಿದ ಬಿದ್ದ ಭಾರೀ ಗಾತ್ರದ ಮರದ ಕೊಂಬೆ ತೆರವುಗೊಳಿಸಲು ವಿಳಂಬವಾದ್ದರಿಂದ ಮೈಸೂರು ಮಾನಂದವಾಡಿ ಹೆದ್ದಾರಿಯಲ್ಲಿ 2 ಗಂಟೆಗೂ ಹೆಚ್ಚು ಕಾಲ ಸಂಚಾರ ಅಸ್ತವ್ಯಸ್ತವಾಯಿತು. ಸರಿ ಸುಮಾರು 3 ಕಿಲೋಮೀಟರ್ ಹೆಚ್ಚು ದೂರ ವಾಹನ ದಟ್ಟಣೆ ಏರ್ಪಟ್ಟು ಪ್ರಯಾಣಿಕರು–ವಾಹನ ಸವಾರರು ಪರದಾಡಿದರು.

ಅರಣ್ಯ ಇಲಾಖೆ ವಿರುದ್ಧ ಆಕ್ರೋಶ: ಒಣಗಿರುವ ಮರಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ದೂರು ನೀಡಿದರೂ ಅರಣ್ಯ ಇಲಾಖೆ ಸ್ಪಂದಿಸಲಿಲ್ಲ. ಇದರಿಂದ ಈ ದುರ್ಘಟನೆ ಸಂಭವಿಸಿದೆ. ಕೂಡಲೇ ಸಂಬಂಧಪಟ್ಟ ಮೇಲಧಿಕಾರಿಗಳು ನಿರ್ಲಕ್ಷ್ಯ ತೋರಿದ ಅರಣ್ಯ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಆಟಿಸಂ ಹೊಂದಿದವರ ಜೀವನ ಮಟ್ಟ ಸುಧಾರಣೆಗೆ ಒತ್ತು ನೀಡಬೇಕು

ಸರ್ಕಾರ, ಸಮಾಜಕ್ಕೆ ರೆಡ್ ಕ್ರಾಸ್ ಮೈಸೂರು ಕಾರ್ಯದರ್ಶಿ ವೈದ್ಯನಾಥ್ ಮನವಿ

ಮೈಸೂರು, ಏ.6(ಪಿಎಂ)– ಆಟಿಸಂ (ಸ್ವಲೀನತೆ) ಹೊಂದಿರುವ ಮಕ್ಕಳು ಅಥವಾ ವ್ಯಕ್ತಿಗಳ ಪೋಷಣೆಗೆ ಮತ್ತು ಅವರ ಜೀವನ ಮಟ್ಟದ ಸುಧಾರಣೆಗೆ ಸರ್ಕಾರ ಮತ್ತು ಸಮಾಜ ವಿಶೇಷ ಒತ್ತು ನೀಡಬೇಕಿದ್ದು, ಈ ನಿಟ್ಟಿನಲ್ಲಿ ಇವರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಲು ಸರ್ಕಾರ ಆದ್ಯತೆ ನೀಡಬೇಕು ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಮೈಸೂರು ಘಟಕದ ಕಾರ್ಯದರ್ಶಿ ವೈದ್ಯನಾಥ್ ಮನವಿ ಮಾಡಿದರು.

ಮೈಸೂರಿನ ತಿಲಕನಗರದಲ್ಲಿರುವ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ಆಟಿಸಂ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ 2016ರಲ್ಲಿ ಆಟಿಸಂ (ಸ್ವಲೀನತೆ) ಅನ್ನು 21 ಅಂಗವೈಕಲ್ಯದಲ್ಲಿ ಒಂದಾಗಿ ಪರಿಗಣಿಸಿದೆ. ಆ ಮೂಲಕ ವಿಶೇಷಚೇತನರಿಗೆ ನೀಡುವ ಸರ್ಕಾರದ ಸೌಲಭ್ಯಗಳನ್ನು ಆಟಿಸಂ ಸಮಸ್ಯೆ ಹೊಂದಿರುವ ಮಕ್ಕಳು ಮತ್ತು ವ್ಯಕ್ತಿಗಳಿಗೂ ನೀಡುವ ವ್ಯವಸ್ಥೆ ಜಾರಿಗೊಳಿಸಿದೆ. ಆದರೆ ಈ ಸಮಸ್ಯೆ ಹೊಂದಿದವರನ್ನು ಪೋಷಣೆ ಮಾಡುವುದು ಸವಾಲಿನ ಕೆಲಸ. ಅವರ ಜೀವನ ಮಟ್ಟ ಸುಧಾರಣೆಗೆ ಸರ್ಕಾರ ಮತ್ತಷ್ಟು ಸೌಲಭ್ಯಗಳನ್ನು ನೀಡಬೇಕು ಎಂದು ಕೋರಿದರು. ಪ್ರತಿ ವರ್ಷ ಏ.2, ವಿಶ್ವ ಆಟಿಸಂ ದಿನವಾಗಿ ಆಚರಿಸಲಾಗುತ್ತದೆ. ಆ ಮೂಲಕ ಈ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿವೃತ್ತ ಉಪನಿರ್ದೇಶಕಿ ಕೆ.ಪದ್ಮ, ವಿಶೇಷ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದ ಉಪನಿರ್ದೇಶಕಿ ಮಂಜುಳಾದೇವಿ ಪಾಟೀಲ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಆರ್.ಮಾಲಿನಿ ಮತ್ತಿತರರು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ವೃದ್ಧಾಶ್ರಮಕ್ಕೆ ಕೆಲಸಕ್ಕೆ ಬೇಕಾಗಿದ್ದಾರೆ
ಊಟ, ವಸತಿಯೊಂದಿಗೆ ಅಲ್ಲೇ ಉಳಿದುಕೊಂಡು ನೋಡಿಕೊಳ್ಳುವವರು ಬೇಕಾಗಿದ್ದಾರೆ. ಸಂಪರ್ಕಿಸಿ
99643 33796

ಬೇಕಾಗಿದ್ದಾರೆ
ಬನ್ನಿಮಂಟಪದಲ್ಲಿರುವ ಕಾರ್ಖಾನೆಗೆ ನುರಿತ ಟೈಲರ್‌ಗಳು ಬೇಕಾಗಿದ್ದಾರೆ. ಸಂಬಳ: 10,000 ರಿಂದ 15,000
8884179981

SRI VINAYAKA CENTRAL SCHOOL, TARIPURA
WANTED TEACHERS
Trained & experienced graduate teachers required for all subjects, including computer, Arts & Craft & NST for Primary and High School. Free transport facility available. Hostel facility available from 7th to 10th Std. for boys.
8971577685 / 9980631121
Send your resume through SMS

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ.
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586 / 6360884930

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ (8 Hours Duty) ಆಸಕ್ತಿವುಳ್ಳವರು ಕೂಡಲೇ ದಾಖಲಾತಿಯೊಂದಿಗೆ ಸಂಪರ್ಕಿಸಿ
9663958939

ನಿರ್ಮಲಧಾರೆ SOLUTIONS
ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
9606871188

ತಕ್ಷಣ ಬೇಕಾಗಿದ್ದಾರೆ
ಫೋರಂ ಮಾಲ್ ಮೈಸೂರಿನಲ್ಲಿರುವ ಜಾಕಿ (JOCKEY) ಶೋರೂಂನಲ್ಲಿ ಕೆಲಸಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: PUC ಮೇಲ್ಪಟ್ಟು, ಉತ್ತಮ ವೇತನ ಸೌಲಭ್ಯವಿರುತ್ತದೆ. ವಯಸ್ಸಿನ ಮಿತಿ: 20–30 ವರ್ಷ
8431588337
7338306565

REQUIRED
Security Supervisors and Security Guards for Mysore and Nanjangud for immediate posting.
For Mysore can contact @ 6364857754
for Nanjangud @ 6364857753

ಮನೆ ಭೋಗ್ಯಕ್ಕೆ ಇದೆ
ಸಿಂಗಲ್ ಬೆಡ್ ರೂಂ ಉಳ್ಳ ಮನೆ ಭೋಗ್ಯಕ್ಕೆ ಇದೆ 1st Floor (20x30) ಪೂರ್ವದ ಬಾಗಿಲು ವಿಜಯನಗರ 4th Stage 1st Phase (ರಿಂಗ್ ರೋಡ್ ಪಕ್ಕದಲ್ಲಿ)
9945534749

ಬ್ಯೂಟಿ ಪಾರ್ಲರ್ ಮಾರಾಟಕ್ಕಿದೆ
13 ವರ್ಷಗಳಿಂದ ನಡೆಯುತ್ತಿರುವ ಬ್ಯೂಟಿ ಪಾರ್ಲರ್ ಮಾರಾಟಕ್ಕಿದೆ. ಜೆ.ಪಿ.ನಗರ, ಮೈಸೂರು
9449806638

BOOKINGS OPEN FOR CONSTRUCTION OF NEW HOUSES (SITE+HOUSE)
20x30 - 27 Lakhs
30x40 - 49 Lakhs
Bank Loan upto 85%, Near Gurur Bus Stop, Ramabainagar, Mysuru, DTCP approved, 1.5kms from J P Nagar Ring Road.
8660105902

ವಿಚ್ಛು ಕಲ್ಯಾಣ ಭಾಗ್ಯ
ಎಲ್ಲಾ ಜಾತಿಯ ವಧು, ವರರಿಗಾಗಿ ಸಂಪರ್ಕಿಸಿ 1) ಮೊದಲನೆ ಮದುವೆ, (2) ಎರಡನೇ ಮದುವೆ, (3) ಲೇಟ್ ಮ್ಯಾರೇಜ್ 4) ವಿಧವೆ, ವಿಧುರರು
ಸಂಪರ್ಕಿಸಿ: ನಂ. 445, 1ನೇ ಕ್ರಾಸ್, ಚಿಕ್ಕಮ್ಮ ಸ್ಕೂಲ್ ರಸ್ತೆ, ಹುಂಡಿ ಬೀದಿ, ಹಿನಕಲ್, ಮೈಸೂರು–570 017
8722935334, 8296856534

ಬತ್ತಿಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬತ್ತಿಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ, ತರಬೇತಿಗಾಗಿ:
7406375196
9880548596

SITE FOR SALE
Site for Sale at Metagalli MUDA Site #6, 1085 Sq. Feet, Near to Passport office. Naveen:
9964812514

FOR RENT
Ground Floor 600 Sq.ft., 2nd Floor, 500 Sq ft. Available opp. IDBI Bank Double Road, Saraswathipuram, Mysore.
9535411141

ಶಿಕ್ಷಕರು ಬೇಕಾಗಿದ್ದಾರೆ
ನಂಜನಗೂಡು ತಾಲ್ಲೂಕಿನ ಹೆಡಿಯಾಲ ಗ್ರಾಮದ ಶ್ರೀ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ (ರಿ) ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಗೆ ಡಿ.ಇಡಿ, ಬಿ.ಎ, ಬಿ.ಎಡ್, ಎಂ.ಎ ಇಂಗ್ಲೀಷ್ ಶಿಕ್ಷಕರು ಹಾಗೂ ಡಿ.ಇಡಿ, ಬಿಎ, ಬಿ.ಎಡ್, ಎಂ.ಎ ಕನ್ನಡ ಶಿಕ್ಷಕರು ಬೇಕಾಗಿದ್ದಾರೆ. ಸಂಪರ್ಕಿಸಿ ಕಾರ್ಯದರ್ಶಿ:
8867720754 / 9480452953
6361151940

ಪ್ರವೇಶಾತಿ ಪ್ರಾರಂಭವಾಗಿದೆ
ನಂಜನಗೂಡು ತಾಲ್ಲೂಕಿನ ಹೆಡಿಯಾಲ ಗ್ರಾಮದ ಶ್ರೀಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆಯಲ್ಲಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ 2022–23ನೇ ಸಾಲಿನ ಎಲ್.ಕೆ.ಜಿ, ಯುಕೆಜಿ, 1 ರಿಂದ 10 ನೇ ತರಗತಿಯ ಪ್ರವೇಶಾತಿ ಪ್ರಾರಂಭವಾಗಿದೆ. ಸುಸಜ್ಜಿತ ಕಟ್ಟಡ ಹೊಂದಿದೆ ನಿಮ್ಮ ಮಕ್ಕಳ ಶಿಕ್ಷಣಕ್ಕಾಗಿ ನಮ್ಮ ಶಾಲೆಗೆ ಮಕ್ಕಳನ್ನು ದಾಖಲಿಸಿ ಶಾಲೆ ವಾಹನದ ಸೌಲಭ್ಯವಿದೆ.
9480452953 / 9113255937
9900452725

S.M.GOLD
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5150
ನೀವು ಗಿರವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವು ಬಿಡಿಸಿ ನಿಮ್ಮ ಚಿನ್ನದ ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ತೆಗೆದುಕೊಂಡು ಉಳಿದ ಹಣವನ್ನು ಕೊಡುತ್ತೇವೆ. (T&C) ಕೂಡಲೇ ಸಂಪರ್ಕಿಸಿ :
8050518881

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

FOR SALE
Muda Approved 30X40
East Facing @ 66 Lakhs
Immediate Registration and Bank Loan Available
300 Mtrs from Harsha Bar, Bogadi Main Road
Call: 98800 65122 / 77956 09173

HOUSE FOR SALE
30x75 West Facing, Near Double Tank Road, C.H.Mohalla, Rate: 1,40,000/-
9980737172

ಶ್ರಾದ್ಧ ಮಾಡಿಕೊಡಲಾಗುವುದು
ರೂ.6000/– ಮಾರ್ತಾಂಡ ಎನ್. ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ ಹತ್ತಿರ, ನಂಜನಗೂಡು. ಉಳಿದು ಕೊಳ್ಳುವ ವ್ಯವಸ್ಥೆ ಇರುತ್ತದೆ.
9632070830

ತಕ್ಷಣ ಬೇಕಾಗಿದ್ದಾರೆ
ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ FIELD EXECUTIVES-ಹುಡುಗ ಹುಡುಗಿಯರು,1- 2 yrs Experience, ಕೂಡಲೇ ಸಂಪರ್ಕಿಸಿ –
6364414499

SITE FOR SALE
40x60 Site for Sale. 60 ft Road, 2nd Phase, 4th Stage, Vijayanagar, Near Marimallappa Educational Institution Contact:SMS S.Kumar
9483504650

WANTED
FIELD SALES REPRESENTATIVE
2 Wheeler with DL Compulsory
FEMALE ACCOUNTANT
Experienced in Tally
Add: Hootagalli Industrial Area,
Ph: 9686926448

ಎಲ್ಲಾ ರೀತಿಯ ಗೊಬ್ಬರಗಳು ದೊರೆಯುತ್ತದೆ
ನಮ್ಮಲ್ಲಿ ಕೃಷಿ, ತೋಟಗಾರಿಕೆ, ಬೇವು ಮಿಶ್ರಣ ಸಾವಯವ ಗೊಬ್ಬರ, ದನದ ಗೊಬ್ಬರ, ಕೋಳಿಗೊಬ್ಬರ, ಕುರಿ ಗೊಬ್ಬರಗಳು ದೊರೆಯುತ್ತದೆ. ಡಬ್ರಿಸ್ ತುಂಬಲು ಲಾರಿ ಬಾಡಿಗೆಗೆ ದೊರೆಯುತದೆ.
ಮಹಾಲಕ್ಷ್ಮಿ ಮನ್ಯೂರ್ ಸಪ್ಲೈಸ್, ಮೈಸೂರು ಶ್ರೀನಿವಾಸ್:
7899419788

Join ASFT Fashion Design Courses
ADMISSION OPEN 2020-21
* Foundation Course
* Certification Course
* Diploma Course
* Advance Diploma Course
Online Courses Available. 50% Off on all course fee
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ಬೇಕಾಗಿದ್ದಾರೆ
ಸಮುದ್ರದ ಮೀನುಗಳು ಹಾಗೂ ಹೊಳೆಯ ಮೀನುಗಳನ್ನು ಕಟ್ಟಿಂಗ್ ಹಾಗೂ ಕ್ಲೀನಿಂಗ್ ಮಾಡುವ ನುರಿತ ಹುಡುಗರು ಬೇಕಾಗಿದ್ದಾರೆ. ಉತ್ತಮ ವೇತನ ಕೊಡಲಾಗುವುದು, ಉಚಿತ ವಸತಿ ಸೌಲಭ್ಯವಿದೆ.
9663864447
8884973666

ವಧು ಬೇಕಾಗಿದ್ದಾರೆ
ಒಕ್ಕಲಿಗ ಗೌಡ ವರನಿಗೆ, ವಯಸ್ಸು 44 ಇಂಜಿನಿಯರ್, ಸರ್ಕಾರಿ ಹುದ್ದೆ, ವಿವಾಹ ವಿಚ್ಛೇದನವಾಗಿದೆ. ಬೆಂಗಳೂರಿನಲ್ಲಿ ವಾಸ. 36 ವರ್ಷ ಒಳಗಿನ ಮಕ್ಕಳಿಲ್ಲದ ವಧು ಬೇಕಾಗಿದ್ದಾರೆ.
9113911413

ತಕ್ಷಣ ಬೇಕಾಗಿದ್ದಾರೆ
PART TIME /FULL TIME / HOME-BASED
E-CODE GAS SAFE

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC ,Dip,Degree	4 HOURS	6000/-
SSLC,PUC ,Dip,Degree	8 HOURS	16000/-

ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

SITES FOR SALE
Ready to Registrer and Also in Installments Available.
6381779015
9845187966

AFFIDAVIT
I, Ameerul Shabaz S/o N R Mohammed Ghouse R/a Mandya Road, Haneef Mohalla, Opp Haneef Masjid, Nagamangala, Mandya, Karnataka-571432 in my Daughter's passport bearing No.K2109636 daguhter's name & my name was wrongly mentioned as Khansa Zufi & Ameerul Shahbaz. I submit on oath that my name and my daughter's correct name is Ameerul Shabaz and Qansa Zufi sworn in front of Notary Akbar Shariff Dated: 10/12/2021. Sd/- Ameerul Shabaz

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

WANTED
● SERVICE TECHNICIAN ● HELPER ● WATER WASH ● TELECALLING, ● SALES EXECUTIVE ● DIRECT MARKETING
WALK IN INTERVIEW
Date : 09.04.2022
Time : 11am To 3pm
VISHNU MOTORS
Opp.Ujjivan Bank, Near Abhishek Circle, Hebbal, Mysuru
9148572013 | 8970353332

ಟೆಲಿಕಾಲ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
ಗೋಲ್ಡ್ ಕಂಪನಿಯೊಂದಿಗೆ ಟೆಲಿಕಾಲ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಇರುತ್ತದೆ. ಹೆಚ್ಚಿನ ವಿವರಕ್ಕೆ ಕರೆಮಾಡಿ, MNM ಗೋಲ್ಡ್, ರೇನ್ಬೋ ಕಲರ್ ಲ್ಯಾಬ್ ಪಕ್ಕ, ಅಶೋಕ ರಸ್ತೆ, ಮೈಸೂರು.
9513425727

1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು
ಪ್ರತಿ ದಿನ ಚಿನ್ನಾಭರಣದ ವಹಿವಾಟಿಗೆ 1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೇರಿಸಿ ಸಂಜೆ ವಾಪಸ್ ಕೊಡಲಾಗುವುದು. ಕೊಟ್ಟಿರುವ ಹಣಕ್ಕೆ ಚಿನ್ನವನ್ನು ಸೆಕ್ಯೂರಿಟಿಯಾಗಿ ನೀಡಲಾಗುವುದು. ಸಂಪರ್ಕಿಸಿ – MNM ಗೋಲ್ಡ್ ರೇನ್ಬೋ ಕಲರ್ ಲ್ಯಾಬ್ ಪಕ್ಕ, ಅಶೋಕ ರಸ್ತೆ, ಮೈಸೂರು.
7259214732

ನಿಮ್ಮ ಚಿನ್ನಾಭರಣಕ್ಕೆ 1%ಬಡ್ಡಿ ಹಾಗೂ ಗಿರವಿ ಚಿನ್ನಾಭರಣ ಖರೀದಿ
ಯಾವುದೇ ಬ್ಯಾಂಕ್ ಫೈನಾನ್ಸ್ ಮತ್ತು ಗಿರವಿ ಅಂಗಡಿಯಿಂದ ಆಭರಣ ಬಿಡಿಸಿ, 1% ಬಡ್ಡಿಯಲ್ಲಿ ಹಣ ಸಾಲ ನೀಡಲಾಗುವುದು ಹಾಗೂ ಇಂದಿನ ಬೆಲೆಗೆ ಖರೀದಿಸಲಾಗುವುದು
ಸಂಪರ್ಕಿಸಿ – MNM ಗೋಲ್ಡ್, ರೇನ್ಬೋ ಸ್ಟುಡಿಯೋ ಪಕ್ಕ, ಅಶೋಕ ರಸ್ತೆ, ಮೈಸೂರು.
7259214732

AFFIDAVIT
I, Afshan Tarannum W/o Ameerul Shabaz R/a Mandya Road, Haneef Mohalla, Opp Haneef Masjid, Nagamangala, Mandya, Karnataka-571432 in my passport bearing No.K2101259 my husband name wrongly mentioned as Ameerul Shahbaz, I submit on oath that my husband's correct name is Ameerul Shabaz sworn in front of Notary Akbar Shariff Dated: 10/12/2021.
Sd/- Afshan Tarannum

AFFIDAVIT
I, Ameerul Shabaz S/o N R Mohammed Ghouse R/a Mandya Road, Haneef Mohalla, Opp Haneef Masjid, Nagamangala, Mandya, Karnataka-571432 in my passport bearing No.K2110214 my name wrongly mentioned as Ameerul Shahbaz, I submit on oath that my correct name is Ameerul Shabaz sworn in front of Notary Akbar Shariff Dated: 10/12/2021.
Sd/- Ameerul Shabaz

ಬೇಕಾಗಿದ್ದಾರೆ
ಸೇಲ್ಸ್ ಮ್ಯಾನೇಜರ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ಸಂಬಳ 15000/-
Ph. 9380142144
ಶಿವರಾಂಪೇಟೆ, ಮೈಸೂರು

ಕಳೆದಿದೆ
ಕೀರ್ತಿರಾಜ್. ಬಿ., ಕೆ. ಬೆಟ್ಟಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು, ಮಂಡ್ಯ, ಇವರಿಗೆ ಸೇರಿದ ಹೆಚ್.ಡಿ. ಎಫ್.ಸಿ. ಬ್ಯಾಂಕ್‌ನ ಐಡಿ ಕಾರ್ಡ್ ನಂ. 211214183300326 ಮತ್ತು ಆಧಾರ್ ಕಾರ್ಡ್ ನಂ. 254343258115 ಕಳೆದು ಹೋಗಿದೆ. ಸಿಕ್ಕಿದವರು ಸಂಪರ್ಕಿಸಿ.
Mob: 9591544114

Walk-in interview
Female Receptionist: 3 post
Qlfn: PUC + Any Degree.
Experience : Telecall good communication. *Contact:*
Mob: 9036844557

CHANGE OF NAME
I, Navya Nair, D/o. Sreejith Balagopal, residing at OMQ 8/2, 2 Air Force selection board, CV Layout, Mysore-570011, do hereby solemnly affirm & state on oath that, I have changed my name from Navya to Navya Nair on my own free will vide affidavit sworn in before Notary S. V. Nagendra on 01/04/2022. In future in all my documents, deeds dealings and all transactions whatsoever, I will sign & identified as Navya Nair
Sd/- Navya Nair

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಸಸ್ಯಹಾರಿ ಹೋಟೆಲ್‌ಗೆ
1) ದೋಸೆ ಭಟ್ಟರು–2,
2) ಆಲ್‌ರೌಂಡರ್ – 2
3) ಚಾಟ್ಸ್ ಮಾಡುವವರು–2
4) ಕೌಂಟರ್ ಬಾಯ್ಸ್ –4
5) ಕ್ಯಾಷಿಯರ್–2
9449373645

SITE FOR SALE
1) 0.28 land Varkodu Bannur Road
2) 30x40 12 Lakhs HD Kote Road
3) Bogadi Road 40x30 22 lakhs
4) 40x60 west Century Park
5) 30x40 KHB Layout attch HD Kote Road 18 lakhs
PRAKRUTHI PROPERTIES
9035990359
9538690359

30x40 HOUSE FOR RENT
Vastu Built East Face, 2 Wardrobe, Rooms, Solar, Teakwood Doors, Granite, Kitchen Showcases, Luxury House Rs.13,000/- Rent. Advance One Lakh. (Both Negotiable) #7, MIG, Laxmikanth Nagar, hebbal, Mysore. NO BROKERS
6361760880

ಹೆಸರು ಬದಲಾವಣೆ
ಮೈಸೂರುನಗರ, ಕ್ಯಾತಮಾರನಹಳ್ಳಿ, ಕೆ.ಎನ್.ಪುರ ಬಡಾವಣೆ, 9ನೇ ತಿರುವು, 507ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಮುನವರ್ (Munawar) ಎಂಬ ನಾನು ನನ್ನ ಹೆಸರನ್ನು ಸೈಯದ್ ಅಹಮ್ಮದ್ (Syed Ahammed) ಎಂಬುದಾಗಿ ನೋಟರಿ ನರಸೇಗೌಡರ ಮುಂದೆ ದಿ. 5/4/22 ರಂದು ಬದಲಾಯಿಸಿಕೊಂಡಿರುತ್ತೇನೆ.
ಸಹಿ/– ಸೈಯದ್ ಅಹಮ್ಮದ್ (Syed Ahammed)

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 45 ವರ್ಷ ಒಳಪಟ್ಟು. ವೇತನ: 18000/–, ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ / ಪಿಯುಸಿ. ಅಗತ್ಯ ವಿವರಗಳೊಂದಿಗೆ ಸಂಪರ್ಕಿಸಿ:– #380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು.
9513999755

ಮನೆ ಮಾರಾಟಕ್ಕಿದೆ
30x40 N/F, 2BHK, G/F, 2BHK, 1st Floor, Wardrose, Srirampura 2nd Stage, Mysore, Near Devayyanahundi (ದೇವಯ್ಯನಹುಂಡಿ) Main Road
7899722308 / 9448738675

WANTED
Security Field Officer (Male Candidate)
Freshers can also apply with good communication Skill Interest candidates send your CV to E-mail: nimishpvtltd@gmail.com
9513999755

WANTED
MALE CANDIDATE ONLY
* House Keeping
* Receptionist with Cashier
* North Indian Assistant Cook
* Vegetable Cutting
At reputed Hotel in Mysore
8217737552

WANTED
OFFICE ASSISTANT
Qualification: Any Degree, Communication: Kannada, English, Preferably- Female Candidate,
Salary: 9000 -12000
(10 am to 5 pm)
9090900099

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ–ಮೊದಲು ಬಂದವರಿಗೆ ಆದ್ಯತೆ, ವಿದ್ಯಾರ್ಹತೆ:– ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

ಸೈಟುಗಳು ಮಾರಾಟಕ್ಕಿವೆ
MUDA Approved Bank Loan Available ಶ್ರೀನಗರ ಪಕ್ಕ ಮತ್ತು ಶ್ರೀರಾಂಪುರ ರಿಂಗ್ ರೋಡ್
8050345574

ಮನೆ ಬಾಡಿಗೆಗೆ ಇದೆ
ಉತ್ತರ ದಿಕ್ಕು, ನಂ.98, 9ನೇ ಕ್ರಾಸ್, ನವಿಲು ರಸ್ತೆ, ಕುವೆಂಪುನಗರ, ಮೈಸೂರು–23
7829226226

ಶುಭಲಗ್ನಂ.ಕಾಂ
ಕರ್ನಾಟಕದ ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು, ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ. : ಗುರೂಜಿ
9449408551
6361740552
shubalagnam.com

ಸುವರ್ಣ ಯಾತ್ರ
8/5/22 ಕಾಶಿ ಪ್ರವಾಸ 5 ದಿನಗಳು ವಿಮಾನದಲ್ಲಿ ಕಾಶಿ, ಗಯಾ, ಬುದ್ಧಗಯಾ, ಪ್ರಯಾಗರಾಜ್ ಇತರೆ. 26/04/22 ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು ವಿಮಾನದಲ್ಲಿ ಪಶುಪತಿನಾಥ, ಮನೋಕಾಮನ, ಕಠ್ಮಂಡು, ಪೋಕ್ರಾ ಹಾಗೂ ಇತರೆ ಸ್ಥಳಗಳು
8970949434
9019462508

ಬೇಕಾಗಿದ್ದಾರೆ
ಜೆರಾಕ್ಸ್ ಶಾಪ್‌ನಲ್ಲಿ ಕೆಲಸ ಮಾಡುವವರು ಬೇಕಾಗಿದ್ದಾರೆ. ಸ್ಥಳ: ವಿಜಯಶ್ರೀಪುರ ಸರ್ಕಲ್, ವಿಜಯನಗರ 3ನೇ ಹಂತ, ಪ್ರೇಮ ಎಂಟರ್ ಪ್ರೈಸಸ್
9148293079

WANTED
1) Graduate English Teacher-1, English Major (Aided Vacancy)
2) English Teacher with PUC D.Ed-1,
SPSVS, 2nd Stage, Srirampura, Mysore
9448596542

SITE FOR SALE
ಜ್ಞಾನಭಾರತಿ ಲೇಔಟ್, 2ನೇ ಹಂತ, ದಡದಹಳ್ಳಿ, ಮೈಸೂರು, ಪೂರ್ವಾಭಿಮುಖಿ, ಜೆ.ಪಿ.ನಗರದ ರಿಂಗ್ ರಸ್ತೆಯಿಂದ ಕೇವಲ 6 ಕಿ.ಮೀ ದೂರ, ಮುಡಾ ಖಾತೆ ಆಗಿದೆ 30x40 ಅಳತೆ
9342123373

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸ ಗುಡಿಸಲು ಮತ್ತು ಅಡುಗೆ ಸಹಾಯಕ ಕೆಲಸಗಳಿಗೆ ಆರೋಗ್ಯವಂತ ಮಹಿಳೆ ಒಬ್ಬರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 8 ರಿಂದ ಸಂಜೆ 6, ಸಂಬಳ ತಿಂಗಳಿಗೆ 6000/ – ಸಂಪರ್ಕಿಸಿ, ಇಂಗ್ಲೀಷ್ ಮೀಡಿಯಮ್, ರಾಜೇಂದ್ರನಗರ, ಮೈಸೂರು – 570007
9243580672

2 SITES FOR SALE
(30x50) @ Gomatagiri (Near Manuganahalli) Mysore - Yelawala Road, DTCP Approved 9 Lacs
9538839926

ಲಪ್ಪಿ ಒಕ್ಕಲಿಗರ ಮ್ಯಾಟ್ರಿಮೋನಿ
ಕುವೆಂಪುನಗರ, ಮೈಸೂರು BE/ M.Tech / MBA / MA / M.Com / M.Sc /M.Ed / MBBS / MD / MS ಯಾವುದೇ ಡಿಗ್ರಿ ಮೊದಲನೇ 2ನೇ ವಿವಾಹಕ್ಕಾಗಿ ನೋಂದಣಿ ಮಾಡಿಕೊಳ್ಳಬಹುದು.
9591163666 / 7975441365
0821-4264402

ತಕ್ಷಣ ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಲೇಡಿಸ್ ಬೇಕಾಗಿದ್ದಾರೆ. ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ ಅಕ್ಬರ್ ರೋಡ್ ಮಂಡಿ ಮೊಹಲ್ಲ
9686990653 / 9945857718

ಉಚಿತ ಉಚಿತ ಉಚಿತ
25Kg BT ರೈಸನ್ನು ಖರೀದಿಸಿದರೆ 5Kg ಬ್ರಾಂಡೆಡ್ ಗೋದಿಹಿಟ್ಟು, 2Kg ಸಕ್ಕರೆ, 1Kg ಫೈನ್ ತೊಗರಿಬೇಳೆ ಉಚಿತ
ಬೆಲೆ ರೂ 1300/- ಮಾತ್ರ (ಷರತ್ತು ಅನ್ವಯ)
ಸನ್‌ಶೈನ್ ಟ್ರೇಡರ್ಸ್, ಶಿವರಾಂಪೇಟೆಯ ಮೋರ್ ಹತ್ತಿರ
9206470833 ಮೈಸೂರು

GROUND FLOOR ಮನೆ ಭೋಗ್ಯಕ್ಕೆ ದೊರೆಯುತ್ತದೆ.
ಮೈಸೂರು, ಶ್ರೀರಾಂಪುರ 2ನೇ ಹಂತ, ಕಂದಾಯನಗರ, 1ನೇ ಹಂತ, ರಿಂಗ್ ರಸ್ತೆಯ ಪಕ್ಕದಲ್ಲಿ ಕೆಳ ಅಂತಸ್ತು 30x40 ಮನೆ ಪೂರ್ವ ಬಾಗಿಲು 2 Bedrooms (Attached), Living Room, Italian Kitchen, CCTV, Solar, Geyser, Mosquito net and Doors ಕಬಿನಿ ನೀರಿನ ಸೌಲಭ್ಯವುಳ್ಳ ಮನೆ 12 ಲಕ್ಷಕ್ಕೆ ಭೋಗ್ಯಕ್ಕೆ ದೊರೆಯುತ್ತದೆ. ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಮಾಲೀಕರಿಗೆ ಕರೆ ಮಾಡಿ.
8310336144
(Brokers Excuse)

ಮನೆ ಬಾಡಿಗೆಗೆ ಇದೆ
ನೆಲ ಮಹಡಿಯಲ್ಲಿರುವ (Ground Floor) ಒಂದು ರೂಮಿನ ಮನೆ ಬಾಡಿಗೆಗೆ ಇದೆ. ವಿದ್ಯಾರಣ್ಯಪುರಂ, ಮೈಸೂರು (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ:
9844059138
9880961150

ಬೇಕಾಗಿದ್ದಾರೆ
1) ಶಾಲಾ ವಾಹನಕ್ಕೆ ಚಾಲಕರು (ಸ್ಕೂಲ್ ಬಸ್ ಡ್ರೈವರ್) ಬೇಕಾಗಿದ್ದಾರೆ.
2) ಸ್ಕೂಲ್ ಆಯಾ ಹಾಗೂ ಅಟೆಂಡರ್ ಬೇಕಾಗಿದ್ದಾರೆ.
9900038365

ಬೇಕಾಗಿದ್ದಾರೆ
ನ್ಯೂ ಶಾರದ ಅನೆಕ್ಸ್, ವಿಕ್ರಾಂತ್ ರೇಡಿಯಲ್ ಪ್ಲಾಂಟ್ ಎದುರು ನಿಯರ್ ರಿಂಗ್ ರೋಡ್.
1) ಕ್ಯಾಪ್ಟನ್, 2) ಸ್ಟೀವರ್ಡ್ 3) ಕ್ಲೀನರ್
ಅನುಭವ ಉಳ್ಳವರಿಗೆ ಮಾತ್ರ ಆದ್ಯತೆ
9880185785 / 9844465909

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೇ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟಾಂಡ್, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ತಿ.ನರಸೀಪುರ, ವರುಣಾದಲ್ಲಿ ಬಿಜೆಪಿ ಸಂಸ್ಥಾಪನಾ ದಿನ ಆಚರಣೆ




ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಬುಧವಾರ ತಿ.ನರಸೀಪುರ ಹಾಗೂ ವರುಣಾದಲ್ಲಿ ಶೋಭಾಯಾತ್ರೆ ನಡೆಯಿತು.

ತಿ.ನರಸೀಪುರ,ಏ.6(ಎಸ್‌ಕೆ)–ತಿ.ನರಸೀಪುರ ಪಟ್ಟಣ ಹಾಗೂ ವರುಣಾ ಗ್ರಾಮದಲ್ಲಿ ಶೋಭಾಯಾತ್ರೆ ಮೂಲಕ ಬಿಜೆಪಿ ಸಂಸ್ಥಾಪನಾ ದಿನ ಆಚರಿಸಲಾಯಿತು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಹಮ್ಮಿಕೊಂಡಿದ್ದ ಶೋಭಾಯಾತ್ರೆಯಲ್ಲಿ ಮಾತನಾಡಿದ ಮಾಜಿ ಶಾಸಕ ಡಾ.ಎನ್.ಎಲ್.ಭಾರತೀಶಂಕರ್, ಬಿಜೆಪಿ ಸ್ಥಾಪನೆಯಾಗಿ ಇಂದಿಗೆ 42 ವರ್ಷಗಳಾಗಿವೆ. ಭಾರತದಲ್ಲಿ ಸ್ವಾತಂತ್ರ್ಯ ನಂತರ ಅಸ್ತಿತ್ವಕ್ಕೆ ಬಂದಿರುವ ಯಾವುದೇ ಪಕ್ಷಗಳು ಇಷ್ಟು ಕಡಿಮೆ ಅವಧಿಯಲ್ಲಿ ವ್ಯಾಪಕವಾಗಿ ಬೆಳೆದಿಲ್ಲ. ಈ ನಿಟ್ಟಿನಲ್ಲಿ ಬಿಜೆಪಿ ಮಾತ್ರ ಇಂದು ವಿಶ್ವದ ಅತ್ಯಂತ ದೊಡ್ಡ ಸಂಘಟನೆಯಾಗಿದೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಬಿಜೆಪಿ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿದರು. ಇದಕ್ಕೂ ಮೊದಲು ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಿಂದ ಗಣಪತಿ ದೇವಸ್ಥಾನದ ಮುಂಭಾಗದ ವರೆಗೆ ಶೋಭಾಯಾತ್ರೆ ನಡೆಯಿತು. ಬಳಿಕ ಬೃಹತ್ ಎಲ್‌ಇಡಿ ಪರದೆಯಲ್ಲಿ ಕಾರ್ಯ ಕರ್ತರು ಪ್ರಧಾನಿ ಮೋದಿ ಭಾಷಣ ವೀಕ್ಷಿಸಿದರು.

ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರತಾಪ್, ಉಪಾಧ್ಯಕ್ಷ ಕೆಂಡಗಣ್ಣಪ್ಪ ದಾಸಯ್ಯ, ಕರೋಹಟ್ಟಿ ಮಹದೇವಯ್ಯ, ಬಸವರಾಜು, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಸಿದ್ದಮಲ್ಲಪ್ಪ(ಕಿಟ್ಟಿ), ಜಿಲ್ಲಾ ಗ್ರಾಮಾಂತರ ಎಸ್‌ಸಿ ಕಾರ್ಯದರ್ಶಿ ಸಾಮ್ರಾಟ್ ಸುಂದ ರೇಶನ್, ಪಂಚಿಮೂರ್ತಿ, ಜಯಣ್ಣ ಸಿದ್ದರಾಜು, ಶಿವಕುಮಾರ್, ಶಿವಶಂಕರ್, ಶಿವಕುಮಾರ್ ಮಹೇಶ್, ದಯಾನಂದ ಪಟೇಲ್, ಎನ್. ಲೋಕೇಶ್, ಮಹಿಳಾ ಮೋರ್ಚಾ ಅಧ್ಯಕ್ಷೆ ಸುಜಾತಾ ಇದ್ದರು.

ವರುಣಾ ವರದಿ: ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವರುಣಾ ಗ್ರಾಮದಲ್ಲಿ ಕ್ಷೇತ್ರ ಬಿಜೆಪಿಯಿಂದ ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಶೋಭಾಯಾತ್ರೆ ನಡೆಯಿತು.

ರಾಜ್ಯ ಪ್ರವಾಸೋದ್ಯಮ ನಿಗಮ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ವರುಣಾ ಬಿಜೆಪಿ ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ಮಾತನಾಡಿದರು. ಇದಕ್ಕೂ ಮೊದಲು ಗ್ರಾಮದ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಶೋಭಾಯಾತ್ರೆ ನಡೆಸಲಾಯಿತು. ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕಾ.ಪು.ಸಿದ್ದವೀರಪ್ಪ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ, ಎಸ್‌ಸಿ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ, ರೈತ ಮೋರ್ಚಾ ಅಧ್ಯಕ್ಷ ನಂಜುಂಡಸ್ವಾಮಿ, ಎಸ್‌ಟಿ ಮೋರ್ಚಾ ಮಾಜಿ ಅಧ್ಯಕ್ಷ ರಂಗೂನಾಯಕ, ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣಶೆಟ್ಟಿ, ತೋಟದಪ್ಪ ಬಸವರಾಜು, ಯುವ ಮೋರ್ಚಾ ಅಧ್ಯಕ್ಷ ಮೋಹನ್, ಮಹಿಳಾ ಮೋರ್ಚಾ ಅಧ್ಯಕ್ಷೆ ಪದ್ಮಮ್ಮ, ನಾಗಮ್ಮ, ಶ್ರೀಧರ್, ಗ್ರಾಪಂ ಸದಸ್ಯ ಮಹಾದೇವಸ್ವಾಮಿ, ಶಿವರಾಜ್, ಪ್ರಕಾಶ್, ಚಂದ್ರಶೇಖರ್, ಮಂಜುನಾಥ್, ಸಂದೀಪ್, ಮಂಜು, ಉಸ್ತುವಾರಿ ರಾಜಕುಮಾರ್ ಮತ್ತಿತರರಿದ್ದರು.

ಬೈಕ್–ಗೂಡ್ಸ್ ಆಟೋ ಡಿಕ್ಕಿ: ಇಬ್ಬರು ಯುವಕರು ಸಾವು

ಪಿರಿಯಾಪಟ್ಟಣ, ಏ.6 (ವೀರೇಶ್)–ಬೈಕ್ ಹಾಗೂ ಗೂಡ್ಸ್ ಆಟೋ ನಡುವೆ ಡಿಕ್ಕಿ ಸಂಭವಿಸಿ ಇಬ್ಬರು ಯುವಕರ ಸಾವನ್ನಪ್ಪಿರುವ ಘಟನೆ ಬುಧವಾರ ರಾತ್ರಿ ಪಟ್ಟಣದ ಗೋಣಿಕೊಪ್ಪ ರಸ್ತೆಯಲ್ಲಿ ನಡೆದಿದೆ.

ತಾಲೂಕಿನ ಅಬ್ಬಳತಿ ಗ್ರಾಮದ ಪುನೀತ್ (23) ಹಾಗೂ ಮಾಲಂಗಿಯ ನಂದೀಶ್ (25) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಮೃತರಿಬ್ಬರು ಪಿರಿಯಾಪಟ್ಟಣದಿಂದ ಗ್ರಾಮಕ್ಕೆ ಬೈಕ್(ಕೆಎ09, ಇಕ್ಯೂ 1677)ನಲ್ಲಿ ತೆರಳುತ್ತಿದ್ದರು ಎನ್ನಲಾಗಿದೆ. ಈ ವೇಳೆ ಪಟ್ಟಣದ ಗೋಣಿಕೊಪ್ಪ ರಸ್ತೆಯ ಗೌಡ ಸಮಾಜದ ಬಳಿ ಎದುರಿಗೆ ಬಂದ ಗೂಡ್ಸ್ ಆಟೋಗೆ ಬೈಕ್ ಮುಖಾಮುಖಿ ಡಿಕ್ಕಿಯಾಗಿ ದುರ್ಘಟನೆ ಸಂಭವಿಸಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ ಪಟ್ಟಣ ಠಾಣೆ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ಪಟ್ಟಣ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಅಪಘಾತದಿಂದ ಬೈಕ್ ನುಜ್ಜುಗುಜ್ಜಾಗಿದ್ದು, ಗೂಡ್ಸ್ ಆಟೋ ಚಾಲಕ ಪರಾರಿಯಾಗಿದ್ದಾನೆ.

ಹೃದಯಾಘಾತ: 'ಡಿ'ಗ್ರೂಪ್ ನೌಕರ ಸಾವು

ಹುಣಸೂರು, ಏ.6(ಕೆಕೆ)–ಕರ್ತವ್ಯ ನಿರ್ವಹಣೆ ವೇಳೆ ಹೃದಯಾಘಾತದಿಂದ



'ಡಿ' ಗ್ರೂಪ್ ನೌಕರನೋರ್ವ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ. ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ನಿವಾಸಿ ನಿಂಗರಾಜ್ ಸಾವನ್ನಪ್ಪಿದವರು. ಈತ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುವ ವೇಳೆ ಶೌಚಾಲಯಕ್ಕೆ ಹೋಗಿದ್ದಾರೆ. ಅಲ್ಲಿ ಹೃದಯಾಘಾತ ಸಂಭವಿಸಿ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ನಿಂಗರಾಜ್ ನಿಧನಕ್ಕೆ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸರ್ವೇಶ್‌ರಾಜ್ ಅರಸ್, ಡಾ.ಉಮೇಶ್, ಡಾ.ಸಚಿದಾನಂದಮೂರ್ತಿ, ಡಾ.ಯೋಗೇಶ್ ಹಾಗೂ ಸಿಬ್ಬಂದಿ ವರ್ಗ ಸಂತಾಪ ಸೂಚಿಸಿದ್ದಾರೆ.

ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ

ಶಾಸಕ ಬಿ.ಹರ್ಷವರ್ಧನ್ ವಿಶ್ವಾಸ



ಮಲ್ಕುಂಡಿ, ಏ.6(ಚನ್ನಪ್ಪ)–ಜನಪರ ಯೋಜನೆಗಳ ಮೂಲಕ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಉತ್ತಮ ಆಡಳಿತ ನೀಡುತ್ತಿದೆ. ಇದು ರಾಜ್ಯದ ಜನತೆಗೆ ಗೊತ್ತಿದ್ದು, ಮುಂಬರುವ ಚುನಾವಣೆಯಲ್ಲೂ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ಶಾಸಕ ಬಿ.ಹರ್ಷವರ್ಧನ್ ವಿಶ್ವಾಸ ವ್ಯಕ್ತಪಡಿಸಿದರು.

ನಂಜನಗೂಡು ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದಲ್ಲಿ ಆಯೋಜಿಸಿದ ಬಿಜೆಪಿ ಸಂಸ್ಥಾಪನಾ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿ ಗ್ರಾಮಗಳಿಗೂ ಮೂಲ ಸೌಕರ್ಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಅಲ್ಲದೆ ಮಹಿಳೆಯರು, ಬಡವರು, ರೈತರ ಅಭಿವೃದ್ಧಿ ದೃಷ್ಟಿಯಿಂದ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ಬಡಕುಟುಂಬಕ್ಕೂ ಉಚಿತ ಅಕ್ಕಿ ನೀಡಲು ಸರ್ಕಾರ ಮುಂದಾಗಿದೆ ಎಂದ ಹರ್ಷವರ್ಧನ್, ಈ ಹಿಂದೆ ಇದ್ದಂತಹ ಕಾಂಗ್ರೆಸ್ ಸರ್ಕಾರ ಜನಪರ ಯೋಜನೆಗಳನ್ನು ಜಾರಿ ಮಾಡದೆ ದುರಾಡಳಿತ ನಡೆಸಿತು ಎಂದು ಆರೋಪಿಸಿದರು.

ಬಿಜೆಪಿ ಸರ್ಕಾರ ಬಂದ ನಂತರ ಪ್ರತಿಯೊಬ್ಬ ಕಿಸಾನ್ ಸನ್ಮಾನ್ ಯೋಜನೆ ಮೂಲಕ ರೈತರ ಖಾತೆಗೆ ನೇರವಾಗಿ ಹಣ ನೀಡಲಾಗುತ್ತಿದೆ. ಇಂತಹ ಯೋಜನೆಯನ್ನು ಜನರಿಗೆ ತಲುಪಿಸುವ ಕೆಲಸ ನಮ್ಮ ಕಾರ್ಯಕರ್ತರ ಜವಾಬ್ದಾರಿಯಾಗಿದೆ. ರಾಜ್ಯ ಸರ್ಕಾರ ನನಗೆ ಹೆಚ್ಚಿನ ಅನುದಾನ ನೀಡಿದ್ದು, ನಾನು ನನ್ನ ಅವಧಿಯಲ್ಲಿ ಕ್ಷೇತ್ರದ ಪ್ರತಿ ಗ್ರಾಮದ ಎಲ್ಲಾ ಸಮುದಾಯದ ಜನಾಂಗಕ್ಕೆ ಪಕ್ಷಭೇದ ಮರೆತು ಅನುದಾನ ನೀಡಿದ್ದೇನೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಇನ್ನೂ ಹೆಚ್ಚಿನ ಅಭಿವೃದ್ಧಿಪಡಿಸಲಾಗುವುದು ಎಂದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ರಾಜ್ಯ ಎಸ್ಟಿ ಮೋರ್ಚಾ ಉಪಾಧ್ಯಕ್ಷ ಚಿಕ್ಕರಂಗನಾಯಕ, ಪ್ರಧಾನ ಕಾರ್ಯದರ್ಶಿ ವಳಗರೆ ಪುಟ್ಟಸ್ವಾಮಿ, ಮಹಿಳಾ ಘಟಕದ ಮೋರ್ಚಾ ಅಧ್ಯಕ್ಷೆ ಕೋಮಲಾ, ಶಕ್ತಿ ಕೇಂದ್ರದ ಅಧ್ಯಕ್ಷರಾದ ಕಣೆನೂರು ಪರಶಿವಮೂರ್ತಿ, ನಾಗರಾಜು, ಗ್ರಾಪಂ ಅಧ್ಯಕ್ಷರಾದ ರತ್ನಮ್ಮ, ರಂಗರಾಮು, ಮಹದೇವಸ್ವಾಮಿ, ಮುಖಂಡರಾದ ಶಿರಮಳ್ಳಿ ಮಹದೇವಸ್ವಾಮಿ, ಎಂ.ಪುಟ್ಟಸ್ವಾಮಿ, ಎಸ್.ಬಸವರಾಜ್, ಶ್ಯಾಮ್ ಪಾಟೀಲ್, ಶಿವರುದ್ರ, ಹೆಚ್.ಎಂ.ಕುಮಾರ್, ಹೆಡತಲೆ ಸಿದ್ದರಾಜು, ಸಣ್ಣಯ್ಯ ಸೇರಿದಂತೆ ಪ್ರಮುಖರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಮಾರ್ಬಿಯಸ್ (ಇಂ): ಬೆ.10.45ಕ್ಕೆ, ರಾ.9.50ಕ್ಕೆ, ಜೇಮ್ಸ್ (ಕ): ಮ.1ಕ್ಕೆ, ಅಟ್ಯಾಕ್ (ಹಿಂ): ಮ.3.55ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಸಂ.6.20ಕ್ಕೆ.
- ಸ್ಕ್ರೀನ್ 2 ಬಾಡಿಗಾಡ್ (ಕ): ಬೆ.10.45ಕ್ಕೆ, ತಲೆದಂಡ (ಕ): ಮ.1.20ಕ್ಕೆ, ಜೇಮ್ಸ್ (ಕ): ಸಂ.4ಕ್ಕೆ, ರಾ.7ಕ್ಕೆ, ಅಟ್ಯಾಕ್ (ಹಿಂ): ರಾ.10ಕ್ಕೆ.
- ಸ್ಕ್ರೀನ್ 3 ಹೋಂ ಮಿನಿಸ್ಟರ್ (ಕ): ಬೆ.10.35ಕ್ಕೆ, ಸಂ.4.15ಕ್ಕೆ, ಲೋಕಲ್ ಟ್ರೈನ್ (ಕ): ಮ.1.30ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6.45ಕ್ಕೆ, ಆರ್‌ಆರ್‌ಆರ್ (2ಡಿ)(ಹಿಂ): ರಾ.10ಕ್ಕೆ.
- ಸ್ಕ್ರೀನ್ 4 ಆರ್‌ಆರ್‌ಆರ್ (2ಡಿ)(ಕ): ಬೆ.10.55ಕ್ಕೆ, ಆರ್‌ಆರ್‌ಆರ್ (2ಡಿ)(ತೆ): ಮ.2.30ಕ್ಕೆ, ಸಂ.6.15ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1 ಆರ್‌ಆರ್‌ಆರ್ (ಹಿಂ): ಬೆ.9.30ಕ್ಕೆ, ಅಟ್ಯಾಕ್ (ಹಿಂ): ಮ.1.10ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಮ.3.55ಕ್ಕೆ, ಮಾರ್ಬಿಯಸ್ (ಇಂ): ರಾ.7.35ಕ್ಕೆ, ಆರ್‌ಆರ್‌ಆರ್ (3ಡಿ)(ಹಿಂ): ರಾ.10ಕ್ಕೆ.
- ಸ್ಕ್ರೀನ್ 2 ಮಾರ್ಬಿಯಸ್ (ಇಂ): ಬೆ.9.35ಕ್ಕೆ, ಆರ್‌ಆರ್‌ಆರ್ (ತೆ): ಬೆ.11.55ಕ್ಕೆ, ಸಂ.6.10ಕ್ಕೆ, ಬಾಡಿಗಾಡ್ (ಕ): ಮ.3.35ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ರಾ.9.50ಕ್ಕೆ.
- ಸ್ಕ್ರೀನ್ 3 ಜೇಮ್ಸ್ (ಕ): ಬೆ.9.50ಕ್ಕೆ, ಮ.3.45ಕ್ಕೆ, ರಾ.9.40ಕ್ಕೆ, ಮಾರ್ಬಿಯಸ್ (ಇಂ): ಮ.1ಕ್ಕೆ, ಅಟ್ಯಾಕ್ (ಹಿಂ): ಸಂ.6.55ಕ್ಕೆ.
- ಸ್ಕ್ರೀನ್ 4 ಹೋಂ ಮಿನಿಸ್ಟರ್ (ಕ): ಬೆ.10.10ಕ್ಕೆ, ಸಂ.6.45ಕ್ಕೆ, ತಲೆದಂಡ (ಕ): ಮ.3.55ಕ್ಕೆ, ಲೋಕಲ್ ಟ್ರೈನ್ (ಕ): ಮ.12.55ಕ್ಕೆ, ಆರ್‌ಆರ್‌ಆರ್ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ಲೋಕಲ್ ಟ್ರೈನ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಜೇಮ್ಸ್ (ಕ): ಮ.1.15ಕ್ಕೆ, ಅಟ್ಯಾಕ್ (ಹಿಂ): ರಾ.7ಕ್ಕೆ, ಆರ್‌ಆರ್‌ಆರ್ (2ಡಿ) (ತೆ): ರಾ.9.30ಕ್ಕೆ.
- ಸ್ಕ್ರೀನ್ 2 ಬಾಡಿಗಾಡ್ (ಕ): ಬೆ.10.30ಕ್ಕೆ, ಆರ್‌ಆರ್‌ಆರ್ (ತೆ): ಮ.12.40ಕ್ಕೆ, ಹೋಂ ಮಿನಿಸ್ಟರ್ (ಕ): ಸಂ.4.05ಕ್ಕೆ, ಜೇಮ್ಸ್ (ಕ): ಸಂ.6.35ಕ್ಕೆ, ಅಟ್ಯಾಕ್ (ಹಿಂ): ರಾ.9.30ಕ್ಕೆ
- ಸ್ಕ್ರೀನ್ 3 ಆರ್‌ಆರ್‌ಆರ್ (2ಡಿ)(ಕ): ಬೆ.10.30ಕ್ಕೆ, ಹೋಂ ಮಿನಿಸ್ಟರ್ (ಕ): ಮ.2ಕ್ಕೆ, ಮಾರ್ಬಿಯಸ್ (ಇಂ): ಸಂ.4.30ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ಸಂ.6.35ಕ್ಕೆ,
- ಸ್ಕ್ರೀನ್ 4 ಹೋಂ ಮಿನಿಸ್ಟರ್ (ಕ): ಬೆ.10.30ಕ್ಕೆ, ತಲೆದಂಡ (ಕ): ಮ.1ಕ್ಕೆ, ಮನ್ಮಥ ಲೀಲೈ(ತ): ಮ.3.45ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6ಕ್ಕೆ, ಜೇಮ್ಸ್ (ಕ): ರಾ.9.15ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಟ್ಯಾಕ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು

ಮುಂಬೈ ವಿರುದ್ಧ ಕೆಕೆಆರ್‌ಗೆ 5 ವಿಕೆಟ್ ಗೆಲುವು



ಪುಣೆ, ಏ.6– ಪ್ಯಾಟ್‌ಕಮಿನ್ಸ್ ಹಾಗೂ ವೆಂಕಟೇಶ್ ಅಯ್ಯರ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ 5 ವಿಕೆಟ್‌ಗಳ ಗೆಲುವು ಸಾಧಿಸಿತು. ಇದರೊಂದಿಗೆ ಆಡಿದ 4 ಪಂದ್ಯದಲ್ಲಿ 3ರಲ್ಲಿ ಗೆಲುವು ದಾಖಲಿಸಿದ ಶ್ರೇಯಸ್ ಅಯ್ಯರ್ ನೇತೃತ್ವದ ಕೆಕೆಆರ್ ಅಂಕಪಟ್ಟಿಯಲ್ಲಿ ಅಗ್ರ ಸ್ಥಾನಕ್ಕೇರಿತು. ಇತ್ತ ಮುಂಬೈ ಇಂಡಿಯನ್ಸ್ ಹ್ಯಾಟ್ರಿಕ್ ಸೋಲು ಅನುಭವಿಸಿದೆ.

ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟೂರ್ನಿಯ 14ನೇ ಪಂದ್ಯದಲ್ಲಿ ಮುಂಬೈ ನೀಡಿದ 162ರನ್‌ಗಳ ಗುರಿಯನ್ನು ಬೆನ್ನತ್ತಿದ ಕೋಲ್ಕತ್ತಾ ನೈಟ್ ರೈಡರ್ಸ್ ಆರಂಭಿಕ ಆಘಾತಕ್ಕೆ ಒಳಗಾಯಿತು. ತಂಡದ ಭರವಸೆಯ ಆಟಗಾರರಾದ ಅಂಜಿಕ್ಯ ರಹಾನೆ 7, ಶ್ರೇಯಸ್ ಅಯ್ಯರ್ 10, ಸ್ಯಾಮ್ ಬಿಲ್ಲಿಂಗ್ಸ್ 17, ನಿತಿಶ್ ರಾಣಾ 8, ಆ್ಯಂಡ್ರೆ ರಸೆಲ್ 11ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ನಿಧಾನವಾಗಿ ಇನ್ನಿಂಗ್ಸ್ ಕಟ್ಟಿದ ವೆಂಕಟೇಶ್ ಅಯ್ಯರ್ 41 ಎಸೆತಗಳಲ್ಲಿ 6 ಬೌಂಡರಿ ಹಾಗೂ ಒಂದು ಸಿಕ್ಸರ್‌ನಿಂದ ಅಜೇಯ 50ರನ್ ಗಳಿಸಿದರು. ಕೊನೆಯಲ್ಲಿ ಬಿರುಸಿನ ಬ್ಯಾಟಿಂಗ್ ಮಾಡಿದ ಪ್ಯಾಟ್ ಕಮಿನ್ಸ್ ಕೇವಲ 15 ಎಸೆತಗಳಲ್ಲಿ 4 ಬೌಂಡರಿ ಹಾಗೂ 6 ಭರ್ಜರಿ ಸಿಕ್ಸರ್‌ನಿಂದ ಅಜೇಯ 56ರನ್ ಗಳಿಸಿದರು. ಅಂತಿಮವಾಗಿ ಕೋಲ್ಕತ್ತಾ 16 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 162ರನ್ ಗಳಿಸಿ ಗೆಲುವಿನ ಸಂಭ್ರಮ ಆಚರಿಸಿದರು. ಬೌಲಿಂಗ್‌ನಲ್ಲಿ ಮುಂಬೈ ಇಂಡಿಯನ್ಸ್ ಪರವಾಗಿ ಮುರುಗನ್ ಅಶ್ವಿನ್, ಟೈಮಲ್ ಮಿಲ್ಸ್ ತಲಾ 2, ಡ್ಯಾನಿಲ್ ಸ್ಯಾಮ್ಸ್ ಒಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 161 ರನ್ ಕಲೆಹಾಕಿತು. ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಮೊತ್ತ 55 ರನ್ ಆಗುವಷ್ಟರಲ್ಲಿ ಪ್ರಮುಖ ಮೂವರು ಬ್ಯಾಟ್ಸ್‌ಮನ್‌ಗಳಾದ ನಾಯಕ ರೋಹಿತ್ ಶರ್ಮಾ 3, ಇಶಾನ್‌ಕಿಶನ್ 14 ಹಾಗೂ ಡೆವೆಲ್ಡ್ ಬ್ರೆವಿಸ್ 29ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಜೊತೆಯಾದ ಸೂರ್ಯಕುಮಾರ್ ಯಾದವ್ ಹಾಗೂ ತಿಲಕ್ ವರ್ಮಾ 4ನೇ ವಿಕೆಟ್‌ಗೆ 83 ರನ್ ಕಲೆಹಾಕಿದರು. ಹೀಗಾಗಿ ಮುಂಬೈ ತಂಡ ಅಲ್ಪ ಮೊತ್ತಕ್ಕೆ ಕುಸಿಯುವ ಆಘಾತದಿಂದ ಪಾರಾಯಿತು.

36 ಎಸೆತಗಳಲ್ಲಿ 5 ಬೌಂಡರಿ ಹಾಗೂ 2 ಸಿಕ್ಸರ್‌ನಿಂದ 52ರನ್ ಗಳಿಸಿದ್ದ ಸೂರ್ಯಕುಮಾರ್ ಯಾದವ್ ಇನ್ನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ಈ ವೇಳೆ ಕ್ರೀಸ್‌ಗೆ ಬಂದ ಕೀರನ್ ಪೊಲಾರ್ಡ್ 5 ಎಸೆತ ಗಳಲ್ಲಿ ಭರ್ಜರಿ 3 ಸಿಕ್ಸರ್‌ನಿಂದ 22ರನ್ ಗಳಿಸಿ, ತಂಡದ ಮೊತ್ತ 150ರ ಗಡಿ ದಾಟಿಸಿದರು. ಉಳಿದಂತೆ ತಿಲಕ್ ವರ್ಮಾ 38ರನ್ ಗಳಿಸಿ ಅಜೇಯರಾಗಿ ಉಳಿದರು. ಬೌಲಿಂಗ್‌ನಲ್ಲಿ ಕೋಲ್ಕತ್ತಾ ಪರವಾಗಿ ಪ್ಯಾಟ್‌ಕಮಿನ್ಸ್ 2, ಉಮೇಶ್ ಯಾದವ್, ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದರು. ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಮಿಂಚಿದ ಪ್ಯಾಟ್ ಕಮಿನ್ಸ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

12ನೇ ವರ್ಷದ ಸವಿನೆನಪು



ಎಂ. ರಾಜಣ್ಣ
7.4.2010

ಇಂದಿಗೆ ನೀವು ನಮ್ಮನ್ನಗಲಿ 12 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ತಾಯಿ: ಶ್ರೀಮತಿ ಪುಟ್ಟತಾಯಮ್ಮ
ಪತ್ನಿ: ಲಕ್ಷ್ಮಿ, ಸಹೋದರರು, ಸಹೋದರಿಯರು ಹಾಗೂ ಕುಟುಂಬವರ್ಗದವರು.
ಎಂ. ದಯಾನಂದ, ಮೈಸೂರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಪುಟ್ಟಮ್ಮ

ಇವರು ದಿನಾಂಕ 30.03.2022 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 09.04.2022 ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗೃಹ ಹುಣಸೂರು ತಾ॥ ಬಿಳಿಕೆರೆ ಗ್ರಾಮ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು:
ಮೃತರ ಹೆಣ್ಣು ಮಕ್ಕಳು, ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

Vidyavardhaka Sangha (R)
VIDYAVARDHAKA POLYTECHNIC
Vidyavardhaka Engineering College Campus,
3rd Stage, Gokulam, Mysore-570002 | Telefax: 0821-2419190
Email : vvpmysore@gmail.com | website : www.vvpolytechnic.ac.in

Date: 06-04-2022

FACULTY REQUIRED

Lecturer in the Dept. of CS, EC & ME

Qualification: **BE 1st Class** in respective branches

Please submit the application addressed to the Principal along with the copies of Certificates, Resume & Passport size Photo within 7 days from the date of publication. Salary as per AICTE scale.

Sd/- PRINCIPAL Sd/- HON. PRESIDENT Sd/- HON. SECRETARY

Vidyavardhaka Sangha (Regd), Mysore
Sri K. PUTTASWAMY SCHOOL (K.P. CONVENT)
Vidyavardhaka College of Engineering Campus
Gokulam III Stage, Mysuru – 02. Ph: 2419193
Email : kpconvent@gmail.com

STAFF REQUIRED

Trained, experienced Teachers to teach Primary / Higher Primary / High School Classes in English Medium for the following subjects.
- **PHYSICS / MATHS :** B.Sc / B.Ed (PCM)
- **BIOLOGY / CHEMISTRY :** CBZ - B.Sc. B.Ed
- **COMPUTER TEACHER :** BCA / MCA / M.Sc. Computers
- **NURSERY TEACHER :** Montessori Training

Please submit the application at K.P.Convent at the above address with the copies of Certificates, Resume & Passport size photo within 7 days from date of publication.
Preference will be given for experienced candidate.
Hon. President **Hon. Secretary**

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಹಾಗೂ ಅಭಿವೃದ್ಧಿ ಹೊಂದದಿರುವ ಜಮೀನನ್ನು, ಅದರ ಮಾಲೀಕರಾದ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಶಿವಪುರ ಬಿ.ಎಂ. **"ಶ್ರೀ ಗಂಧದ ಗುಡಿ"** ಎಂಬ ನಾಮಾಂಕಿತದ ಮನೆಯಲ್ಲಿ ವಾಸವಾಗಿರುವ ಶ್ರೀ ಎಸ್.ಕೆ.ಪುಟ್ಟಸ್ವಾಮಿರವರ ಧರ್ಮಪತ್ನಿಯಾದ ಶ್ರೀಮತಿ ಪಾರ್ವತಿರವರಿಂದ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೆ, ಅನುಸೂಚಿ ಸ್ವತ್ತಿನ / ಜಮೀನಿನ ಸಂಬಂಧ ಯಾರಿಗಾದರು ಯಾವುದೇ ರೀತಿಯ ಹಕ್ಕು, ಆಸಕ್ತಿ, ಸ್ವಾಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ **15 (ಹದಿನೈದು)** ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು . ಈ ಮೂಲಕ ತಿಳಿಸಲಾಗಿದೆ ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸ್ವಾಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತ/ಜಮೀನಿನ ಸಂಬಂಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿ ಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು ಅನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದ ಸರ್ವೆ ನಂ.40/5ರ ವಿಸ್ತೀರ್ಣ 1 ಎಕರೆ 05.08 ಗುಂಟೆ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿ ಅಭಿವೃದ್ಧಿ ಹೊಂದದಿರುವ ಜಮೀನಿಗೆ ಚೆಕ್ಕುಬಂದಿ : **ಪೂರ್ವಕ್ಕೆ:** ಲಾ.ಸ.ನಂ.41, **ಪಶ್ಚಿಮಕ್ಕೆ:** ಲಾ.ಸ.ನಂ.68, **ಉತ್ತರಕ್ಕೆ:** ಲಾ.ಹಿ.ನಂ.40/3, **ದಕ್ಷಿಣಕ್ಕೆ:** ಲಾ.ಸ.ನಂ.67.

ವಿ.ವಿ.ಮನುಕುಮಾರ್ ವಕೀಲರು
ನಂ.66/1–ಬಿ1, 1ನೇ ಮಹಡಿ, 3ನೇ ಮುಖ್ಯ ರಸ್ತೆ, 5ನೇ ಕ್ರಾಸ್ ರಸ್ತೆ, ಆರ್.ಕೆ.ಮೆಡಿಕಲ್ಸ್ ಎದುರು, ಸರಸ್ವತಿಪುರಂ– 570009,
ಮೊಬೈಲ್ ನಂ.9448222306

ದಿನಾಂಕ : 05–04–2022 ಸ್ಥಳ : ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಸರ್ವೆ ನಂ. 112/3 ವಿಸ್ತೀರ್ಣ 39 ಗುಂಟೆ ಮತ್ತು ಸರ್ವೆ ನಂ. 112/8 ವಿಸ್ತೀರ್ಣ 8 ಗುಂಟೆ ಕಳಲವಾಡಿ ಗ್ರಾಮ ಜಯಪುರ ಹೋಬಳಿ, ಮೈಸೂರು ತಾಲ್ಲೂಕು ಈ ಜಮೀನನ್ನು ಮೈಸೂರು ನಗರ ರಾಮಕೃಷ್ಣ ನಗರ 1ನೇ ಬ್ಲಾಕ್ 9ನೇ ಅಡ್ಡರಸ್ತೆ, 2/3ನೇ ಮುಖ್ಯ ರಸ್ತೆ, ಮನೆ ನಂ. 345 ರಲ್ಲಿ ವಾಸವಾಗಿರುವ ಶ್ರೀಮತಿ ಎನ್.ವಿ. ವಿಜಯಲಕ್ಷ್ಮಿ ಕೋಂ ಎಂ. ಬಾಲಸುಬ್ರಮಣ್ಯಂ ಮತ್ತು ಶ್ರೀ ಎಂ. ಬಾಲಸುಬ್ರಮಣ್ಯಂ ಬಿನ್ ಎನ್. ನಾಗರಾಜ ಇವರಿಂದ ಕ್ರಯಕ್ಕೆ ಕೊಳ್ಳಲು ನನ್ನ ಕಕ್ಷಿದಾರರು ಕರಾರು ಮಾಡಿಕೊಂಡಿರುತ್ತಾರೆ.

ಷೆಡ್ಯೂಲ್ ಜಮೀನಿನ ಮೇಲೆ ಯಾವುದೇ ವ್ಯಕ್ತಿ / ಸಂಘ / ಬ್ಯಾಂಕ್‌ಗಳು / ಆರ್ಥಿಕ ಸಂಸ್ಥೆಗಳಿಗೆ ಯಾವುದೇ ರೀತಿಯ ಹಕ್ಕು ವಗೈರೆ ಇದ್ದಲ್ಲಿ ಅದನ್ನು ದಾಖಲೆ ಸಹಿತ ಈ ಕೆಳಗೆ ಸಹಿ ಮಾಡಿರುವವರ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಜಮೀನಿನ ಮೇಲೆ ಬೇರೆ ಯಾರಿಗೂ ಯಾವುದೇ ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

1) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕಳಲವಾಡಿ ಗ್ರಾಮದ ಸರ್ವೆ ನಂ. 112/3 (ಹಳೇ ನಂ. 112/5) ವಿಸ್ತೀರ್ಣ 0.39 ಎಕರೆ (ಮುವತ್ತೊಂಬತ್ತು ಗುಂಟೆ) ಆಕಾರ ರೂ. 1.02 ಇದಕ್ಕೆ ಚಕ್ಕುಬಂದಿ ಪೂರ್ವಕ್ಕೆ: ಬಸವನಾಯಕ ರವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 112/8 ರ ಜಮೀನು, ಉತ್ತರಕ್ಕೆ: ಹನುಮಂತನಾಯಕ ರವರ ಜಮೀನು, ದಕ್ಷಿಣಕ್ಕೆ: ರಸ್ತೆ.

2) ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕಳಲವಾಡಿ ಗ್ರಾಮದ ಸರ್ವೆ ನಂ. 112/8 (ಹಳೇ ನಂ. 112/4) ವಿಸ್ತೀರ್ಣ 0.08 ಎಕರೆ (ಎಂಟು ಗುಂಟೆ) ಆಕಾರ ರೂ. 0.22 ಇದಕ್ಕೆ ಚಕ್ಕುಬಂದಿ ಪೂರ್ವಕ್ಕೆ: ಜೆ. ಪುಟ್ಟಸ್ವಾಮಿ ರವರ ಜಮೀನು, ಪಶ್ಚಿಮಕ್ಕೆ: ನಾಲಾ ರಸ್ತೆ, ಉತ್ತರಕ್ಕೆ: ಶ್ರೀ ಮೂರ್ತಿರವರ ಜಮೀನು, ದಕ್ಷಿಣಕ್ಕೆ: ರಸ್ತೆ.

ಸಹಿ/– ಬಿ.ಎಂ. ಶಿವಸ್ವಾಮಿ, ವಕೀಲರು,
KAR /883/88, ನಂ. 1127/2ಎ, ಒಂದನೇ ಕ್ರಾಸ್, ವಾಣಿವಿಲಾಸ ರಸ್ತೆ, (ಆರ್.ಟಿ.ಓ ಹಿಂಭಾಗ), ಚಾಮರಾಜಪುರಂ, ಮೈಸೂರು–570 005.
Mob: 9448505433. Email: bmsswamy@gmail.com
ದಿನಾಂಕ: 06–04–2022

ಕರ್ನಾಟಕ ಸರ್ಕಾರ

(ಧಾರ್ಮಿಕ ದತ್ತಿ ಇಲಾಖೆ)

ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯ

ಕಾರ್ಯನಿರ್ವಾಹಣಾಧಿಕಾರಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು 570011
ದೂರವಾಣಿ ಸಂಖ್ಯೆ: 0821-2590027 ಇ-ಮೇಲ್: eochamunditemple@gmail.com

ಎಸ್.ಸಿ.ಟಿ(1) ಸಿ.ಆರ್:23/2021/22 ದಿನಾಂಕ: 05.04.2022

ಮರು ಟೆಂಡರ್–ಕಂ–ಹರಾಜು ಪ್ರಕಟಣೆ

ಚಾಮುಂಡಿಬೆಟ್ಟ, ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಲ್ಲಿ ವಿವಿಧ ಗುತ್ತಿಗೆ ಹಕ್ಕನ್ನು 2022–2023 ನೇ ಸಾಲಿನ (11 ತಿಂಗಳ ಅವಧಿಗೆ) ಬಹಿರಂಗ ಮರು ಟೆಂಡರ್–ಕಂ–ಹರಾಜು ನಡೆಸಲಾಗುವುದು, ಆಸಕ್ತರು ದಿನಾಂಕ: 12.04.2022ರಂದು ಮಧ್ಯಾಹ್ನ 1.00 ಗಂಟೆಯೊಳಗಾಗಿ ಟೆಂಡರ್‌ಗಳನ್ನು ಈ ಕಛೇರಿಗೆ ಸಲ್ಲಿಸುವುದು, ಮಧ್ಯಾಹ್ನ 4.00 ಗಂಟೆಗೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ದಾಸೋಹ ಭವನದ ಮುಂಭಾಗದಲ್ಲಿ ಬಹಿರಂಗ ಹರಾಜು ನಡೆಸಲಾಗುವುದು, ಹರಾಜು ನಂತರ ಸಂಬಂಧಪಟ್ಟ ಟೆಂಡರ್‌ಗಳನ್ನು ತೆರೆಯಲಾಗುವುದು, ಮರು ಟೆಂಡರ್–ಕಂ–ಹರಾಜು ಎರಡರಲ್ಲಿ ಯಾವುದೇ ಹೆಚ್ಚು ಮೊತ್ತಕ್ಕೆ ಅಖೈರಾಗುವುದು ಅವರಿಗೆ ಬಿಡ್ಡು ನಿಲ್ಲುವುದು. ರೂ.100–00(ಒಂದು ನೂರು ರೂಪಾಯಿ) ಗಳನ್ನು ಪಾವತಿಸಿ ಟೆಂಡರ್ ನಮೂನೆ ಮತ್ತು ಷರತ್ತುಗಳನ್ನು ಪಡೆಯಬಹುದು. ಆಸಕ್ತರು ನಿಗದಿತ ಭದ್ರತಾ ಠೇವಣಿಗೆ ಡಿ.ಡಿ ಪಡೆದು ಲಗತ್ತಿಸಿ ಟೆಂಡರ್ ಸಲ್ಲಿಸಬಹುದು. ಟೆಂಡರ್–ಕಂ–ಹರಾಜು ನಿಯಮ ನಿಭಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರಸಂ	ಗುತ್ತಿಗೆ ವಿವರ	ಭದ್ರತಾ ಠೇವಣಿ
1	ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗದಲ್ಲಿ ಭಕ್ತಾಧಿಗಳು ಒಡೆಯುವ ಇಡುಗಾಯಿಯನ್ನು ತೆಗೆದುಕೊಂಡು ಸ್ಥಳವನ್ನು ಸ್ವಚ್ಛ ಮಾಡುವ ಗುತ್ತಿಗೆ ಹಕ್ಕು	50,000-00

ಷರತ್ತು: 1. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ನಿಯಮಗಳು 2002ರ ನಿಯಮ 31(12)ರ ಪ್ರಕಾರ ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದ ದೇವಾಲಯದಲ್ಲಿ ಹಿಂದುಗಳಲ್ಲದವರಿಗೆ ಗುತ್ತಿಗೆಯನ್ನು ನೀಡತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಪ್ರಸ್ತುತ ಟೆಂಡರ್‌ನಲ್ಲಿ ಹಿಂದುಗಳಲ್ಲದವರು ಕಡ್ಡಾಯವಾಗಿ ಭಾಗವಹಿಸುವಂತಿಲ್ಲ,

2.ನಿಗದಿಯಾದ ಟೆಂಡರ್ ಮೊತ್ತಕ್ಕೆ ಸರ್ಕಾರದಿಂದ ನಿಗಧಿಪಡಿಸುವ ಜಿ.ಎಸ್.ಟಿ. ಮೊತ್ತವನ್ನು ಕಡ್ಡಾಯವಾಗಿ ಸೇರಿಸಿ ಪಾವತಿಸತಕ್ಕದ್ದು.

ಸಹಿ/–ಕಾರ್ಯನಿರ್ವಾಹಕಾಧಿಕಾರಿ
ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ,

ಪಟ್ಟಣ ಪಂಚಾಯಿತಿ ಕಾರ್ಯಾಲಯ, ವಿರಾಜಪೇಟೆ, ಕೊಡಗು ಜಿಲ್ಲೆ–571218

ನಂ.ಪ.ಪಂ.ವಿ/ ಕ.ನಿ/ಹರಾಜು–2/2022–23 ದಿನಾಂಕ: 06–03–2022

"ವಾರ್ಷಿಕ ಹರಾಜು ಪ್ರಕಟಣೆ"

ಈ ಮೂಲಕ ಸಾರ್ವಜನಿಕರಿಗೆ ಪ್ರಕಟಿಸುವುದೇನೆಂದರೆ, ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಸೇರಿದ 2022–23ನೇ ಸಾಲಿಗೆ ಈ ಕೆಳಕಂಡ ಬಾಪ್ತುಗಳಿಗೆ ವಾರ್ಷಿಕ ಹರಾಜು ಪ್ರಕ್ರಿಯೆಯನ್ನು ದಿನಾಂಕ: 12/04/2022 ರಂದು ಮಂಗಳವಾರದಂದು ಪೂರ್ವಾಹ್ನ 11.00 ಗಂಟೆಗೆ ಪಟ್ಟಣ ಪಂಚಾಯಿತಿ ಕಛೇರಿಯ ಪುರಭವನದಲ್ಲಿ ಬಹಿರಂಗ ಹರಾಜು ಮೂಲಕ ವಿಲೇ ಪಡಿಸಲಾಗುವುದು. ಇಚ್ಛೆಯುಳ್ಳವರು ಷರತ್ತಿಗೊಳಪಟ್ಟು ದಿನಾಂಕ:11/04/2022ರಂದು ಸಂಜೆ 5.00 ಗಂಟೆಯೊಳಗಾಗಿ ಕಛೇರಿ ಸಮಯದಲ್ಲಿ ಇ.ಎಂ.ಡಿ. ಮೊತ್ತವನ್ನು ಡಿ.ಡಿ ಮೂಲಕ ಪಾವತಿಸಿ ಹರಾಜಿನಲ್ಲಿ ಭಾಗವಹಿಸಿ ಸವಾಲು ಮೂಲಕ ಹಕ್ಕನ್ನು ಪಡೆದುಕೊಳ್ಳಬಹುದಾಗಿದೆ.

"ಹರಾಜಿಗೆ ಇಡಲಾದ ಮಳಿಗೆಗಳ ವಿವರಗಳು"

ಕ್ರ.ಸಂ.	ವಿವರ	ಮಳಿಗೆ ಸಂಖ್ಯೆ	ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ)
1.	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ (2 ನೇ ಕರೆ)	02	50,000/–
2.	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ (2 ನೇ ಕರೆ)	03	50,000/–
3.	ಎ.ಪಿ.ಜೆ.ಎ ಕಲಾಂ ರಸ್ತೆಯಲ್ಲಿರುವ ಹಸಿ ಮೀನು ಮಳಿಗೆ (2 ನೇ ಕರೆ)	07	50,000/–
4.	ಎ.ಪಿ.ಜೆ.ಎ ಕಲಾಂ ರಸ್ತೆಯಲ್ಲಿರುವ ಹಸಿ ಮೀನು ಮಳಿಗೆ (2 ನೇ ಕರೆ)	12	50,000/–

ಇ.ಎಂ.ಡಿ ಮೊತ್ತವನ್ನು ಪಾವತಿಸಿರುವವರಿಗೆ ಮಾತ್ರ ಸಭಾಂಗಣಕ್ಕೆ ಪ್ರವೇಶವನ್ನು ನೀಡಲಾಗುವುದು ಸಾರ್ವಜನಿಕರಿಗೆ ಅವಕಾಶವಿರುವುದಿಲ್ಲ. ಷರತ್ತುಗಳನ್ನು ಪಟ್ಟಣ ಪಂಚಾಯಿತಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಸಹಿ/– (ಶ್ರೀಮತಿ.. ಸುಶ್ಮಿತ ಟಿ.ಆರ್) ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ವಿರಾಜಪೇಟೆ
ಸಹಿ/–(ಶ್ರೀ. ಎಂ.ಕೆ ಕುಟ್ಟಪ್ಪ) . ಉಪಾಧ್ಯಕ್ಷರು, ಪಟ್ಟಣ ಪಂಚಾಯಿತಿ, ವಿರಾಜಪೇಟೆ
ಸಹಿ/–(ಶ್ರೀ. ಚಂದ್ರಕುಮಾರ್ ಎ) ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ವಿರಾಜಪೇಟೆ

ಕರ್ನಾಟಕ ಸರ್ಕಾರ

ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ
ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ, ಮೈಸೂರು 570 010
ದೂರವಾಣಿ ಸಂ: 0821–2590027, 2590082 e-mail:- eochamunditemple@gmail.com
ಸಂ: ಎಸ್.ಸಿ.ಟಿ: 5 ಸಿಆರ್:12/2012–13 ದಿನಾಂಕ: 04.04.2022

ಇ–ಹರಾಜು–ಕಂ–ಬಹಿರಂಗ ಹರಾಜು ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು, ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಸೇರಿದ ಮೈಸೂರು ನಗರದ ಎಂ.ಜಿ. ರಸ್ತೆಯ (ಜೆ.ಎಸ್.ಎಸ್. ಆಸ್ಪತ್ರೆ) ಬಳಿಯಲ್ಲಿರುವ ದಿವಾನ್ ಪೂರ್ಣಯ್ಯ ಛತ್ರದ ಕಟ್ಟಡದಲ್ಲಿ ಒಟ್ಟು 7 (ನೆಲ ಮಹಡಿಯಲ್ಲಿ 3 ಮತ್ತು ಒಂದನೇ ಮಹಡಿಯಲ್ಲಿ 4) ಅಂಗಡಿಗಳು ಮಳಿಗೆಗಳು ಖಾಲಿಯಿದ್ದು, ಅವುಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ನಿಯಮಗಳು 2002 ರ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಕಂ.ಇ: 66/ ಮುಸೇವಿ: 2017 ದಿನಾಂಕ: 24.12.2018ರ ನಿಯಮ 31(2) ರಲ್ಲಿ 5 ವರ್ಷದ ಅವಧಿಗೆ ಕಟ್ಟಡವನ್ನು ಬಾಡಿಗೆ ಆಧಾರದಲ್ಲಿ ಗುತ್ತಿಗೆ ನೀಡುವ ನಿಯಮದನ್ವಯ ಕರ್ನಾಟಕ ಸರ್ಕಾರದ ಇ–ಹರಾಜು ಕಂ ಬಹಿರಂಗ ಹರಾಜು ನಡೆಸಲಾಗುವುದು ವಿವರಗಳು ಇಂತಿದೆ.

ಮಳಿಗೆ ವಿಸ್ತೀರ್ಣದ ವಿವರ ಇಂತಿದೆ

ಕ್ರ.ಸಂ	ಮಳಿಗೆ ಇರುವ ಸ್ಥಳ	ಮಳಿಗೆ ವಿವರ	ಮಳಿಗೆ ಅಳತೆ	ಬಿಲ್ ಮೌಲ್ಯ
1	ಮೈಸೂರು ನಗರ ಎಂ.ಜಿ. ರಸ್ತೆಯ ದಿವಾನ್ ಪೂರ್ಣಯ್ಯ ಸ್ಮಾರಕ ಭವನದ ಹಿಂಭಾಗದ ಮಳಿಗೆಗಳು	ನೆಲ ಅಂತಸ್ತು–3	ಉ.ದ.10.70 ಅಡಿ ಪೂ.ಪ.11.50 ಅಡಿ	ಬಿಡ್ ಚೇಂಜ್ ಬೆಲೆ ರೂ.100/–
		ಒಂದನೆ ಮಹಡಿ–4	ಉ.ದ.22.40 ಅಡಿ ಪೂ.ಪ. 15.40 ಅಡಿ	

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: ಇ–ಹರಾಜು ಪ್ರಾರಂಭವಾಗುವ ದಿನಾಂಕ ಮತ್ತು ಸಮಯ: 05.04.2022 ಸಂಜೆ 5.00 ಗಂಟೆಯ ನಂತರ. ಇ–ಹರಾಜಿನಲ್ಲಿ ಇಚ್ಛೆಯುಳ್ಳವರು ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ: 22.04.2022 ಸಂಜೆ 5.00 ಗಂಟೆಯವರೆಗೆ. ಇ–ಹರಾಜು ಲೈವ್ ಬಿಡ್ಡಿಂಗ್ ಪ್ರಾರಂಭವಾಗುವ ದಿನಾಂಕ ಹಾಗೂ ಮುಕ್ತಾಯವಾಗುವ ದಿನಾಂಕ ಮತ್ತು ಸಮಯ: 28.04.2022 29.04.2022 ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆ (5 ನಿಮಿಷ ಡೆಲ್ಟಾ ಸಮಯ). ಬಹಿರಂಗ ಹರಾಜು ನಡೆಯುವ ದಿನಾಂಕ, ಸಮಯ & ಸ್ಥಳ: 04.05.2022 ಸಂಜೆ 4.00 ಗಂಟೆ ಛತ್ರದ ಆವರಣ.

ಇ–ಹರಾಜು ನಿಯಮ ನಿಬಂಧನೆಗಳನ್ನು ಮತ್ತು ಷರತ್ತುಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು: 1) http://eprockarnataka.gov.in ನಲ್ಲಿ ಹಾಗೂ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಕಛೇರಿ ವೇಳೆಯಲ್ಲಿ ಪಡೆಯಬಹುದು. **2)** EMD ಮೊಬಲಗು ರೂ. **50,000–00** (ಐವತ್ತು ಸಾವಿರ ರೂಪಾಯಿ ಮಾತ್ರ) ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬಹುದು. **3)** EMD ಯು ಇ–ಹರಾಜು ನ್ಯಾಯಸಮ್ಮತ ಮಾನ್ಯತಾ ಅವಧಿಗಿಂತ 45 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು. **4)** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ http://eprockarnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. **5)** ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ನಿಯಮಗಳು 2002ರ ನಿಯಮ 31 (12)ರ ಪ್ರಕಾರ ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದ ದೇವಾಲಯದಲ್ಲಿ ಹಿಂದುಗಳಲ್ಲದವರಿಗೆ ಗುತ್ತಿಗೆಯನ್ನು ನೀಡತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಪ್ರಸ್ತುತ ಟೆಂಡರ್‌ನಲ್ಲಿ ಹಿಂದುಗಳಲ್ಲದವರು ಕಡ್ಡಾಯವಾಗಿ ಭಾಗವಹಿಸುವಂತಿಲ್ಲ. **6)** ದಿನಾಂಕ: 04.05.2022 ರಂದು ಮಧ್ಯಾಹ್ನ 4.00 ಗಂಟೆಗೆ ಪೂರ್ಣಯ್ಯ ಛತ್ರದ ಆವರಣದಲ್ಲಿ ಅಂಗಡಿ ಮಳಿಗೆಗಳ ಬಹಿರಂಗ ಹರಾಜು ನಡೆಸಲಾಗುವುದು. ಸದರಿ ಹರಾಜಿನಲ್ಲಿ ನಿಲ್ಲುವ ಹೆಚ್ಚಿನ ಬಾಡಿಗೆಯ ಬಿಡ್ ಮೊಬಲಗು ಹಾಗೂ ಇ–ಹರಾಜಿನಲ್ಲಿ ಬಿಡ್ ಮೊಬಲಗನ್ನು ಪರಶೀಲಿಸಿ ಈ ಎರಡು ಪ್ರಕ್ರಿಯೆಗಳಲ್ಲಿ ಹೆಚ್ಚಿನ ಬಾಡಿಗೆ ನಮೂದಿಸಿವಂತಹ ಬಾಡಿಗೆದಾರರನ್ನು ಯಶಸ್ವಿ ಬಿಡ್‌ದಾರರನ್ನಾಗಿ ಪರಿಗಣಿಸಲು ಕ್ರಮ ವಹಿಸಲಾಗುವುದು. **7)** ನಿಗದಿಯಾದ ಟೆಂಡರ್‌ನ ಬಾಡಿಗೆ ಮೊತ್ತಕ್ಕೆ ಸರ್ಕಾರದಿಂದ ನಿಗಧಿಪಡಿಸುವ ಜಿ.ಎಸ್.ಟಿ, (GST) ಮೊತ್ತವನ್ನು ಕಡ್ಡಾಯವಾಗಿ ಸೇರಿಸಿ ಪಾವತಿಸತಕ್ಕದ್ದು.

ಸಹಿ/– ಕಾರ್ಯನಿರ್ವಾಹಕಾಧಿಕಾರಿ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ

DIPR/DDMYS/MCA/09/2022-23